ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 6 ಸಂಚಿಕೆ 05

ಜನವರಿ 29, 2012

ಪುಟ 16

ರೂ. 5/-

g: janashakthi.wordpress.com e-mail : js_weekly@yahoo.com



ಸಮಾನತೆ V/s ಜಾತಿ ಬೇಧ ಪಂಕ್ತಿ ಬೇಧ





...ಊಟಕ್ಕಾಗಿ ಬಂದ ಜನರನ್ನು ವಿಂಗಡಿಸಲು ಅವರು ತೊಟ್ಟ ಮೇಲಂಗಿಗಳನ್ನು ಬಿಚ್ಚಿ ಬರೀ ಮೈನಲ್ಲಿ ಊಟಕ್ಕೆ ಕುಳಿತುಕೊಳ್ಳಬೇಕು ಎಂಬ ಕಟ್ಟುಪಾಡಿನ ಜೊತೆಯಲ್ಲಿ ಸಂಧ್ಯಾವಂದನೆ.....

ಶಾಸ್ತ್ರಾಂಧತೆ V/s ಸಂವಿಧಾನ ಬದ್ಧತೆ



ಅಲ್ಪಸಂಖ್ಯಾತರಲ್ಲಿ ಅಪನಂಬಿಕೆ ಬ್ರಾಹ್ಮಣ್ಯಕ್ಕೆ ವಿಧೇಯತೆ

ದಕ್ಷಿಣ ಕನ್ನಡದ ಸ್ಥಿತ್ಯಂತರಗಳು



ಮಂಡ್ಯ: ಹೀನಾಯ 'ಹತ್ಯೆ'ಯಲ್ಲಿ 'ಮರ್ಯಾದೆ' ಎಲ್ಲಿದೆ ?

ಆರ್ಥಿಕ ಕುಸಿತ ಮುನ್ನೆಚ್ಚರಿಕೆ ಮರೆತ ಸರ್ಕಾರ

...ಭಾರತದ ಸಂವಿಧಾನವನ್ನು ಒಪ್ಪಿಕೊಂಡಿರುವ ಮತ್ತು ಅದರ ಅಡಿಯಲ್ಲೇ ಬರುವ ಎಲ್ಲಾ ಧಾರ್ಮಿಕ ಸ್ವಾತಂತ್ರ್ಯವು ಅದಕ್ಕೆ ಬದ್ಧವಾಗಿರಬೇಕಾಗುತ್ತದೆ

"ಧಾರ್ಮಿಕ ಸ್ವಾತಂತ್ರ್ಯವೆಂದರೆ ತಾರತಮ್ಯದ ಸಮರ್ಥನೆಯಲ್ಲ"


ಸಂದರ್ಶನದಲ್ಲಿ ಸಂವಿಧಾನ ತಜ್ಞ, ಹಿರಿಯ ವಕೀಲರಾದ ಪ್ರೊ. ರವಿವರ್ಮ ಕುಮಾರ್



ಸಂದರ್ಶನ

"ಧಾರ್ಮಿಕ ಸ್ವಾತಂತ್ರ್ಯವೆಂದರೆ ತಾರತಮ್ಯದ ಸಮರ್ಥನೆ ಅಲ್ಲ"

- ಪ್ರೊ. ರವಿವರ್ಮಕುಮಾರ್



ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಆಚರಣೆಯಲ್ಲಿರುವ ಪಂಕ್ತಿಬೇಧ (ವಿಭಿನ್ನ ಜಾತಿಯ ಜನರಿಗೆ ವಿಭಿನ್ನ ಸಾಲಿನಲ್ಲಿ ಕುಳ್ಳಿಸಿ ಊಟ ಬಡಿಸುವ ಪದ್ಧತಿ) ವು ಮಾನವ ಸಮಾಜಕ್ಕೆ ಮಾಡುವ ಅಪಮಾನದ ಸಂಕೇತವಾಗಿದೆ. ಇತ್ತೀಚಿಗೆ ಗೌಡಸಾರಸ್ವತ ಜನಾಂಗಕ್ಕೆ ಸೇರಿದ ಮಹಿಳಾ ಅಧಿಕಾರಿಯೊಬ್ಬರು ತನಗೆ ಗೊತ್ತಿಲ್ಲದೆ 'ಬ್ರಾಹ್ಮಣರಿಗೆ ಮೀಸಲಾದ ಪಂಕ್ತಿಯಲ್ಲಿ' ಊಟಕ್ಕೆ ಕುಳಿತಾಗ ಮಠದ ಹಿತಾಸಕ್ತಿಗಳು ಅವರನ್ನು ಪಂಕ್ತಿಯಿಂದಲೇ ಎಬ್ಬಿಸಿ ಅಪಮಾನ ಮಾಡಿದರು. ಇದು ಅಮಾನವೀಯ ಮತ್ರವಲ್ಲ, ಸಂವಿಧಾನ ವಿರೋಧಿ ಕೂಡ. ಇಂತಹ ಸನ್ನಿವೇಶದಲ್ಲಿ ಉಡುಪಿ ಮಠವೂ ಸೇರಿದಂತೆ ರಾಜ್ಯದ ವಿವಿದೆಡೆ ಆಚರಿಸಲ್ಪಡುವ ಇಂತಹ ಅನಿಷ್ಠ ಪದ್ಧತಿಗಳು ತೊಲಗಬೇಕೆನ್ನುವುದು ಸಿಪಿಐ(ಎಂ) ಮತ್ತು ಜನತೆಯ ಆಗ್ರಹ. ಜನವರಿ-26 ರಂದು ಈ ಬೇಡಿಕೆಯನ್ನಿಟ್ಟುಕೊಂಡು ನಡೆಸುತ್ತಿರುವ ' ಉಡುಪಿ ಚಲೋ ' ಕಾರ್ಯಕ್ರಮ ಮುಂದಿನ ಎಲ್ಲಾ ಇಂತಹ ತಾರತಮ್ಯಗಳ ವಿರುದ್ಧದ ಹೋರಾಟಗಳಿಗೆ ಮುನ್ನಡೆಯಾಗಬಹುದು. ಈ ಹೋರಾಟದ ಹಿನ್ನೆಲೆಯಲ್ಲಿ ' ರಾಜ್ಯದ ಹಿರಿಯ ವಕಿಲರು ಸಂವಿಧಾನ ತಜ್ಞರು ಆದ ಪ್ರೊ ರವಿವರ್ಮ ಕುಮಾರ್ ಅವರನ್ನು 'ಜನಶಕ್ತಿ' ಸಂದರ್ಶನ ನಡೆಸಿತು. ಅವರ ಸಂಕ್ಷಿಪ್ತ ವಿವರ ಇಲ್ಲಿದೆ.

ಸಂದರ್ಶನ: ಎಸ್.ವೈ. ಗುರುಶಾಂತ್ ಮತ್ತು ಕೆ. ಮಹಾಂತೇಶ್


ಜನಶಕ್ತಿ : ಸಮಾಜದಲ್ಲಿ ಆಚರಣೆಯಲ್ಲಿರುವ ಇಂತಹ ಪಂಕ್ತಿಬೇಧ – ಜಾತಿ ತಾರತಮ್ಯಗಳ ಬಗ್ಗೆ ಸಂವಿಧಾನ ವಿಶ್ಲೇಷಣೆ ಏನು ?

ಪ್ರೊ ರವಿವರ್ಮಕುಮಾರ್ : ಭಾರತದ ಸಂವಿಧಾನ ಸಮಾನತೆಯ ವಿಷಯವಾಗಿ ಎರಡು ಹೆಜ್ಜೆಗಳಲ್ಲಿ ತನ್ನ ಸಾಧನೆ ಮಾಡಲಾಗಿದೆ. 1) ಈಗಾಗಲೇ ಇರುವ ಅಪಮಾನಗಳನ್ನು ತಡೆಯುವುದು. 2)ಅಂತಹ ಅಪಮಾನಗಳಿಂದು ಂಟಾಗಿರುವ ಪರಿಣಾಮಗಳನ್ನು ಸರಿಪಡಿಸುವುದು. ಇಂತಹ ಅಪಮಾನಗಳಿಂದ ನೊಂದಿರುವ ಜನತೆಗೆ ಮತ್ತು ಅಸಮಾನತೆಗಳಿಗೆ ಪರಿಹಾರ ಸಿಗಬೇಕು. ಅಂದರೆ ಸಮಾನ ಅವಕಾಶಗಳು, ಸೌಲತ್ತುಗಳನ್ನು ಕಲ್ಪಿಸಿ ಅವರನ್ನು ಸಮಾನರನ್ನಾಗಿ ಕಾಣಬೇಕು.

ಈ ಹಿನ್ನೆಲೆಯಲ್ಲಿ ಸಂವಿಧಾನ ಕರ್ತೃ ಡಾ॥ ಬಿ.ಆರ್.ಅಂಬೇಡ್ಕರ್ ಎರಡು ಪ್ರಮುಖ ಘಟ್ಟಗಳನ್ನು ಗುರುತಿಸುತ್ತಾರೆ.

1) ಸಾಮಾಜಿಕ ಒಡನಾಟ(connubium)

2) ಸಹಪಾನ ಆಹಾರ ಪದ್ಧತಿ(commensality)



ಸಾಮಾಜಿಕ ಒಡನಾಟವೆಂದರೆ ಒಂದು ಸಮಾಜ ಎಂದ ಮೇಲೆ ಅಲ್ಲಿ ಕೊಡುವ ಮತ್ತು ತೆಗೆದುಕೊಳ್ಳುವ ಪ್ರಕ್ರಿಯೆ ಇರಬೇಕು. ಮದುವೆ ಎನ್ನುವ ಸಾಮಾಜಿಕ ಒಡನಾಟವಿರಬೇಕು. ಆ ಮೂಲಕ ಒಂದು ಭಾಂದವ್ಯ ಏರ್ಪಡುತ್ತದೆ. ಈ ಒಡನಾಟ ಸಾಧ್ಯವಾಗಬೇಕಾದರೆ ನಮ್ಮ ಸಮಾಜದಲ್ಲಿ ಹೆಚೆಚ್ಚು ಅಂತರಜಾತೀಯ ಮದುವೆಗಳು ಆಗಬೇಕು.

ಮತ್ತೊಂದು ನಮ್ಮ ಸಮಾಜದಲ್ಲಿ ನಡೆಯುವ ಪ್ರಮುಖ ಒಡನಾಟವೆಂದರೆ, 'ಆಹಾರ ಪದ್ಧತಿ' ಸಮಾಜದಲ್ಲಿ ಪ್ರತಿನಿತ್ಯ ಜರುಗುವ ಹಬ್ಬ-ಹರಿದಿನಗಳ 'ಹಬ್ಬದೂಟ'. ಇಲ್ಲಿ ಸಮಾಜದ ಎಲ್ಲರೂ ಜಾತಿ-ಬೇಧ ಎಂಬ ತಾರತಮ್ಯವಿಲ್ಲದೆ ಒಂದಾಗಿ ಕುಳಿತು ಊಟ ಮಾಡುವ ವ್ಯವಸ್ಥೆಯಿರಬೇಕು. ಆಗ ಮಾತ್ರ ಈ ಸಾಮಾಜಿಕ ಸಮಾನತೆಯು ಸಾಕಾರಗೊಳಿಸುತ್ತದೆ.

ಅಂದರೆ ಭಾರತದ ಸಂವಿಧಾನವು ಇಂತಹ ಸಮಾನತೆಯ ನಿರ್ಮಾಣಕ್ಕಾಗಿ ತನ್ನೊಳಗೆ ನಿರ್ದಿಷ್ಟ ನಿಯಮಗಳನ್ನು ಕಲ್ಪಿಸಿದೆ. (ಅಮೇರಿಕಾದಲ್ಲಿ ಇಂತಹ ನಿಯಮಗಳಿಲ್ಲದಿದ್ದರೂ ಅಲ್ಲಿ ಸಮಾನತೆಯನ್ನು ಜಾರಿ ಮಾಡಲಾಯಿತು. ಬ್ಲಾಕ್ಸ ನೋಡಿ)

ಆದ್ದರಿಂದ ಭಾರತದ ಸಂವಿಧಾನವನ್ನು ಒಪ್ಪಿಕೊಂಡಿರುವ ಮತ್ತು ಅದರ ಅಡಿಯಲ್ಲೇ ಬರುವ ಎಲ್ಲಾ 'ಧಾರ್ಮಿಕ ಸ್ವಾತಂತ್ರ್ಯ'ವು ಅದಕ್ಕೆ ಬದ್ಧವಾಗಿರಬೇಕಾಗುತ್ತದೆ. ಹಾಗಾಗಿಯೇ ಭಾರತದ ಸಂವಿಧಾನದ ಪರಿಚ್ಛೇದಗಳಾದ 14, 15 ಮತ್ತು 17 ಗಳು ಆಚರಣೆಯಲ್ಲಿರುವ ಎಲ್ಲಾ ರೀತಿಯ ಪಂಕ್ತಿಬೇಧಗಳನ್ನು ಸಂಪೂರ್ಣವಾಗಿ ನಿಷೇಧಿಸಿವೆ. ಮಾತ್ರವಲ್ಲ ಕಲಂ 17 ರ ಪ್ರಕಾ
ಅಂತಹ ಯಾವುದೇ ತೆರನಾದ ತಾರತಮ
ಆಚರಣೆಗಳು ಕೂಡ 'ಅಸ್ಪೃಶ್ಯ' ಆಚರಣೆ ಎಂ
ಪರಿಗಣಿಸಬೇಕು ಎನ್ನುತ್ತದೆ.

ಜನಶಕ್ತಿ : ಕೆಲವು ಧಾರ್ಮಿಕ ಗುರುಗ
ಇದನ್ನು ನಂಬಿಕೆ ಮ
ಶಾಸ್ತ್ರದ ನೆಲೆಗಟ್ಟಿನಲ್ಲಿ ಮ
ಧಾರ್ಮಿಕ ಸ್ವಾತಂತ್ರ್ಯ
ಹ ' ಸ ' ರಿ ನ ' ಲ
ಸಮರ್ಥಿಸುತ್ತಿದ್ದಾರೆ ಇ
ಸರಿನಾ ?

ಪ್ರೊ ರವಿವರ್ಮ ಕುಮಾ
: ನಮ್ಮ ಸಂವಿಧಾನದ ಕಲ
25 ರ ಪ್ರಕಾರ ನಮ್ಮ ದೇಶದ
'ಧಾರ್ಮಿಕ ಸ್ವಾತಂತ್ರ್ಯ' ವನ
ಉತ್ಕೃಷ್ಟವಾಗಿ ನೀಡಲಾಗಿ
ಯಾವುದೇ ಪ್ರಜೆ ತನಗೆ ಸ
ಎನಿಸುವ ಧರ್ಮವನ
ಅನುಸರಿಸಬಹುದು, ಸೇರಬಹುದು ಮತ
ಪ್ರಚಾರ ಮಾಡಬಹುದು. ಹೀಗೆ ಮಾಡುವಾ
ಅದರಲ್ಲಿ ಮತಾಂತರ ಮಾಡುವ ಉದ್ದೇಶವ
ಇರಬಹುದು, ಅದು ತಪ್ಪಲ್ಲ. ಯಾಕೆಂದರೆ ಪ್ರಚಾ
ಮಾಡುವ ಉದ್ದೇಶವೇ ಅವರವರ ಧರ್ಮ
ಹೊರಗಿನ ಜನರನ್ನು ಆಕರ್ಷಿಸಬೇಕ
ಎನ್ನುವುದಾಗಿರುತ್ತದೆ.

ಆದರೆ ಹಾಗೆಂದ ಮಾತ್ರಕ್ಕೆ ಮನಸ್ಸಿ
ಬಂದಂತೆ ಯಾವುದೆ ಧಾರ್ಮಿಕ ಪಂಗ
ಅಥವಾ ಗುಂಪು ತಮ್ಮಲಿಯ ಧಾರ್ಮಿ
ಆಚರಣೆಗಳನ್ನು ಮೌಢ್ಯತೆಗಳನ್ನು
ಕಂಧಚಾರಗಳನ್ನು ಜನತೆಯ ಮೇಲೆ ಹೇರಲ
ನಮ್ಮ ಸಂವಿಧಾನ ಅವಕಾಶ ನೀಡುವುದಿಲ್ಲ

ಪುಟ 15

ತಾರತಮ್ಯ ಕೊನೆಗಾಣಿಸಿದ ಅಮೇರಿಕದ ಸುಪ್ರಿಂ ಕೋರ್ಟ್

'ಬ್ರೌನ್ ವರ್ಸಸ್ ಬೋರ್ಡ್ ಆಫ್ ಎಜುಕೇಶನ್' ಎನ್ನುವ ಪ್ರಕರಣವು ಅಮೇರಿಕಾದ ಇತಿಹಾಸದಲ್ಲೇ ಅದೊಂದು ಪ್ರಸಿದ್ಧ ಪ್ರಕರಣ. ಅಮೇರಿಕದಲ್ಲಿ ಅಬ್ರಹಾಂ ಲಿಂಕನ್_ಗುಲಾಮಿ ಪದ್ಧತಿಯನ್ನು ನಿಷೇಧಿಸಿದ ನಂತರ ಎಲ್ಲಾ ಜನರಿಗೂ ಅಂದರೆ ಕರಿಯರಿಗೂ ಸೇರಿ ಸಮಾನ ಶಿಕ್ಷಣ ಅವಕಾಶಗಳು_ಸೌಲಭ್ಯಗಳು ನೀಡಬೇಕೆಂಬ ಬಗ್ಗೆ ಚರ್ಚೆಗಳು ನಡೆದು ಜಾರಿಯಾದವು. ಅಲ್ಲದೆ ಈ ಕುರಿತಂತೆ ಅಮೇರಿಕದ ಸರ್ವೋಚ್ಛ ನ್ಯಾಯಾಲಯ ನೀಡಿದ ತೀರ್ಪೊಂದು ಚರ್ಚೆಗೆ ಗ್ರಾಸವಾಯಿತು. ಆ ತೀರ್ಪಿನಲ್ಲಿ ನ್ಯಾಯಾಲಯವು ಸಮಾನ ಶಿಕ್ಷಣ ಅವಕಾಶಗಳು ಇರಬೇಕೆಂಬುದು ಸರಿ. ಅದರಲ್ಲಿ ಯಾವುದೆ ಭಿನ್ನಾಭಿಪ್ರಾಯವಿಲ್ಲ. ಆದರೆ ಅದು ಒಂದೇ ಪ್ರಕಾರವಾಗಿರಬೇಕು ಎಂದೇನೂ ಇಲ್ಲ ಪ್ರತ್ಯೇಕವಾಗಿಯೂ ಇರಬಹುದು ಅಥವಾ ಒಟ್ಟಿಗಾಗಿಯೂ ಇರಬಹುದು ಎಂದು ಹೇಳಿತ್ತು. ಅದನ್ನು ಪ್ಲಾಸಿ ವರ್ಸಸ್ ವರ್ಗಿಸ್ ಎನ್ನುವ ಪ್ರಕರಣದಲ್ಲಿ 20 ನೇ ಶತಮಾನದಲ್ಲಿ ನ್ಯಾಯವಾದಿ ಶಾರ್ಗುಲ್ ಮಾರ್ಷಲ್ ಎನ್ನುವವರು ಪ್ರಶ್ನಿಸಿದ್ದರು.

ಆಗ ಮಧ್ಯ ಪ್ರವೇಶಿಸಿದ ನ್ಯಾಯಾಧೀಶರು ಹೌದು ಒಂದೇ ತೆರನಾದ ಊಟವನ್ನು ಬೇರೆ ಬೇರೆಯಾಗಿ ಕರಿಯರಿಗೆ_ಬಿಳಿಯರಿಗೆ ಕೊಟ್ಟರೆ ಏನು ತಪ್ಪು ? ಎಂದು ವಕೀಲರನ್ನು ಪ್ರಶ್ನಿಸಿದ್ದರು.

ಆಗ ತನ್ನ ವಾದವನ್ನು ಮಾಡಿದ ಶ್ಯಾರ್ಗುಲ್ ಮಾರ್ಷಲ್ ಮೈಲಾರ್ಡ್. ನೀವು ಹೇಳುವುದು ಹೇಗಿದೆ ಎಂದರೆ ನಿನ್ನೆ ನಾವಿಬ್ಬರೂ ಒಂದೇ ಊಟ ಮಾಡಿದೆವು. ಆದರೆ ವ್ಯತ್ಯಾಸವೆಂದರೆ, ನೀವು ಮಹಡಿಯಲ್ಲಿ ಕುಳಿತು ಊಟ ಮಾಡಿದಿರಿ, ನಾವು ಶೆಲ್ಲರ್ (ಕೆಳಮಹಡಿ)ಯಲ್ಲಿ ಕುಳಿತು ಊಟ ಮಾಡಿದೆ. ಅಂದರೆ ಇದರಿಂದ ಅದು ನಿಮಗೆ ತಾರತಮ್ಯ ಎನಿಸಲಿಲ್ಲವೇ ಎಂದು ಪ್ರಶ್ನಿಸಿದ . ಇದನ್ನು ಕೇಳಿದ ತಕ್ಷಣ ನ್ಯಾಯಾಧೀಶರು ಒಂದು ಕ್ಷಣ ಮೌನರಾದರು. ಕೂಡಲೇ ತಾವು ಮಾಡಿದ ತಪ್ಪನ್ನು ಅರಿತುಕೊಂಡರು. ಮಾತ್ರವಲ್ಲ, ನೀಡುವ ಅವಕಾಶ ಗಳು ಒಂದೇ ತೆರನಾಗಿದ್ದರೂ ಕೂಡ ಅವುಗಳು ಒಂದೇ ರೀತಿಯಲ್ಲಿಬೇಕು ಅವುಗಳನ್ನು ನೀಡುವಾಗ ಯಾವುದೇ ಬೇಧ-ಭಾವ-ತಾರತಮ್ಯಗಳನ್ನು ಮಾಡಬಾರದು ಎಂದು ಐತಿಹಾಸಿಕ ತೀರ್ಪನ್ನು ನೀಡಿದರು.

ಇದು ಅಮೇರಿಕಾದ ಇತಿಹಾಸದಲ್ಲೇ ಒಂದು ಐತಿಹಾಸಿಕ ಪ್ರಕರಣ ಎಂದು ಹೆಸರಾಯಿತು. ಈ ಪ್ರಕರಣ ಅಲ್ಲಿ ಎಷ್ಟೊಂದು ಸ್ಫೂರ್ತಿಯಾಯಿತೆಂದರೆ, ಕರಿಯರ ಕಾಲೋನಿಯಲ್ಲಿರುವ ಮಕ್ಕಳನ್ನು ಬಿಳಿಯರ ಕಾಲೋನಿ ಶಾಲೆಗಳಿಗೆ-ಬಿಳಿಯರ ಕಾಲೋನಿಯಲ್ಲಿರುವ ಮಕ್ಕಳನ್ನು ಕರಿಯರ ಕಾಲೋನಿ ಶಾಲೆಗಳಿಗೆ ಬಸ್‌ಗಳಲ್ಲಿ ಕರೆತಂದು ಶಿಕ್ಷಣ ಕೊಡಿಸುವ ವ್ಯವಸ್ಥೆಯೂ ಜಾರಿಯಾಯಿತು.

ಕನ್ನಡ ವಾರಪತ್ರಿಕೆ

ಸಂಪಾದಕೀಯ

ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ಫ್ಯಾಶಿಸ್ಟರ ಹಲ್ಲೆ

ಸ್ವಾಮಿ ವಿವೇಕಾನಂದರ 150ನೆಯ ಜನ್ಮದಿನಾಚರಣೆಯ ಹಿನ್ನೆಲೆಯಲ್ಲಿ ಅವರ ಬದುಕು, ಚಿಂತನೆಗಳ ಕುರಿತು ಹಲವು ಆಚರಣೆಗಳು, ಚಿಂತನ–ಮಂಥನದ ಪರಾಮರ್ಶೆಗಳು ನಡೆಯುವುದು ಸಹಜ. ಅವರ ಐತಿಹಾಸಿಕ ಹೆಜ್ಜೆ ಗುರುತುಗಳು, ವರ್ತಮಾನದ ಸವಾಲಿನ ಬೆಳಕಿನಲ್ಲಿ ವಿಚಾರಗಳ ಪ್ರಸ್ತುತತೆಯನ್ನು ಅರ್ಥೈಸುವುದು ಈ ಸಂದರ್ಭದ ಅವಕಾಶ ಮತ್ತು ವಿಶೇಷ.

ಆದರೆ ಖ್ಯಾತರೊಬ್ಬರ ಬಗ್ಗೆ ಯಾವುದೇ ವಿಮರ್ಶೆಗಳಿರಕೂಡದೆಂದು , ಕೇವಲ ಆರಾಧನೆಯ, ಅದಕ್ಕಾಗಿ ಕಲ್ಪಿತ ವಿಷಯಗಳೇ ವಿಜೃಂಭಿಸಬೇಕೆಂದು ಒಂದು ವಲಯದಲ್ಲಿ ಬಯಸಲಾಗುತ್ತಿದೆ. ಮಾತ್ರವಲ್ಲ ಅದೇ ಸರಿ ಎಂದೂ ಒತ್ತಾಯಿಸಲಾಗುತ್ತಿದೆ. ಭಿನ್ನ ಅಭಿಪ್ರಾಯಗಳು, ವಸ್ತುಸ್ಥಿತಿಯ ಅನಾವರಣವಾಗಲೀ ಇಂದಿನ ಮಾನವ ಸಮುದಾಯ ಪರಿಗಣಿಸಿಬಹುದಾದ ಚಲನಶೀಲ ಅಂಶಗಳನ್ನು ಗುರುತಿಸಿಕೂಡದೆಂದೂ ಫರ್ಮಾನು ಹೊರಡಿಸುವುದು ಅಂತಹ ಪ್ರತಿಗಾಮಿಗಳಿಂದ ನಡೆದಿದೆ.

ಮುಖ್ಯವಾಗಿ ಇತ್ತೀಚಿಗೆ ನೂರೈವತ್ತರ ಆಚರಣೆಯ ಆರಂಭದ ಸಂದರ್ಭದಲ್ಲಿ ಚಿಂತಕ, ಪತ್ರಕರ್ತ ದಿನೇಶ್ ಅಮೀನ್ ಮಟ್ಟು ಪ್ರಜಾವಾಣಿಯಲ್ಲಿ ಬರೆದ ಲೇಖನ ಅತ್ಯಂತ ಸಮಯೋಚಿತ, ಮಹತ್ವ ಪೂರ್ಣವಾಗಿದೆ. ಆದರೆ ಇದನ್ನು ಒಪ್ಪದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಕಾರ್ಯಕರ್ತರು ಪತ್ರಿಕೆಯ ಹುಬ್ಬಳ್ಳಿ, ಶಿವಮೊಗ್ಗಗಳ ಕಛೇರಿಗಳ ಮೇಲೆ ಧಾಳಿ ನಡೆಸಿರುವುದು ತೀವ್ರ ಖಂಡನೀಯ.

ಮಟ್ಟುರವರ ಲೇಖನದ ಬಗ್ಗೆ ಭಿನ್ನಾಭಿಪ್ರಾಯಗಳಿದ್ದಲ್ಲಿ ಅದನ ‍ ಚಾರಿಕ ಚರ್ಚೆಗಳ ಮೂಲಕ ವ್ಯಕ್ತಪಡಿಸುವುದು ನಾಗರೀಕ ನಡವಳಿಕೆಯಾಗಿದೆ.ಇದೇ ಪ್ರಜಾಸತ್ತಾತ್ಮಕ ವಿಧಾನ. ಆದರೆ ಅದರ ಬದಲು ಬಲದ ಮೂಲಕ ಭಯೋತ್ಪಾದನೆ ನಡೆಸುತ್ತಿರುವುದು ಅಪಾಯದ ಸೂಚನೆಯಾಗಿದೆ. ಸಂಸ್ಕೃತಿ, ಶೀಲ, ಜ್ಞಾನದ ಬಗ್ಗೆ ಮಾತನಾಡುವ ಆರ್.ಎಸ್.ಎಸ್. ಪಡೆಯ ಈ ಗೂಂಡಾಗಿರಿ ಫ್ಯಾಶಿಸ್ಟ್ ಮನೋಭಾವದ ಪ್ರತೀಕವಾಗಿದೆ. ಈ ಫ್ಯಾಶಿಸ್ಟರಿಗೆ ಸತ್ಯದ ದರ್ಶನ ಬೇಕಿಲ್ಲ. ಬದಲಾಗಿ ತಿರುಚುವ, ವಿಕೃತಗೊಳಿಸಿದ ತಮ್ಮ ವಿಚಾರಗಳೇ ವಿವೇಕಾನಂದರೆಂದು ಸಾರುವ ಹುನ್ನಾರದಲ್ಲಿ ದುರುದ್ದೇಶಗಳಿವೆ.

ಸಂಘಪರಿವಾರ ವಿವೇಕಾನಂದರನ್ನು ತನ್ನ ಸಂಕುಚಿತ ವ್ಯಾಖ್ಯಾನದ 'ಹಿಂದುತ್ವ'ದ ಪ್ರತಿಮೆಯನ್ನಾಗಿ ಬಿಂಬಿಸುವುದು ವಿವೇಕಾನಂದರಿಗೆ ಬಗೆದ ಅಪಮಾನ, ದ್ರೋಹ. ವಿವೇಕಾನಂದರು ಮತಾಂಧರಾಗಿರಲಿಲ್ಲ. ಬದಲಾಗಿ ಎಲ್ಲಾ ಧರ್ಮಗಳನ್ನೂ ಅತ್ಯಂತ ಗೌರವಿಸುವ ವಿಶಾಲ ಹೃದಯಿಗಳಾಗಿದ್ದರು. ಮತಾಂಧತೆಯನ್ನೂ ,ಹಿಂದು(ವೈಧಿಕ) ಧರ್ಮದೊಳಗಿನ ಜಾತಿ–ತಾರತಮ್ಯ, ಮೌಢ್ಯತೆ ಮತ್ತು ಸುಲಿಗೆಗಳ ವಿರುದ್ಧ ನಿಷ್ಟುರ ನಿಲುವು ಹೊಂದಿದ್ದರು. ಅಹಾರ ಸೇವನೆ–ಆಹಾರ ಪದ್ಧತಿಯಲ್ಲಿ ಸಸ್ಯಾಹಾರ–ಮಾಂಸಹಾರವೆಂದು ತಾರತಮ್ಯ ಬೇಧ ಮಾಡದೇ ಎಲ್ಲಾ ಜಾತಿಗಳೊಂದಿಗೂ ಬೆರೆತು ಉಣ್ಣುವವಾರಾಗಿದ್ದರು. ತುಳಿತಕ್ಕೊಳಗಾದವರ ಸದಾ ಪಕ್ಷಪಾತಿ, ಜಿಡ್ಡುಗಟ್ಟಿದ ಗತ ಸಂಪ್ರದಾಯಗಳನ್ನು ವಿರೋಧಿಸುತ್ತಾ, ಆಧುನಿಕ ಬೆಳವಣಿಗೆಗಳೊಂದಿಗೆ ಕಲಿಯುವ, ಪ್ರತಿಪಾದಿಸುವ ತುಡಿತ ಹೊಂದಿದ್ದರು. ಇದಕ್ಕೆ ರಾಷ್ಟ್ರದ ಹೆಮ್ಮೆಯ ಭಾರತೀಯ ವಿಜ್ಞಾನ ಸಂಸ್ಥೆಯ ಸ್ಥಾಪನೆಗೆ ಜೇಮ್ ಶೇಟ್ಜಿ ಟಾಟಾಗೆ ನೀಡಿದ ಪ್ರೇರಣೆ ಒಂದು ಜ್ವಲಂತ ಸಾಕ್ಷಿ. 'ಇಸ್ಲಾಂ ದೇಹ ವೇದಾಂತದ ಮೆದುಳು' ಇರಬೇಕೆಂಬ ಅವರ ಖ್ಯಾತ ನಿಲುವು ಎಲ್ಲಾ ಮಾನವರೂ, ಧರ್ಮಗಳೂ, ಸಮಾನ ಅಂತಹ ಅಂತಃಸತ್ವ ಎಲ್ಲರಲ್ಲೂ ಇದೆಯೆಂಬ ನಿಜಾರ್ಥದ ವಿಶಾಲ ಧಾರ್ಮಿಕ ತಿಳುವಳಿಕೆಯಾಗಿತ್ತು.

ಈಗಾಗಲೇ ಹೊರ ಬಂದಿರುವ, ವಿವೇಕಾನಂದರೇ ಬರೆದಿರುವ ಈ ಎಲ್ಲಾ ಅಂಶಗಳನ್ನೇ ದಿನೇಶ್‌ರವರ ಲೇಖನದಲ್ಲಿ ಪರಿಣಾಮಕಾರಿಯಾಗಿ ಪ್ರತಿಪಾದಿಸಿರುವುದು ಸಂಘ ಪರಿವಾರವನ್ನು ಬೆಚ್ಚಿಬೀಳಿಸಿದೆ. ಯಾಕೆಂದರೆ ಧರ್ಮಾಂಧನಲ್ಲದ, ಮತಾಂಧನಲ್ಲದ, ಜಾತಿ ಒಪ್ಪದ, ಚಾತುರ್ವಣ್ಯಕ್ಕೆ ವಿರೋಧವಾಗಿರುವ ಬದಲಾವಣೆ ಬಯಸುವ ನಿಜವಾದ ವಿವೇಕಾನಂದ ನಿಚ್ಚಳವಾಗಿ ಕಾಣುವುದು ಅವರಿಗೆ ಬೇಕಿಲ್ಲ. ಅದು ಸಂಘಪರಿವಾರದ ಹಿಂದುತ್ವದ ಕೋಮುವಾದಿ ಫ್ಯಾಸಿಸ್ಟ್ ಅಜೆಂಡಾಕ್ಕೆ ವಿರುದ್ಧವಾಗುತ್ತದೆ. ಹೀಗಾಗಿ ಅವರಿಗೆ ಮರ್ಮಾಘಾತ ನೀಡಿರುವಲ್ಲಿ ಅಶ್ಚರ್ಯವೇನಿಲ್ಲ.

ಈ ಹಿಂದೆಯೇ ಸಂಘಪರಿವಾರವು ಇದೇ ರೀತಿ ಸಮತಾವಾದಿ, ಕ್ರಾಂತಿಕಾರಿ ಹುತಾತ್ಮ ಭಗತ್‌ಸಿಂಗ್‌ನನ್ನು 'ಹಿಂದುತ್ವದ' ಉಗ್ರಗಾಮಿಯೆಂಬಂತೆ ಬಿಂಬಿಸಿ ದುರ್ಬಳಕೆ ಮಾಡುತ್ತಾ ಬಂದಿತ್ತು. ಆದರೆ ಭಗತ್‌ಸಿಂಗ್‌ನ ವಿಚಾರಗಳು ಪ್ರಖರವಾಗಿ ಹೊರ ಬಂದ ನಂತರ ಪರಿವಾರ ಬಾಯಿಮುಚ್ಚಲಾರಂಭಿಸಿತು. ಈಗಲೂ ವಿವೇಕ ವಿಚಾರಗಳು ಎಲ್ಲರಿಗೂ ತಿಳಿದರೆ 'ಹಿಂದುತ್ವ'ದ ಅಜೆಂಡಾಕ್ಕೆ ದುರ್ಬಳಕೆ ಮಾಡಿಕೊಳ್ಳುವುದು ತಪ್ಪುವ ಭಯ ಅವರನ್ನು ಕಾಡುತ್ತಿದೆ. ಇಂತಹ ಹತಾಶೆಯಿಂದಲೇ ಸತ್ಯದ ಬಾಯಿ ಮುಚ್ಚಿಸಲು ಹೆಣಗುತ್ತಿರುವುದು.

ಆದ್ದರಿಂದ ಸಂಘಪರಿವಾದ ಈ ಗುಪ್ತ ಅಜೆಂಡವನ್ನು,ದುಷ್ಟ ಯೋಜನೆಗಳನ್ನು ಎದುರಿಸಬೇಕು. ಪತ್ರಿಕೆಯ ಮೇಲಿನ ಧಾಳಿಯನ್ನು ಖಂಡಿಸಬೇಕು. ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಇಂತಹ ಧಾಳಿಗಳು ಚೆಡ್ಡಿಪಡೆಯಿಂದ ನಡೆಯುವುದು ಹೊಸದೇನಲ್ಲ. ಬಿಜೆಪಿ ಅಧಿಕಾರದಲ್ಲಿರುವುದು ಅದಕ್ಕೆ ಇನ್ನಷ್ಟು ಕುಮ್ಮಕ್ಕು ಕೊಟ್ಟಿದೆ. ಈ ಹಿನ್ನೆಲೆಯಲ್ಲಿ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿ ಪ್ರತಿರೋಧ ಒಡ್ಡಬೇಕಿದೆ.

ಈ ಬಡಿದಾಟಕ್ಕೆ ಕೊನೆಯೆಲ್ಲಿ ?

ಉತ್ತರದಾಯಿತ್ವವೇ ಇಲ್ಲದೇ ಸರ್ವ ಅಧಿಕಾರದ ಸವಿ ಅನುಭವಿಸುತ್ತಿರುವ ಆರ್.ಎಸ್.ಎಸ್. ತನ್ನ ಕರುಳ ಕುಡಿಯಾದ ಬಿಜೆಪಿಯೊಳಗಿನ ಕಿತ್ತಾಟಕ್ಕೆ ಒಂದು ರಾಜೀಸಂಧಾನ ಏರ್ಪಡಿಸಿದ ಬಳಿಕ ಮಾಜಿ ಮುಖ್ಯಮಂತ್ರಿ ಯಡಿಯೂರಪ್ಪನವರು ರಾಜ್ಯಾದ್ಯಾಂತ ಆರಂಭಿಸಿದ ಪ್ರವಾಸ ಮತ್ತೇ ವಿವಾದಗಳ ಧೂಳೆಬ್ಬಿಸಿದೆ . ಒಗ್ಗಟ್ಟಿನಿಂದ ಎಲ್ಲರೂ ಕೂಡಿ ಹೋಗುತ್ತೇವೆಂದು ಪ್ರಮಾಣ ಮಾಡಿದ ಬಿಜೆಪಿ ನಾಯಕರು ಮತ್ತೇ ಕದನದ ಕಹಳೆಯನ್ನು ಇಷ್ಟು ಬೇಗ ಊದಿದ್ದು ಅನಿರೀಕ್ಷಿತವೇನಲ್ಲ. ಈಗ ಯಡಿಯೂರಪ್ಪನವರ ಪ್ರವಾಸ ಅಧಿಕೃತವಲ್ಲ ಎಂದು ಪಕ್ಷಾಧ್ಯಕ್ಷ ಈಶ್ವರಪ್ಪ ಹೇಳಿರುವುದು, ಯಡಿಯೂರಪ್ಪನವರ ಬಣ ಸಭೆಗಳಲ್ಲಿ ಬಲ ಪ್ರದರ್ಶನಕ್ಕೆ ಇಳಿದಿರುವುದು ಜಿದ್ದಾಜಿದ್ದಿಯ ತುರುಸನ್ನು ತೋರಿಸುತ್ತದೆ.



ಇನ್ನೊಂದು ವಿಶೇಷವೆಂದರೆ ಹೋದಲ್ಲೆಲ್ಲಾ ಯಡಿಯೂರಪ್ಪನವರು ನಾನೇ ಮುಖ್ಯಮಂತ್ರಿ, ಮತ್ತೇ ಬರುತ್ತೇನೆ ಎಂದು ಹೇಳುತ್ತಿರುವುದು, ನಿಷ್ಟ ಶಾಸಕರಿಂದ ಅಂತಹದೇ ಹೇಳಿಕೆ ನೀಡಿಸುವುದು ಮುಂದಿನ ಬಡಿದಾಟಗಳು ತೀವ್ರಗೊಳ್ಳುವ ಸೂಚಕವೂ ಆಗಿದೆ.

'ನಾನು ದುರ್ಬಲ ಮುಖ್ಯಮಂತ್ರಿ ಅಲ್ಲ' ಎಂದು ಹಾಲಿ ಸಿ.ಎಂ. ಹೇಳ ತೊಡಗಿದ್ದಾರೆ. ಯಡಿಯೂರಪ್ಪನವರ ಬಿರುಸಿನ ನಡೆ, ಹಾಕುತ್ತಿರುವ ಗುಟುರು ಸದಾನಂದಗೌಡರಲ್ಲಿ ನಡುಕ ತಂದಿದೆ. ಇಲ್ಲವಾದಲ್ಲಿ ಗೌಡರು ಹೋದಲ್ಲೆಲ್ಲಾ ತನ್ನ 'ಬಲ'ದ ಬಗ್ಗೆ ಅಫಿಡೇವಿಟ್ ಹಾಕುವ ಜರೂರತ್ತಾದರೂ ಏನಿದೆ?. ಈ ಎಲ್ಲಾ ಬೆಳವಣಿಗೆಗಳು ರಾಜಕೀಯ–ಆಡಳಿತಾತ್ಮಕ ಅಸ್ಥಿರತೆಯನ್ನೂ ಇನ್ನಷ್ಟು ಬೆಳೆಸುತ್ತಿವೆ. ದಿನಗಳೆದಂತೆ ಇನ್ನಷ್ಟು ತಾರಕ್ಕೇರುವುದರಲ್ಲಿ ಅನುಮಾನವೇ ಇಲ್ಲ. ಗಣಿ ಹಾಗೂ ಭೂಮಾಫಿಯಾಗಳ ಲೂಟಿ ಬಡಿದಾಟಕ್ಕೆ ಕೊನೆಯೊಂಬುದು ಇರಲುಂಟೇ ?

ಮುಖ್ಯಮಂತ್ರಿ ರಕ್ಷಣೆ ಇನ್ನು ಭೂತದ ಹೊಣೆ!

ನಾಡಿನ ಜನರ ಆಸ್ತಿ, ಪ್ರಾಣ ರಕ್ಷಣೆಯ ಪ್ರಧಾನ ಹೊಣೆ ಹೊತ್ತ ಪ್ರಮಾಣ ವಚನ ಸ್ವೀಕರಿಸಿದ ಮುಖ್ಯಮಂತ್ರಿಯೊಬ್ಬ 'ನನ್ನನ್ನು ರಕ್ಷಿಸು' ಎಂದು ಭೂತದ ಎದುರಿನಲ್ಲಿ ಕೈಮುಗಿದು ನಿಲ್ಲುವುದೆಂದರೆ ?!.

ದಿನಬೆಳಗಾದರೂ ಬಿಜೆಪಿಯಲ್ಲಿ ಕದನ, ಕೊಟ್ಟ ಕುರ್ಚಿ ವಾಪಸ್ಸು ಕೊಡು ಎಂದು ಯಡಿಯೂರಪ್ಪ ಗೌಡರಿಗೇ ಬೆನ್ನು ಬಿದ್ದಿದ್ದಾರೆ. ಭಿನ್ನಮತ–ಗುಂಪುಗಾರಿಕೆ ತುರಿಸಿನಿಂದಲೇ ನಡೆದು ಬಹುಮತದ ಬೆಂಬಲ ನೀಡಿ ಮುಖ್ಯಮಂತ್ರಿಯನ್ನಾಗಿ ಮಾಡಿದ್ದ ಶಾಸಕರೇ ಈಗ ಕೈ ಕೊಟ್ಟು ಬಿಟ್ಟರೇ?. ಕುಳಿತ ಕುರ್ಚಿ ಕುಸಿದು ಹೋಗುವ ಭಯ ಅವರನ್ನೂ ಆವರಿಸಿದೆ. ನಂಬಿದ ಹೈಕಮಾಂಡ್, ಆಶ್ರಯಿಸುವ ಪಕ್ಷ, ಇವುಗಳ ಮೇಲಿನ ಅನಧಿಕೃತ ಹೈಕಮಾಂಡ್ ಕೇಶವ ಶಿಲ್ಪ ಯಾವುವೂ ನಡುಕವನ್ನು ನಿಲ್ಲಿಸುತ್ತಿಲ್ಲ ಎಂಬ ಭಾವನೆ. ಎಷ್ಟೊಂದು ಪೊಲೀಸರು, ಕಮಾಂಡೋಗಳು ರಕ್ಷಿಸುತ್ತಿಲ್ಲ!. ಆದ್ದರಿಂದಲೇ ಈ ಭಯದ 'ಪಿಶಾಚಿ'ಯಿಂದ ಪಾರಾಗಲು ಆರಾಧ್ಯದೈವ "ಭೂತ'ದ ಮೊರೆ ಹೊಕ್ಕುವುದೇ ಕೊನೆಗೆ ಉಳಿದ ಅವಕಾಶ. ಹಾಗಾಗಿ ಗೌಡರಿಗೆ 'ನಾನಿದ್ದೇನೆ ಹೆದರಬೇಕು' ಎಂದು ಅಭಯ ಕೊಟ್ಟಿದೆಯಂತೆ !. ಗೌಡರ ರಕ್ಷಣೆಗೇನೋ ಭೂತವಿದೆ !. ಆದರೆ ನೂರಾರು ಸಮಸ್ಯೆಗಳ ಭೂತದ ಬಾಯಲ್ಲಿ ಸಿಕ್ಕು ನಲುಗುತ್ತಿರುವ ಜನತೆಗೆ ರಕ್ಷಿಸಲು ಯಾರಿದ್ದಾರೆ? .ಭೂತ–ಪಿಶಾಚಿಗಳ ಈ ಆಟ–ಕಾಟ, ಮಾಟ ಇನ್ನೆಷ್ಟು ದಿನ ನೋಡಬೇಕು, ಸಹಿಸಬೇಕು?

ಬೇಡ ಬೇಡ ಇಸ್ರೇಲ್ ಜನಾಂಗ ಹತ್ಯೆಯ ಇಸ್ರೇಲ್

ವಿದೇಶಾಂಗ ಸಚಿವ ಎಸ್.ಎಂ.ಕೃಷ್ಣ ಇಸ್ರೇಲ್ ಪ್ರವಾಸದಲ್ಲಿರುವಾಗ ಬೆಂಗಳೂರಿನಲ್ಲೇ ಇಸ್ರೇಲ್‌ನ ಕಾನ್ಸುಲೇಟ್ ರಾಯಭಾರಿ ಕಛೇರಿ ಆರಂಭಿಸಲು ನಿರ್ಧರಿಸಿರುವುದಾಗಿ ಹೇಳಿರುವುದು ಅತ್ಯಂತ ಆತಂತಕಾರಿಯಾಗಿದೆ. ಕುಖ್ಯಾತ ಇಸ್ರೇಲ್‌ನೊಂದಿಗೆ ಅಮೇರಿಕಾದ ಬಂಟರು ಬಿಟ್ಟರೇ ಬಹುತೇಕ ಜಗತ್ತಿನ ನೂರಾರು ದೇಶಗಳು ಸಂಬಂಧಗಳನ್ನೇ ಹೊಂದಿಲ್ಲ, ಹೊಂದಲು ನಿರಾಕರಿಸಿವೆ. ಕಾರಣ ಇಸ್ರೇಲ್ ಒಂದು ಬರ್ಬರ, ಜನಾಂಗೀಯ ಹತ್ಯೆಯ, ಹಲವು ವಿದ್ವಂಸಗಳ ರೂವಾರಿ. ಪ್ರಮುಖವಾಗಿ

ಪುಟ 6ಕ್ಕೆ.....

ಕಾರ್ಟೂನ್ ಕಾರ್ನರ್



ನೆಲೆ ಇಲ್ಲದ ಬಿಜೆಪಿ–ಬಲ ಇಲ್ಲದ ಕಾಂಗ್ರೆಸ್, ದುಡಿಯುವ ವರ್ಗದ ರಾಜಕಾರಣಕ್ಕೆ ಹದವಾದ ನೆಲ

ಸಿಪಿಐ(ಎಂ) ಮಂಡ್ಯ ಸಮ್ಮೇಳನದ ವಿಶ್ಲೇಷಣೆ

ಮಂಡ್ಯ ಜಿಲ್ಲೆಯ ಸಾಮಾಜಿಕ, ಆರ್ಥಿಕ, ರಾಜಕೀಯ ಬದುಕಿನ ಒಳನೋಟ ನೀಡುವ ಒಂದು ವರದಿ ಇದು. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಮಂಡ್ಯ ಜಿಲ್ಲಾ ಸಮ್ಮೇಳನದಲ್ಲಿ ಚರ್ಚಿಸಲಾದ ಈ ವರದಿಯನ್ನು ಓದಿ. ಬಂಡವಾಳಶಾಹಿ ಪಕ್ಷಗಳ ಸಮ್ಮೇಳನಗಳಲ್ಲಿ (ನಡೆದರೆ) ಚರ್ಚಿಸಲಾಗುವ ವಿಷಯವೇನು, ಮಾರ್ಕ್ಸ್‌ವಾದಿ ಪಕ್ಷದಲ್ಲಿ ನಡೆಯುವುದೇನು? ಗಮನಿಸಿ.

ಬಿಜೆಪಿ ಇಡೀ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿದು, ಈ ಬಲವನ್ನು ಮಂಡ್ಯ ಜಿಲ್ಲೆಯಲ್ಲಿ ತಾನೂ ನೆಲೆ ಊರುವಂತೆ ಎಲ್ಲಾ ರೀತಿಯಲ್ಲೂ ಬಳಸುತ್ತಿದ್ದರೂ ಯಶಸ್ಸು ಸಾಧಿಸಲಾಗಲಿಲ್ಲ. ಒಂದಾದರೂ ಜಿಲ್ಲಾ ಪಂಚಾಯಿತಿ ಸ್ಥಾನವನ್ನಾದರೂ ಪಡೆಯಲು ಕೆಲವೆಡೆ ತನ್ನ ಶಾಸಕ ಸ್ಥಾನ ಸ್ಪರ್ಧಿಗಳನ್ನು ಇಳಿಸಿ, ಎಲ್ಲಾ ರೀತಿಯ ತಂತ್ರಗಳನ್ನು ಮಾಡಿಯೂ ದಯನೀಯ ಸೋಲು ಕಂಡಿದೆ. ಈ ಜಿಲ್ಲೆಯ ಮೂಲಕ ಕೋಮುವಾದಿ ರಾಜಕೀಯವನ್ನು ಸಾರಾಸಗಟಾಗಿ ತಿರಸ್ಕರಿಸಿದೆ. ಭಿನ್ನರೀತಿಯ ಪಕ್ಷ, ಬೆಲೆಏರಿಕೆಗೆ ಬಿಜೆಪಿಯೇ ಪರಿಹಾರ, ಸ್ವಚ್ಛ, ಸಮರ್ಥ ಆಡಳಿತದ ಘೋಷಣೆಗಳ ಮಂಕುಬೂದಿಗೆ ಮಂಡ್ಯ ಜಿಲ್ಲೆ ಜನ ಮರಳಾಗಲಿಲ್ಲ. ಬದಲಾಗಿ ಬೆಲೆ ಏರಿಕೆಯನ್ನು ಮತ್ತಷ್ಟು ಹೆಚ್ಚು ಮಾಡಿದ, ಅಪಾರ ಭ್ರಷ್ಟಾಚಾರ ಮಾಡಿ ರೈತರಿಗೆ ಪಂಗನಾಮ ಹಾಕಿ ವಂಚಿಸಿದ ಭೂ ಹಗರಣ, ಅರಣ್ಯ ಭೂಮಿಯನ್ನು ಬಿಡದೆ ಲೂಟಿ ಮಾಡಿದ ಗಣಿ ಹಗರಣಗಳು ಇಡೀ ದೇಶದಲ್ಲೆ ಕುಖ್ಯಾತಿ ಪಡೆದು ದಕ್ಷಿಣ ಭಾರತದ ಮೊದಲ ಬಿಜೆಪಿ ಮುಖ್ಯಮಂತ್ರಿ ಯಡಿಯೂರಪ್ಪ ಮತ್ತು ಅವರ ಪ್ರಮುಖ ಮಂತ್ರಿಗಳು ಜೈಲು ಪಾಲಾಗಿದ್ದನ್ನು ಇಲ್ಲಿಯ ಜನ ಸಮರ್ಥಿಸದೆ ಛೀಮಾರಿ ಹಾಕಿದ್ದಾರೆ.

ಸರಳ ಬಹುಮತಕ್ಕೆ ಕೊರತೆ ಕಾರಣಕ್ಕಾಗಿ ಗಣಿರೆಡ್ಡಿಗಳ ಅಕ್ರಮ ಹಣದಿಂದ ಖರೀದಿ ಮಾಡಿದ್ದ ಐವರು ಪಕ್ಷೇತರರಲ್ಲಿ ಮಂಡ್ಯ ಜಿಲ್ಲೆ ಮಳವಳ್ಳಿ ವಿಧಾನಸಭಾ ಕ್ಷೇತ್ರದಿಂದ ಗೆದ್ದಿದ್ದ ಕಾಂಗ್ರೆಸ್ ಬಂಡಾಯ ಅಭ್ಯರ್ಥಿ ನರೇಂದ್ರಸ್ವಾಮಿ ಒಬ್ಬರು. ಈ ಕಾರಣದಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವರಾಗಿದ್ದ ನರೇಂದ್ರಸ್ವಾಮಿರವರನ್ನು ಉಸ್ತುವಾರಿ ಮಂತ್ರಿ ಮಾಡದೆ ಕಟ್ಟಾ ಆರ್.ಎಸ್.ಎಸ್. ನ ಹುರಿಯಾಳು ಆಗಿದ್ದ ಒಕ್ಕಲಿಗ ಜಾತಿಗೆ ಸೇರಿದ್ದ ವೈದ್ಯಕೀಯ ಮಂತ್ರಿ ರಾಮಚಂದ್ರಗೌಡರನ್ನು ಈ ಸ್ಥಾನಕ್ಕೆ ನೇಮಿಸಿದ್ದರು. ಈ ಮೂಲಕ ಇಡೀ ಜಿಲ್ಲಾ ಆಡಳಿತ ಯಂತ್ರವನ್ನು "ಕೇಶವ ಕೃಪ"ಕ್ಕೆ ವಹಿಸಿ ಕೋಮುವಾದಿ ರಾಜಕಾರಣಕ್ಕೆ ನೆಲ ಹದಗೊಳಿಸಲು ಹೊಂಚುಹಾಕಲಾಗಿತ್ತು. ಮೆಡಿಕಲ್ ಕಾಲೇಜು ಸಿಬ್ಬಂದಿ ನೇಮಕದಲ್ಲಿನ ಹಗರಣದಿಂದಾಗಿ ಹೈಕೋರ್ಟ್‌ನಿಂದ ಛೀಮಾರಿಗೆ ಒಳಗಾಗಿ ರಾಜೀನಾಮೆ ನೀಡಬೇಕಾಗಿ ಬಂದಾಗ ಜಿಲ್ಲಾ ಉಸ್ತುವಾರಿ ಸ್ಥಾನಕ್ಕೆ ಮುಂಡ ರಾಜಕಾರಣಕ್ಕೆ ಹೆಸರಾದ ಸಾರಿಗೆ ಮಂತ್ರಿ ಅಶೋಕ್‌ಗೆ ವಹಿಸಲಾಯಿತು. ಅಶೋಕ್ ಕೂಡ ಆರ್.ಎಸ್.ಎಸ್. ಗರಡಿಯಲ್ಲಿ ಬೆಳೆದವರು ಮತ್ತು ಜಾತಿಯಲ್ಲಿ ಒಕ್ಕಲಿಗ ಎಂಬುದು ಗಮನಾರ್ಹ.

ಈ ಉಸ್ತುವಾರಿ ಮಂತ್ರಿಗೆ ಸಹಾಯಕನಾಗಿ ಮೂಲತಃ ಮಂಡ್ಯದ ನಾಗಮಂಗಲದವರಾದ ವಿಧಾನ ಪರಿಷತ್ ಸದಸ್ಯ ಒಕ್ಕಲಿಗ ಜಾತಿಗೆ ಸೇರಿದ ಅಶ್ವತ್ಥ ನಾರಾಯಣರಿಗೆ ಅನಧಿಕೃತ ಜವಾಬ್ದಾರಿ ನೀಡಲಾಯಿತು. ಪ್ರತಿದಿನ ಮಂಡ್ಯ ಜಿಲ್ಲೆಯಲ್ಲೆ ಇದ್ದು. ಜಿಲ್ಲಾಡಳಿತ, ಜಿ.ಪಂ. ಮೇಲೆ ಸವಾರಿ ಮಾಡುತ್ತಿದ್ದು ಅಷ್ಟೆ ಅಲ್ಲ, ಇಡೀ ಜಿಲ್ಲಾಡಳಿತದ ದಿನದ ಸಾಮಾನ್ಯ ಚಟುವಟಿಕೆಗಳಿಗೂ ಅಶ್ವಥ ನಾರಾಯಣರಿಗೆ ಉತ್ತರದಾಯಿತ್ವವಾಗಿರುವ ಪರಿಸ್ಥಿತಿಯನ್ನು ನಿರ್ಮಾಣ ಮಾಡಿ ಬಿಜೆಪಿಯೇತರ ಜನಪ್ರತಿನಿಧಿಗಳ ಪ್ರಭಾವವನ್ನು ನಿಷ್ಫಲಗೊಳಿಸಲು ಪ್ರಯತ್ನ ನಡೆಸಲಾಗುತ್ತಿದೆ.

ಅಧಿಕಾರಕ್ಕೆ ಬಂದ ದಿನದಿಂದಲೇ ಜೆಡಿ(ಎಸ್) ನ ಅತೃಪ್ತರನ್ನು ಸೆಳೆದು ಆ ಮೂಲಕ ಜೆಡಿ(ಎಸ್) ನ ಬೆಂಬಲದ ನೆಲೆಯನ್ನು ತನ್ನ ನೆಲೆಯನ್ನಾಗಿ ಪರಿವರ್ತಿಸಲು ನಡೆಸಿದ ಅನುದಿನದ ಪ್ರಯತ್ನ ವಿಫಲವಾಗಿದೆ ಎಂದೇ ಹೇಳಬಹುದು. ಪ್ರತಿಯೊಂದು ರಾಜಕೀಯ ಚಟುವಟಿಕೆಯಲ್ಲೂ ಜೆಡಿ(ಎಸ್) ನ್ನು ವಿರೋಧ ಮಾಡುವ ರಾಜಕೀಯ ವ್ಯಕ್ತಿ ಮತ್ತು ಗುಂಪುಗಳನ್ನು ಬಿಜೆಪಿ ಸರ್ಕಾರ ಮತ್ತು ಬಿಜೆಪಿ ಪಕ್ಷ ಪ್ರೋತ್ಸಾಹಿಸುವ ರಾಜಕೀಯ ನೀತಿಯನ್ನು ಅನುಸರಿಸುತ್ತಿತ್ತು. ಮೇಲುಕೋಟೆ ವಿಧಾನಸಭಾ ಕ್ಷೇತ್ರದಲ್ಲಿ ರಾಜ್ಯರೈತ ಸಂಘದ ರಾಜ್ಯಾಧ್ಯಕ್ಷ ಕೆ.ಎಸ್. ಪುಟ್ಟಣ್ಣಯ್ಯ ಜೊತೆ ಇದೇ ರೀತಿಯ ತಂತ್ರಗಾರಿಕೆ ಸಂಬಂಧ ಮುಂದುವರೆದಿರುವುದನ್ನು ಕಾಣಬಹುದು.

ರಾಜಕೀಯ ಸಾಧನವಾಗಿ ಮಠಗಳನ್ನು ಬಳಸಿಕೊಳ್ಳಲು ಹಿಂಜರಿಯದ ಬಿಜೆಪಿ ಶ್ರೀರಂಗಪಟ್ಟಣದ ಬೇಬಿ ಮಠ, ಕೆ.ಆರ್. ಪೇಟೆಯ ಹೇಮಗಿರಿ ಮಠ, ಆದಿಚುಂಚನಗಿರಿ ಮಠಾಧೀಶರುಗಳನ್ನು ಸಂದರ್ಭಕ್ಕೆ ತಕ್ಕಂತೆ ಬಳಸಿದೆ. ಬಿಎಂಐಸಿ ನೆಲಗಳ್ಳ ಅಶೋಕ ಖೇಣಿಗೂ ಚುಂಚನಗಿರಿ ಮಠಕ್ಕೂ ಸಂಪರ್ಕ ಸೇತುವೆಯಾಗಿ ಬಿಜೆಪಿ ಕೆಲಸಮಾಡಿದೆ. ಇದರ ಫಲವಾಗಿ ಚುಂಚನಗಿರಿ ಮಠಾಧೀಶರಾದ ಬಾಲಗಂಗಾಧರರು 'ಧರ್ಮರತ್ನಾಕರ' ಬಿರುದನ್ನು ನೀಡಿ ಅಶೋಕ ಖೇಣಿಯನ್ನು ಸನ್ಮಾನಿಸಿದೆ.

ಸ್ಥಳೀಯ ಸಂಸ್ಥೆಗಳಲ್ಲಿ ಅಪರೇಷನ್ ಕಮಲ

ಜನರ ಬೆಂಬಲ ಪಡೆದು ಜನಪ್ರತಿನಿಧಿಗಳಾಗಿ ಆಯ್ಕೆ ಆಗುವಲ್ಲಿನ ತನ್ನ ವಿಫಲತೆಯನ್ನು ಒಪ್ಪಿಕೊಳ್ಳದೆ ಬಿಜೆಪಿ ಅಪರೇಷನ್ ಕಮಲದ ಮೂಲಕ ಬೇರೆ ಪಕ್ಷದ ಜನಪ್ರತಿನಿಧಿಗಳನ್ನು ಕೊಂಡು ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರ ಹಿಡಿಯುವಲ್ಲಿ ನಡೆಸಿದ ರಾಜಕೀಯ ಮಂಗಾಟಕ್ಕೆ ಈ ನಡುವೆ ಮಂಡ್ಯ ಜಿಲ್ಲೆ ಸಾಕ್ಷಿಯಾಗಿತ್ತು.

ಮಂಡ್ಯ ನಗರ ಸಭೆಯಲ್ಲಿ ಕೇವಲ 2 ಸ್ಥಾನ ಮಾತ್ರಗಳಿಸಿದ್ದ ಬಿಜೆಪಿ, ಕಾಂಗ್ರೇಸ್‌ನಿಂದ ಆಯ್ಕೆಯಾಗಿದ್ದ ಬಹುತೇಕ ಸದಸ್ಯರನ್ನು ಮತ್ತು ಜೆಡಿ(ಎಸ್) ನಿಂದ ಆಯ್ಕೆಯಾಗಿದ್ದ 13 ಸದಸ್ಯರನ್ನು ಖರೀದಿ ಮಾಡಿ ಮಂಡ್ಯ ನಗರ ಅಭಿವೃದ್ದಿ ಒಕ್ಕೂ[illegible]ಷಿ ಅಧ್ಯಕ್ಷ, ಉಪಾಧ್ಯಕ್ಷ ಸ್ಥಾನವನ್ನು ಹಿಡಿದಿತ್ತು. ಮಂಡ್ಯ ನಗರ ಕಿಂಚಿತ್ತು ಅಭಿವೃದ್ಧಿ ಆಗಲಿಲ್ಲ, ಮಾತ್ರವಲ್ಲ ನಂತರದ ಆಡಳಿತದಲ್ಲಿ ರಿಯಲ್ ಎಸ್ಟೇಟ್ ಮಾಫಿಯಾಗಳ ಕೈವಾಡ ಬಯಲಾಗಿ ಬಿಜೆಪಿಯ ನಿಜಬಣ್ಣ ಗೋಚರಿಸಿತು. ಈ ಸಂಬಂಧ ಜೆಡಿ(ಎಸ್) ತನ್ನ ವಿಪ್ ಉಲ್ಲಂಘಿಸಿದ ಸದಸ್ಯರ ಸದಸ್ಯತ್ವ ರದ್ದುಗೊಳಿಸುವಂತೆ ಜಿಲ್ಲಾಧಿಕಾರಿ ಮುಂದೆ ದಾವೆ ಹೂಡಿತು. ವಿಚಾರಣೆ ನಡೆಸಿದ ಜಿಲ್ಲಾಧಿಕಾರಿ ಜೆಡಿ(ಎಸ್) ವಿಪ್ ಉಲ್ಲಂಘಿಸಿದ್ದ ಎಲ್ಲಾ ಸದಸ್ಯರ ಸದಸ್ಯತ್ವವನ್ನು ರದ್ದು ಗೊಳಿಸಿದರು. ಇದರ ವಿರುದ್ಧ ಅನರ್ಹ ಸದಸ್ಯರು ಹೈಕೋರ್ಟ್ ಮೆಟ್ಟಿಲು ಏರಿದರೂ ಅಲ್ಲೂ ಡಿಸಿ ತೀರ್ಪನ್ನೆ ಎತ್ತಿ ಹಿಡಿಯಲಾಯಿತು. ಇದೇ ರೀತಿ ಹಲವು ಗ್ರಾ. ಪಂ. ಗಳಲ್ಲಿ ಹಾಗೂ ಸಹಕಾರಿ ಸಂಸ್ಥೆಗಳಲ್ಲೂ ಅಪರೇಷನ್ ಕಮಲವನ್ನು ನಡೆಸಿದೆ. ಕಾಂಗ್ರೇಸ್ ಶಾಸಕರಾಗಿದ್ದ ಡಿ.ಸಿ. ತಮ್ಮಣ್ಣ, ಶಿವರಾಮೇಗೌಡ, ಜೆಡಿ(ಎಸ್) ಶಾಸಕರಾಗಿದ್ದ ಜಿ.ಬಿ.ಶಿವಕುಮಾರ್ ಹಾಗೂ ಮಾಜಿ ಸಂಸದ ಜಿ.ಮಾದೇಗೌಡರ ಮಗ ಮಧು ಮಾದೇಗೌಡರನ್ನು ತನ್ನ ತೆಕ್ಕೆಗೆ ತೆಗೆದುಕೊಂಡು ಹಲವು ಸರ್ಕಸ್‌ಗಳನ್ನು ನಡೆಸಿಯೂ ಬಿಜೆಪಿಗೆ ನೆಲೆ ಊರಲು ಸಾಧ್ಯವಾಗಿಲ್ಲ.



ಬಲ ಇಲ್ಲದ ಕಾಂಗ್ರೆಸ್

ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ನೀತಿಗಳನ್ನು ರಭಸದಿಂದ ಜಾರಿ ಮಾಡುವ ಕಾಂಗ್ರೆಸ್‌ಗೆ ಜಿಲ್ಲೆಯಲ್ಲಿ ಅಸ್ತಿತ್ವ ಇದ್ದರೂ ಬಲಹೀನವಾಗಿದೆ. ದಿನೇ ದಿನೇ ಕ್ಷಯರೋಗದ ರೋಗಿಯಂತೆ ಕ್ಷೀಣಿಸುತ್ತಿದೆ. ಗುಂಪುಗಾರಿಕೆ, ರಾಜಕೀಯ ಸಂಘಟನಾತ್ಮಕ ಕ್ರಮಗಳ ಕೊರತೆ ಕೇಂದ್ರದ ಯುಪಿಎ ಸರ್ಕಾರದ ಭ್ರಷ್ಟಾಚಾರ ಜನವಿರೋಧಿ ನೀತಿ, ಭ್ರಷ್ಟ ಜನವಿರೋಧಿ ಬಿಜೆಪಿ ಸರ್ಕಾರದ ವಿರುದ್ಧ ಪರಿಣಾಮಕಾರಿಯಾಗಿ ವಿರೋಧಪಕ್ಷವಾಗಿ ಕಾರ್ಯನಿರ್ವಹಿಸುವಲ್ಲಿ ವಿಫಲತೆ, ಜಾತಿ ಆಧಾರಿತ ಧೃವೀಕರಣಗಳನ್ನು ಕಾಂಗ್ರೆಸ್ ಬಲಹೀನತೆಗೆ ಕಾರಣಗಳನ್ನಾಗಿ ಪಟ್ಟಿ ಮಾಡಬಹುದು. ಎಷ್ಟೋ ಸ್ಥಳೀಯ ಸಂಸ್ಥೆಗಳಲ್ಲಿ ಅನುಕೂಲ ಸಿಂಧುವಾಗಿ ಬಿಜೆಪಿ ಜೊತೆ ಅಧಿಕಾರ ಹಂಚಿಕೊಂಡಿದೆ. ಜನರ ಸಮಸ್ಯೆ ಬಗ್ಗೆ ಆಗಲೀ, ಕೋಮುವಾದದ ವಿರುದ್ಧವಾಗಲಿ ಹೋರಾಟ ಮಾಡುವುದಿರಲಿ, ಕನಿಷ್ಠ ಧ್ವನಿಯನ್ನು ಎತ್ತಲು ಹೋಗಿಲ್ಲ. ಇನ್ನು ಜೆಡಿ(ಎಸ್)ನ ಪರಿಸ್ಥಿತಿಗೆ ಬಂದರೆ ಬಹುತೇಕ ಚುನಾಯಿತ ಸ್ಥಾನಗಳಲ್ಲಿ ಅಧಿಕಾರ ರೂಢ ಪಕ್ಷವಾಗಿದ್ದರೂ ಜನರ ಪ್ರಶ್ನೆಗಳಿಗೆ ಆದ್ಯತೆ ಸಿಗುತ್ತಿಲ್ಲ. ಉದ್ಯೋಗ ಖಾತರಿ ಮೊದಲಾದ ಹಲವು ಯೋಜನೆಗಳಲ್ಲಿ ವ್ಯಾಪಕ ಭ್ರಷ್ಟಾಚಾರ, ಜನರ ಪರವಾದ ಸಮಸ್ಯೆಗಳ ವಿರುದ್ಧ ಹೋರಾಟ ಮಾಡದೇ ಅಯಾರಾಂ ಗಯಾರಾಂ ರಾಜಕೀಯದಲ್ಲಿ ತೊಡಗಿರುವುದು, ಅನುಕೂಲ ಸಿಂಧು ಚುನಾವಣಾ ಹೊಂದಾಣಿಕೆ, ಸ್ಥಳೀಯ ಸಂಸ್ಥೆಗಳಲ್ಲಿ ಅಧಿಕಾರ ಹಿಡಿಯಲು ಕೆಲವು ಕಡೆ ಬಿಜೆಪಿ, ಕೆಲವು ಕಡೆ ಕಾಂಗ್ರೆಸ್ ಜೊತೆ ಮೈತ್ರಿ ಮುಂತಾದ ಕಾರಣಗಳಿಂದಾಗಿ ಭ್ರಷ್ಟಾಚಾರದ ವಿಷಯವೂ ಸೇರಿದಂತೆ ಹಲವು ವಿಷಯಗಳಲ್ಲಿ ಜೆಡಿ(ಎಸ್)ನ್ನು ಕಾಂಗ್ರೆಸ್, ಬಿಜೆಪಿ ಸಾಲಿಗೆ ಸೇರಿಸಲಾಗುತ್ತಿದೆ. ಪರಿಸ್ಥಿತಿ ಹೀಗಿರುವಾಗ ಜನರ ಸಮಸ್ಯೆಗಳ ಆಧಾರದಲ್ಲಿ ಹೋರಾಟ ರೂಪಿಸಿ ಜಿಲ್ಲೆಯಲ್ಲಿ ಅಸ್ತಿತ್ವ ಪಡೆದಿರುವ ಸಿಪಿಐ(ಎಂ) ನೇತೃತ್ವದ ದುಡಿಯುವ ವರ್ಗದ ರಾಜಕಾರಣಕ್ಕೆ ಉಜ್ವಲ ಅವಕಾಶವಿದೆ ಎಂದು ಸಿಪಿಐ(ಎಂ)ನ 6ನೇ ಮಂಡ್ಯ ಜಿಲ್ಲಾ ಸಮ್ಮೇಳನ ವಿಶ್ಲೇಷಿಸಿದೆ.

ಹೆಚ್ಚುತ್ತಿರುವ ಜಾತಿವಾದಿ ರಾಜಕಾರಣದ ಸವಾಲು

ಸ್ವಾತಂತ್ರ್ಯ ಚಳವಳಿ, ಸ್ವಾತಂತ್ರ್ಯಪೂರ್ವ ಮತ್ತು ನಂತರದಲ್ಲಿ ರೈತಚಳವಳಿಗೆ ಹೆಸರುವಾಸಿಯಾಗಿರುವ ಮಂಡ್ಯ ಜಿಲ್ಲೆ, ಜಾತಿವಾದಿ, ಅವಕಾಶವಾದಿ ರಾಜಕಾರಣಕ್ಕೆ ತೆರೆದುಕೊಳ್ಳುತ್ತಿದೆ. ರಾಜ್ಯದಲ್ಲಿ ನಡೆಯುತ್ತಿರುವ ಜಾತಿವಾದಿ ರಾಜಕಾರಣಕ್ಕೆ ಜಿಲ್ಲೆ ತನ್ನದೇ ರೀತಿಯಲ್ಲಿ ಪ್ರತಿಕ್ರಿಯಿಸುತ್ತಿದ್ದು, ಒಕ್ಕಲಿಗರು ಜೆಡಿ(ಎಸ್)ಗೆ, ಲಿಂಗಾಯಿತರು ಬಿಜೆಪಿಗೆ, ಕುರುಬರು ಕಾಂಗ್ರೆಸ್‌ಗೆ ಎಂಬ ಪರಿಸ್ಥಿತಿ ನಿರ್ಮಾಣಗೊಳ್ಳುತ್ತಿದೆ. ಈ ಅವಧಿಯಲ್ಲಿ ನಡೆದಿರುವ ಎಲ್ಲ ಹಂತದ ಚುನಾವಣೆಗಳಲ್ಲಿ ಹಣದ ವ್ಯಾಪಕ ಬಳಕೆ, ಮತ್ತು ಪ್ರತಿ ನಂತರದ ಚುನಾವಣೆಯಲ್ಲಿ ಹೀಗೆ ಚಲಾವಣೆ ಆಗುತ್ತಿರುವ ಹಣದ ಬಳಕೆ ನಿರಂತರವಾಗಿ ಏರುತ್ತಿರುವುದು ಆತಂಕಕಾರಿಯಾಗಿದೆ. ಅಭ್ಯರ್ಥಿಯನ್ನು ಆರಿಸುವಾಗ ಬಂಡವಾಳಶಾಹಿ ರಾಜಕೀಯ ಪಕ್ಷಗಳು, ಯಾವುದೇ ಮಾರ್ಗದಲ್ಲಾದರೂ ಹಣ

– ಪುಟ 10ಕ್ಕೆ........

ಜನಶಕ್ತಿ
ಕನ್ನಡ ವಾರಪತ್ರಿಕೆ

ಉಡುಪಿ ಶ್ರೀ ಕೃಷ್ಣ ದೇವಾಲಯದಲ್ಲಿ ಅಮಾನವೀಯ ಪಂಕ್ತಿ ಬೇಧ - ಜಾತಿ ಬೇಧ ವಿರೋಧಿಸಿ, ಸಂವಿಧಾನ ಬದ್ಧ ಸಮಾನತೆಯನ್ನು ಸ್ಥಾಪಿಸಲು ಒತ್ತಾಯಿಸಿ

ಗಣರಾಜ್ಯೋತ್ಸವದಂದು ರಾಜ್ಯಮಟ್ಟದ ಪ್ರತಿಭಟನೆ

"ಕುಲ ಕುಲ ಕುಲವೆಂದು ಹೊಡೆದಾಡದಿರಿ
ನಿಮ್ಮ ಕುಲದ ನೆಲೆಯನೇನಾದರೂ ಬಲ್ಲಿರಾ, ಬಲ್ಲಿರಾ"
ಆತ್ಮ ಯಾವ ಕುಲ, ಜೀವ ಯಾವ ಕುಲ
ಪಂಚೇಂದ್ರಿಯಂಗಳ ಕುಲ ಯಾವುದಯ್ಯ

– ಕನಕದಾಸರು

ನಡೆವುದೊಂದೇ ಭೂಮಿ, ಕುಡಿವುದೊಂದೇ
ನೀರು ಸುಡುವಾಗ್ನಿಯೊಂದೇ ಇರುತಿರಲು
ಜಾತಿ ಎತ್ತಣದು ಸರ್ವಜ್ಞ

– ಸರ್ವಜ್ಞ

ಉಡುಪಿ ಶ್ರೀ ಕೃಷ್ಣನ ಭಕ್ತರಾದ ದಾಸಶ್ರೇಷ್ಠ ಕನಕದಾಸರು ಉಡುಪಿ ಅಷ್ಟಮಠಗಳ ಮುಂದೆ, ಇಡೀ ಕರ್ನಾಟಕದ ಮುಂದೆ ಈ ಪ್ರಶ್ನೆಯನ್ನೆತ್ತಿ ಇಂದಿಗೆ 500 ವರ್ಷಗಳಿಗಿಂತಲೂ ಹೆಚ್ಚಾಗಿದೆ. ಶಿವಶರಣರು ಜಾತಿಬೇಧವನ್ನು ತೊಡೆದುಹಾಕಲು ಪ್ರಯತ್ನಿಸಿ 800 ವರ್ಷಗಳಿಗೂ ಮಿಗಿಲಾಗಿದೆ. 1950 ಜನವರಿ 26 ರಂದು 'ಭಾರತದ ಜನತೆಯಾದ ನಮಗೆ' ನಾವೇ ಕೊಟ್ಟುಕೊಂಡ ಸಂವಿಧಾನ ಇದೇ ಭಾವನೆಯನ್ನು ಎತ್ತಿ ಹಿಡಿದು ಎಲ್ಲರೂ ಸಮಾನರು ಎಂದು ಘೋಷಿಸಿದೆ.

ಕೆಳಜಾತಿಯವರಿಗೆ ಕೃಷ್ಣನ ದರ್ಶನವನ್ನು ನಿರಾಕರಿಸಿದ್ದಕ್ಕಾಗಿ 'ಕನಕನ ಕಿಂಡಿ' ರೂಪುಗೊಂಡ ಪ್ರಕರಣ ಜಾತಿಬೇಧದ ವಿರುದ್ಧ ಜ್ವಲಂತ ಉದಾಹರಣೆಯಾಗಿದೆ. ಆದರೂ ಉಡುಪಿಯ ಶ್ರೀಕೃಷ್ಣ ದೇವಾಲಯದಲ್ಲಿ ಭೋಜನಕ್ಕೆ ಸಂಬಂಧಿಸಿ ಪಂಕ್ತಿಬೇಧ ಹಾಗೂ ಕಂದಾಚಾರಗಳು ಇಂದಿಗೂ ವಿಜೃಂಭಣೆಯಿಂದ ಮುಂದುವರೆದಿದೆ ಎನ್ನುವುದು ಮಾನವೀಯತೆಗೆ ಹಾಗೂ ದೇಶದ ಸಂವಿಧಾನಕ್ಕೆ ಎಸಗುತ್ತಿರುವ ಅಪಚಾರವಾಗಿದೆ.

ಊಟಕ್ಕಾಗಿ ಬಂದ ಜನರನ್ನು ವಿಂಗಡಿಸಲು ಅವರು ತೊಟ್ಟ ಮೇಲಂಗಿಗಳನ್ನು ಬಿಚ್ಚಿ ತೆಗೆದುಹಾಕಿ ಬರಿ ಮೈನಲ್ಲಿ ಊಟಕ್ಕೆ ಕುಳಿತುಕೊಳ್ಳಬೇಕು ಎಂಬ ಕಟ್ಟುಪಾಡಿನ ಜೊತೆಯಲ್ಲಿ ಮುಂಜಿ, ಸಂಧ್ಯಾವಂದನೆ, ಜನಿವಾರ ಇತ್ಯಾದಿಗಳ ಬಗ್ಗೆ ಪ್ರಶ್ನೆಗಳನ್ನು ಕೂಡಾ ಎದುರಿಸಬೇಕು. ಅಕಸ್ಮಾತ್ ಗೊತ್ತಿಲ್ಲದೆ ಅಥವಾ ಜೊತೆಯವರ ಒತ್ತಾಯಕ್ಕೆ ಮಣಿದು, ಬ್ರಾಹ್ಮಣರ ಪಂಕ್ತಿಯಲ್ಲಿ ಕುಳಿತಿದ್ದರೆ, ತಕ್ಷಣ ಊಟದ ಮಧ್ಯದಲ್ಲಿಯೇ, ಮೇಲೇಳಿಸಿ, ಹೊರಗೆ ದಬ್ಬುವಂತೆ ಅಮಾನವೀಯ ವರ್ತನೆ ದಿನನಿತ್ಯವೂ ಅನುಭವಿಸುವಂತಹ ವೇದನೆಯಾಗಿದೆ.

ಇತ್ತೀಚೆಗೆ ತಾನೆ ಉಡುಪಿಯ ಒಂದು ಪ್ರಸಿದ್ಧ ದೇವಾಲಯದಲ್ಲಿ ಗೌಡ ಸಾರಸ್ವತ ಬ್ರಾಹ್ಮಣ ಮಹಿಳೆಯೊಬ್ಬರನ್ನು, ಊಟದ ಮಧ್ಯದಲ್ಲಿಯೇ ಮೇಲೇಳಿಸಿ, ಹೊರಗೆ ಕಳುಹಿಸಿದ ಘಟನೆ ಮಾಧ್ಯಮಗಳಲ್ಲಿ ಪ್ರತಿಬಿಂಬಿತವಾಗಿತ್ತು. ಈ ಅಪಮಾನಕರ ಘಟನೆಯಿಂದ ನಾಗರೀಕ ಸಮಾಜ ತಲೆ ತಗ್ಗಿಸುವಂತಾಗಿದೆ. (ಹೀಗೆ ಬ್ರಾಹ್ಮಣರ ಒಳಗೂ ಕೂಡಾ ಮೇಲು-ಕೀಳು ಎಂಬ ಬೇಧದ ಆಚರಣೆಗಳನ್ನು ಕಾಣಬಹುದು) ಇನ್ನು ಬ್ರಾಹ್ಮಣ-ಬ್ರಾಹ್ಮಣೇತರ, ಬ್ರಾಹ್ಮಣೇತರ ಮೇಲ್ಜಾತಿಗಳು ಹಾಗೂ ದಲಿತರ ನಡುವಣ ಪಂಕ್ತಿಬೇಧ ಮತ್ತಷ್ಟು ತೀವ್ರವಾಗಿರುತ್ತದೆ ಹಾಗೂ ಅಪಮಾನಕಾರಿಯಾಗಿರುತ್ತದೆ. ಇನ್ನು ಉಡುಪಿಯ ಶ್ರೀಕೃಷ್ಣ ದೇವಾಲಯದಲ್ಲಂತೂ ಮಾಧ್ವ ಬ್ರಾಹ್ಮಣರು, ಮಾಧ್ವರಲ್ಲದ ಇತರ ಬ್ರಾಹ್ಮಣರು, ಅಧಿಕಾರಿಗಳು ಹಾಗೂ ಮಂತ್ರಿಗಳಂತಹ ವಿಶೇಷ ಅತಿಥಿಗಳು, ಜನಸಾಮಾನ್ಯರು ಹೀಗೆ ನಾಲ್ಕು ಬಗೆಯ ಪಂಕ್ತಿಗಳಿವೆ.



ದಾಸಶ್ರೇಷ್ಠ ಕನಕದಾಸರು

ಮಡ ಮಡೆ ಸ್ನಾನವೆಂಬ ಎಂಜಲಿನಲ್ಲಿ ಉರುಳಾಡುವ ಅಸಹ್ಯ!

ಇತ್ತೀಚೆಗೆ ಕುಕ್ಕೆ ಸುಬ್ರಹ್ಮಣ್ಯ ದೇವಾಲಯದಲ್ಲಿ ಬ್ರಾಹ್ಮಣರು ಉಂಡ ಎಂಜಲೆಲೆಗಳ ಮೇಲೆ ಕೆಳಜಾತಿಗಳ ಜನರು ಉರುಳಾಡುವ ದೃಶ್ಯ. ಅದರ ಬಗ್ಗೆ ಒಂದು ಮನವಿಯನ್ನು ಕೊಡ ಬಂದವರ ಮೇಲೆ ಸರ್ಕಾರಿ ಕಛೇರಿಯಲ್ಲಿಯೇ ಗೂಂಡಾಗಿರಿ – ರಾಜ್ಯದಲ್ಲಿ ಒಂದು ಪ್ರತಿಭಟನೆಯ ಅಲೆಯನ್ನೇ ಹುಟ್ಟುಹಾಕಿತು. ಅನೇಕ ಮಠಾಧಿಪತಿಗಳು ಕೂಡಾ ಇದನ್ನು ಖಂಡಿಸಿದರು. ಮಾತ್ರವಲ್ಲ ನಿಷೇದಿಸಬೇಕೆಂದು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಬಿಜೆಪಿ ಸರ್ಕಾರದ ಮಂತ್ರಿ, ಮುಖ್ಯಮಂತ್ರಿಗಳು ಸಂವಿಧಾನ ಪ್ರಣೀತ ಸಮಾನತೆಯನ್ನು ಎತ್ತಿ ಹಿಡಿಯುವುದನ್ನು ಬಿಟ್ಟು ಜನರ ನಂಬಿಕೆಗಳೇ ಹೆಚ್ಚು ಎನ್ನುವ ಮಾತುಗಳನ್ನಾಡಿದ್ದು, ಬಿಜೆಪಿಯ ಜಾತಿ ಪದ್ಧತಿಯನ್ನು ಸಮರ್ಥಿಸುವ ಧೋರಣೆಗೆ ಹಿಡಿದ ಕನ್ನಡಿಯಾಗಿದೆ. ಬಿಜೆಪಿ ಸರ್ಕಾರ ಹಾಗೂ ಅದರ ಮುಖಂಡರು ಸನಾತನ ಧರ್ಮದ ಹೆಸರಿನಲ್ಲಿ ಪರಂಪರಾಗತ ಮೌಲ್ಯಗಳ ಹೆಸರಿನಲ್ಲಿ ಜಾತಿ ಪದ್ಧತಿಯನ್ನು ಎತ್ತಿ ಹಿಡಿಯುವ, ಜಾತಿ ಬೇಧವನ್ನು ತೀವ್ರಗೊಳಿಸುವ ಕ್ರಮಗಳಿಗೆ ಕೈ ಹಾಕಿ ಜನತೆಯಲ್ಲಿ ಸಂಘರ್ಷಗಳಿಗೆ ಕಾರಣವಾಗಿದ್ದಾರೆ.

ಉಡುಪಿಯ ಅಷ್ಟಮಠಗಳ ಲ್ಲೊಂದಾದ ಪೇಜಾವರ ಮಠಾಧೀಶರು ಅಷ್ಟಮಠಗಳ ವಕ್ತಾರರಂತೆ ವರ್ತಿಸುತ್ತಾರೆ. ಇಡೀ ಹಿಂದು ಧರ್ಮದ ವಾರಸುದಾರರಂತೆ ಹೇಳಿಕೆಗಳನ್ನು ನೀಡುತ್ತಿರುತ್ತಾರೆ. 'ಹಿಂದೂ ನಾವೆಲ್ಲಾ ಒಂದು' ಎಂದು ಘೋಷಿಸುವ ವಿಶ್ವ ಹಿಂದೂ ಪರಿಷತ್‌ನ ಅಖಿಲ ಭಾರತ ಉಪಾಧ್ಯಕ್ಷರಾಗಿದ್ದಾರೆ. ದಲಿತರ ಕೇರಿಗಳಿಗೆ ಪಾದ ಬೆಳೆಸುತ್ತಾರೆ. ಅಸ್ಪೃಶ್ಯತೆಯ ಬಗ್ಗೆ ಮಾತನಾಡುತ್ತಾರೆ. ಆದರೆ ತಮ್ಮ ಮಠದಲ್ಲಿ ಹಾಗೂ ಕೃಷ್ಣ ದೇವಾಲಯದಲ್ಲಿ ಪಂಕ್ತಿಬೇಧ ಜಾತಿ ಬೇಧಗಳನ್ನು ಯಾವ ಎಗ್ಗಿಲ್ಲದೇ ಆಚರಿಸುತ್ತಾರೆ. ಇತ್ತೀಚೆಗೆ ಮಠಾಧಿಪತಿಗಳ ಜೊತೆ ಸಂವಾದವೊಂದರಲ್ಲಿ ತಮಗೆ ಸಂವಿಧಾನಕ್ಕಿಂತ ಶಾಸ್ತ್ರಗಳೇ ಹೆಚ್ಚೆಂದು ವಾದಿಸುವ ದಾರ್ಷ್ಟ್ಯವನ್ನು ತೋರಿದ್ದಾರೆ. ಇದು ಭಾರತವನ್ನು ಶತ ಶತಮಾನಗಳ ಕಾಲ ಹಿಂದಕ್ಕೆ ದೂಡುವ ಕೃತ್ಯ. ಅಷ್ಟೇ ಅಲ್ಲದೆ ಜಾತಿ ಪದ್ಧತಿ ಮೊದಲಾದ ಕಂದಾಚಾರಗಳನ್ನು ಎತ್ತಿ ಹಿಡಿಯುವ ಕೆಲಸ.

'ಯಾವಕಾಲದ ಶಾಸ್ತ್ರವೇನು ಹೇಳಿದರೇನು
ಎದೆಯ ದನಿಗೂ ಮಿಗಿಲು
ಶಾಸ್ತ್ರವಿಹುದೇನು' ಎಂಬ ರಾಷ್ಟ್ರಕವಿ ಕುವೆಂಪುರವರ ನುಡಿಗೆ ಪೂರ್ಣ ಎದುರು ನುಡಿ ಪೇಜಾವರ ಶ್ರೀಗಳ ಆ ಮಾತುಗಳು. 'ಹಿಂದೂ ನಾವೆಲ್ಲ ಒಂದು' ಎಂಬ ಮಾತುಗಳು, ದಲಿತರ ಕೇರಿಗೆ ಪಾದಯಾತ್ರೆಗಳೆಲ್ಲ ಪೊಳ್ಳು ಎಂಬುದನ್ನು ಸಾಬೀತು ಮಾಡುತ್ತವೆ. ಈ ಇಬ್ಬಗೆಯ ವರ್ತನೆಯನ್ನು ಸಂವಿಧಾನ ವಿರೋಧಿ ಧೋರಣೆಯನ್ನು ಕರ್ನಾಟಕದ ಜನತೆ ಒಕ್ಕೊರಲಿನಿಂದ ಖಂಡಿಸಬೇಕಾಗಿದೆ.

ಜಗತ್ತೆಲ್ಲಾ ಅರಿತಂತೆ ಮಡ ಮಡೆ ಸ್ನಾನವೆಂಬ ಅಸಹ್ಯದ ಮೂಲ ಪಂಕ್ತಿಬೇಧ. ಪಂಕ್ತಿಬೇಧದ ಮೂಲ ಜಾತಿಬೇಧ. ಮೇಲು ಜಾತಿ – ಕೆಳ ಜಾತಿ ಎಂಬ ಬೇಧವನ್ನು, ಜಾತಿ ವ್ಯವಸ್ಥೆಯನ್ನೇ ನಿರ್ಮೂಲ ಮಾಡಬೇಕಾಗಿದೆ.

'ನಾವೆಲ್ಲರು ಒಂದೇ ಜಾತಿ, ಒಂದೇ ಕುಲ, ನಾವು ಮನುಜರು' ಎಂಬ ಗೋಪಾಲಕೃಷ್ಣ ಅಡಿಗರಂತಹ ಕವಿಗಳ ವಾಣಿಯನ್ನು, ಜಾತಿ ಮತ ಗುಹೆಗಳಿಂದ ಹೊರಬನ್ನಿರಿ ಬಯಲಿಗೆ... ವಿಸ್ತಾರದ ಬೆಳಕಿಗೆ ಎಂಬ ಅವರ ಕರೆಯನ್ನು ನಾವು ವಾಸ್ತವಗೊಳಿಸಬೇಕಾಗಿದೆ.

ಅಸ್ಪೃಶ್ಯತೆ ಎಂಬ ಕೇಡು

ಈ ಜಾತಿ ಪದ್ಧತಿಯ ಕರಾಳ ಮುಖವೇ ಅಸ್ಪೃಶ್ಯತೆ. ಹಲವಾರು ರೀತಿಯ ಅಮಾನವೀಯ ಆಚರಣೆಗಳು ಕರ್ನಾಟಕ ರಾಜ್ಯಾದ್ಯಂತ ಆಚರಿಸಲ್ಪಡುತ್ತಿವೆ. ಹೋಟೆಲ್ ಪ್ರವೇಶ ನಿಷೇಧ, ಕುಡಿಯುವ ನೀರಿಗೆ ನಿಷೇಧ, ಕ್ಷೌರದಂಗಡಿಗಳಲ್ಲಿ ಕ್ಷೌರಕ್ಕೆ ಅವಕಾಶವಿಲ್ಲ, ಇತ್ಯಾದಿ ಇತ್ಯಾದಿ ಜಾತಿ ಪದ್ಧತಿಯಿಂದ ಕೆಳಜಾತಿಗಳ ಜನರಿಗೆ ಭೂಮಿ, ಸಂಪತ್ತುಗಳನ್ನು ವಂಚನೆ ಮಾಡಿ ಅವರನ್ನು ಬಿಟ್ಟಿಯಾಗಿ ಅಥವಾ ಜೀತಗಾರರಾಗಿ ದುಡಿಸಿಕೊಳ್ಳಬೇಕೆಂಬ ಪಾಳೆಯಗಾರಿ ವ್ಯವಸ್ಥೆಯಲ್ಲಿ ರೂಪುಗೊಂಡದ್ದು ಜಾತಿ ಪದ್ಧತಿ ಮತ್ತು ಅಸ್ಪೃಶ್ಯತೆ. ಇವು ಮಾನವ ಕುಲಕ್ಕೇ ಕಳಂಕ ತರುವಂತಹವು. ಇವುಗಳ ನಿರ್ಮೂಲನಕ್ಕೆ ನಾವೆಲ್ಲರೂ ಕಂಕಣಬದ್ಧರಾಗಬೇಕು.

ಕೃಷ್ಣ ದೇವಾಲಯವಲ್ಲದೆ ರಾಜ್ಯ ಸರ್ಕಾರದ ಮುಜರಾಯಿ ಇಲಾಖೆ ಅಡಿಯಲ್ಲಿರುವ 250 ಕ್ಕೂ ಹೆಚ್ಚು ದೇವಾಲಯಗಳಲ್ಲಿ ಇಂತಹ ಪಂಕ್ತಿಬೇಧವಿದೆ. ವಿವಿಧ ಜಾತಿ, ಪಂಗಡಗಳ ಅನೇಕ ಮಠಗಳಲ್ಲಿ ಕೂಡಾ ಪಂಕ್ತಿಬೇಧದ ಆಚರಣೆಗಳಿವೆ. ಜಾತಿ ವ್ಯವಸ್ಥೆಯ ವಿಷ ಬೀಜದ ಫಲವಾದ ಈ ಪಂಕ್ತಿಬೇಧವನ್ನು ಎಲ್ಲಾ ದೇವಾಲಯ ಮತ್ತು ಮಠಗಳಲ್ಲಿ ತೊಡೆದು ಹಾಕಬೇಕೆಂಬ, ಎಲ್ಲಾ ಜಾತಿಗಳ ಜನರ ಸಹ ಭೋಜನವನ್ನು ಆಚರಣೆಗೆ ತರಬೇಕೆಂಬುದೇ ಸಿಪಿಐ(ಎಂ)ನ ಆಶಯ. ಇದು ರಾಜ್ಯದ ಸಂತ, ಶರಣ, ಕವಿವರೇಣ್ಯರೆಲ್ಲರ ಮಾನವೀಯತೆ ಯುಳ್ಳವರೆಲ್ಲರ ಆಶಯವೂ ಹೌದು.

ದೇಶದ ಸಂವಿಧಾನ ಜಾರಿಗೆ ಬಂದ ಗಣರಾಜ್ಯೋತ್ಸವದ ದಿನ 2012 ರ ಜನವರಿ 26 ರಂದು ಶ್ರೀ ಕೃಷ್ಣ ದೇವಾಲಯದಲ್ಲಿ ಆಚರಣೆಯಲ್ಲಿರುವ ಪಂಕ್ತಿಬೇಧದ ವಿರುದ್ಧ ಜನ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸಂವಿಧಾನದ ಆಶಯಗಳನ್ನು ಎತ್ತಿ ಹಿಡಿಯಬೇಕಾಗಿದೆ. ಸಮಾನತೆಯ ಸಮಾಜ ನಿರ್ಮಾಣದ ಹಾದಿಯಲ್ಲಿನ ಜಾತಿಬೇಧದ ಅಡೆತಡೆಗಳನ್ನು ಕಿತ್ತೊಗೆಯಬೇಕಾಗಿದೆ.

ಆದ್ದರಿಂದ, ಸಾರ್ವಜನಿಕರು ರಾಜ್ಯಮಟ್ಟದ ಈ ಪ್ರತಿಭಟನಾ ಕಾರ್ಯಕ್ರಮದಲ್ಲಿ ದೊಡ್ಡ ಸಂಖ್ಯೆಯಲ್ಲಿ ಬಂದು, 'ಸಂವಿಧಾನದ ಆಶಯಗಳ ರಕ್ಷಣೆ'ಯ ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕೆಂದು ಸಿಪಿಐ(ಎಂ) ಪಕ್ಷ ವಿನಂತಿಸಿದೆ.

ಮಂಡ್ಯದ ಆ ಹಳ್ಳಿಯಲ್ಲಿ ನಿಜಕ್ಕೂ ನಡೆದದ್ದೇನು?.........

ಆಬಲವಾಡಿಯ ಕ್ರೌರ್ಯ

ಆಬಲವಾಡಿಯಲ್ಲಿ ದಿನಾಂಕ 6 ನವೆಂಬರ್ 2011 ರಂದು ತನ್ನ ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಂಡ ತಪ್ಪಿಗೆ ಅವಳ ಹೆತ್ತವರು ಕೊಟ್ಟ ಶಿಕ್ಷೆಯಂದರೆ ಅವಳನ್ನು ಮೊದಲು ಹೊಡೆದು ಹೊಡೆದು ರಸ್ತೆಯಿಂದ ಎಳೆದು ತಂದು ಅವಳ ಪ್ರಿಯಕರನ ಮನೆಯ ಮುಂದೆ ಮತ್ತೆ ಹಲ್ಲೆ ಮಾಡಿ ಆನಂತರ ತಮ್ಮ ಮುಂದೆ ಅವಳು ನೇಣು ಹಾಕಿಕೊಳ್ಳಬೇಕೆಂದು ಅವಳ ಅಪ್ಪ ಮತ್ತು ಸಂಬಂಧಿಕರು ಅರ್ಭಟಿಸಿದರು, ಅವಳಿಗೆ ಶಕ್ತಿ ಸಾಲದೆ ಕುಸಿದು ಬಿದ್ದಾಗ ಅವಳಪ್ಪ ಸ್ವತಃ ಮಣ್ಣಿನ ಕೋಣೆಯಲ್ಲಿರುವ ತೊಲೆಗೆ ನೇಣು ಹಾಕಿದ. ಈ ಘಟನೆಯನ್ನು ಮರೆಯಲ್ಲಿ ನಿಂತು ನೋಡಿದ ಅವಳ ಪ್ರಿಯಕರ ಗೋವಿಂದರಾಜುನ ತಾಯಿ ಮತ್ತು ಅತ್ತಿಗೆ ಕನ್ನಡ ಪ್ರಭಕ್ಕೆ ಹೇಳಿದ ಮಾತುಗಳು ಯಾರ ಹೃದಯವನ್ನಾದರೂ ಕಲಕದೇ ಇರದು.

'ಸುವರ್ಣಾಳನ್ನು ಎಳೆಂಟು ಮಂದಿ ಎತ್ಕೊಂಡು ನಮ್ಮ ಮನೆಗೆ ಬಂದ್ರು, ಅವಳಪ್ಪ ದವಲನ ರಾಮಕೃಷ್ಣನೂ ಜತೆಗಿದ್ರು. ಸುವರ್ಣಾಳನ್ನು ಕೆಲ ಕ್ಷಣ ಮನೆ ಜಗುಲಿ ಮೇಲೆ ಮಲಗಿಸಿದ್ರು, ಮರದಲ್ಲಿದ್ದ ಹಗ್ಗ ತಗೊಂಡು ತೊಲೆಗೆ ಕಟ್ಟಿ ನೇಣು ಬಿಗಿದಾಗ ಸುವರ್ಣಾ ಸಣ್ಣಗೆ ಚೀರಿಕೊಂಡ್ಳು. ಮರೆಯಲ್ಲಿ ನಿಂತು ಕಣ್ಣಾರೆ ನೋಡಿದ ಆ ದೃಶ್ಯ ಮರೆಯೋಕೆ ಆಗ್ತಿಲ್ಲ.....'

ಅದೇ ದಿನ ಅಲ್ಲೇ ಇದ್ದ ಗೋವಿಂದರಾಜುನ ಮೇಲೂ ಹಲ್ಲೆ ಮಾಡಿರುವರು. ರಸ್ತೆಯಲ್ಲಿಯೇ ಕಾಲು ಹಿಡಿದುಕೊಂಡು ಎಳೆದಾಡಿ ಹೊಡೆದಿರುವರು. ಅವರಿಂದ ತಪ್ಪಿಸಿಕೊಂಡ ಗೋವಿಂದರಾಜು ಅಡವಿ ಬಿದ್ದು ಓಡಿಹೋಗಿದ್ದಕ್ಕೆ ಬಚಾವಾಗಿರುವನು. ಸುವರ್ಣಾಳ ತಂದೆ ಮತ್ತು ಸಂಬಂಧಿಕರು ಗೋವಿಂದರಾಜುನ ಮನೆಯ ಮೇಲೆಯೂ ಧಾಳಿ ಮಾಡಿರುವರು.. ಇದರಿಂದ ತಲ್ಲಣಿಸಿದ ಕುಟುಂಬ ಪೂರ್ತಿ ಊರು ತೊರೆದಿದ್ದಾರೆ. ಕೆಲವು ಪ್ರಗತಿಪರ ಸಂಘಟನೆಗಳು ಇವರ ನೆರವಿಗೆ ನಿಂತಿವೆ. ಈಗಾಗಲೇ ಮಾನವ ಹಕ್ಕುಗಳ ಆಯೋಗಕ್ಕೆ ಇವರು ಭೇಟಿಯಾಗಿದ್ದಾರೆ. ಆದರೆ ಪೋಲಿಸರು ಮತ್ತು ಜಿಲ್ಲಾ ಆಡಳಿತ ಅತ್ಯಂತ ಅಮಾನವೀಯವಾಗಿ ನಡೆದುಕೊಂಡಿದೆ. ಘಟನೆ ನಡೆದ ಮರು ದಿನ ಪೋಲಿಸರು ಗ್ರಾಮಕ್ಕೆ ಭೇಟಿ ಕೊಟ್ಟಿರುವರು. ನೇಣು ಬಿಗಿದ ಸ್ಥಳವನ್ನು ಪರಿಶೀಲಿಸಿ ಏನೇನೋ ಬರೆದುಕೊಂಡು ಹೋಗಿರುವರು. ಆದರೆ ಅಲ್ಲಿಂದ ಎರಡು ತಿಂಗಳ ವರೆಗೆ ಚಕಾರವೆತ್ತದೆ ಬಾಯಿ ಮುಚ್ಚಿಕೊಂಡಿದ್ದಾರೆ. ಜೀವ ಭಯ ಹಾಕಿರುವ ಕಾರಣಕ್ಕೆ ಏನೇನೂ ತಪ್ಪು ಮಾಡಿರದ ಗೋವಿಂದರಾಜುನ ಕುಟುಂಬ ಊರು ಬಿಟ್ಟಿದೆ. ಆದರೆ ಬಹಿರಂಗವಾಗಿ ಮಗಳಿಗೆ ನೇಣು ಹಾಕಿದ ಸುವರ್ಣಾಳ ತರಿದೆ ಮತ್ತು ಬಂಧು-ಬಳಗದವರು ಆರಾಮಾಗಿ ಊರಲ್ಲಿ ಓಡಾಡಿಕೊಂಡಿದ್ದರು. ಯಾರೂ ದೂರು ಕೊಡದೇ ಹೋದರೂ ಪೋಲಿಸರು 176 ರ ಕಲಮ್ಮಿನ ಪ್ರಕಾರ ತಾವೇ ದೂರು ದಾಖಲಿಸಿಕೊಂಡು ಪ್ರಕರಣದ ತನಿಖೆ ಮಾಡಿ ತಪ್ಪಿತಸ್ಥರನ್ನು ಬಂಧಿಸಬಹುದಿತ್ತು. ಆದರೆ ಪೋಲಿಸ್ ಇಲಾಖೆ ಅಕ್ಷಮ್ಯ ಅಪರಾಧ ಎಸಗಿದೆ. ಮತ್ತು ಅಮಾನವೀಯವಾಗಿ ನಡೆದುಕೊಂಡಿದೆ. ಒಕ್ಕಲಿಗರ ಜನಸಂಖ್ಯೆ ಹೆಚ್ಚಿರುವ ಕಾರಣ ಮತರಾಜಕಾರಣ ಮಾಡುವ ಬಿಜೆಪಿಯ ಗೃಹ ಮಂತ್ರಿ ಇಡೀ ಪ್ರಕರಣವನ್ನು ದಿಕ್ಕು ತಪ್ಪಿಸುವಂಥ ಹೇಳಿಕೆ ಕೊಟ್ಟಿರುವುದು ಅತ್ಯಂತ ನಾಚಿಗ್ಗೇಡು. ಇದೊಂದು ಆತ್ಮಹತ್ಯೆ ಎಂದು ಸಮರ್ಥಿಸಿಕೊಂಡಿರುವುದು ನೋಡಿದರೆ ಬಿಜೆಪಿ ಸನಾತನ ನಂಬಿಕೆಗಳನ್ನು ಕಾಪಾಡಲು ಸುವರ್ಣಾಳಂಥ ಯುವತಿಯರನ್ನು ಮತ್ತು ದಲಿತ ಕುಟುಂಬವನ್ನು ಬಲಿ ಕೊಡಲು ಸನ್ನದ್ಧವಾಗಿದೆ ಎಂದೇ ಅರ್ಥ. ಮನು ಸ್ಮೃತಿಯ ಸಿದ್ಧಾಂತ ಒಪ್ಪಿಕೊಂಡ ಬಿಜೆಪಿಯು ಅಧಿಕಾರಕ್ಕೆ ಬಂದ ಕೂಡಲೇ ಸಹಜವಾಗಿಯೇ ದಲಿತರನ್ನು ಮಹಿಳೆಯರನ್ನು ದಮನಿಸುವ ಕೃತ್ಯಕ್ಕೆ ಕೈ ಹಾಕಿದೆ. ಜಾತಿ ರಾಜಕಾರಣವೆನ್ನುವುದು ಎಷ್ಟು ಅಪಾಯಕಾರಿ ಇರುತ್ತದೆ ಎನ್ನುವುದಕ್ಕೆ ಆಬಲವಾಡಿಯ ದಲಿತ ಕುಟುಂಬದ ಪರಿಸ್ಥಿತಿ ನೋಡಿದರೆ ಅರಿವಾಗುತ್ತದೆ.

ಇದನ್ನು ತಿಳಿದ ಜನವಾದಿ ಮಹಿಳಾ ಸಂಘಟನೆ ಮತ್ತು ಅಖಿಲ ಭಾರತ ಯುವಜನ ಸಂಘಟನೆಗಳು ಜಂಟಿ ನಿಯೋಗವೊಂದು ಆ ಗ್ರಾಮಕ್ಕೆ ಭೇಟಿ ಕೊಟ್ಟಿತು. ದಿ.12.1.2012 ರಂದು ಆಬಲವಾಡಿಗೆ ಬೇಟಿ ಕೊಟ್ಟ ತಂಡದಲ್ಲಿ ಕೆ. ನೀಲಾ, ಗೌರಮ್ಮ, ದೇವಿ, ಕುಮಾರಿ, ಹಾಗು ಡಿವೈಎಫೈನ ರಾಜ್ಯ ಮುಖಂಡರಾದ ಭರತರಾಜ, ಕೃಷ್ಣಪ್ಪ, ಲಿಂಗರಾಜುಮೂರ್ತಿ, ಸುನೀತಾ, ಶೋಭಾ, ಲತಾ, ಹೊಸಗಾವಿ ಪುಟ್ಟಸ್ವಾಮಿ ಇದ್ದರು. ಗ್ರಾಮದ ಅನೇಕರನ್ನು ಬೇಟಿಯಾದ ನಮ್ಮ ನಿಯೋಗವು ಸಮಗ್ರ ಮಾಹಿತಿಗಳನ್ನು ಕಲೆ ಹಾಕಿತು. ಉತ್ತರ ಪ್ರದೇಶ, ರಾಜಸ್ಥಾನ, ಬಿಹಾರದಂಥ ಹಿಂದಿ ರಾಜ್ಯಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಘಟಿಸುತ್ತಿರುವ ಮರ್ಯಾದಾ ಹತ್ಯೆಗಳು ಅಷ್ಟೇ ಕ್ರೂರವಾಗಿ ಕರ್ನಾಟಕದಲ್ಲಿಯೂ ಮರುಕಳಿಸುತ್ತಿರುವುದು ಅತ್ಯಂತ ಅಪಾಯದ ಸಂಗತಿ. ಅದರಲ್ಲಿಯೂ ಬಿಜೆಪಿಯು ಅಧಿಕಾರಕ್ಕೆ ಬಂದಾಗಿಂದ ದಲಿತರ ಮತ್ತು ಅಲ್ಪಸಂಖ್ಯಾತರ ಮೇಲೆ ದೌರ್ಜನ್ಯ, ಮಹಿಳೆಯರ ಮೇಲೆ ಧಾಳಿ, ಕೊಲೆ, ಅತ್ಯಾಚಾರ, ಸುಲಿಗೆಗಳು ಬಹಿರಂಗವಾಗಿಯೇ ವೆಗ್ಗಳವಾಗಿ ನಡೆಯುತ್ತಿವೆ. ಮಾತ್ರವಲ್ಲ ಸಹಜ ಪ್ರೇಮ ಪ್ರಕರಣಗಳಿಗೂ ಹತ್ಯೆ ಮಾಡುವಂಥ ನೀಚ ಕೃತ್ಯವನ್ನು ಬೆಂಬಲಿಸುವ ಗೃಹ ಮಂತ್ರಿಯ ಅಮಾನುಷ ಸಂಸ್ಕಾರಕ್ಕೆ ಧಿಕ್ಕಾರ ಹೇಳದೇ ಗತ್ಯಂತರವೇ ಇಲ್ಲ.

ಆದ್ದರಿಂದಲೇ ಆಬಲವಾಡಿಂತು ಪ್ರಕರಣವನ್ನು ತಕ್ಷಣ ತನಿಖೆ ಮಾಡದ ಜಿಲ್ಲಾ ಆಡಳಿತದ ಮೇಲೆ ಕ್ರಮ ಕೈಗೊಳ್ಳಲು ಸಂಘಟಗಳು ಒತ್ತಾಯಿಸಿವೆ. ಗೃಹ ಮಂತ್ರಿ ರಾಜಿನಾಮೆ ,ಕೊಡಲಿ ಎಂದು ಆಗ್ರಹಿಸಿವೆ. ಪೋಲೀಸ್ ಅಧಿಕಾರಿಗಳ ಮೇಲೆ ಕಾನೂನು ಕ್ರಮ ಕೈಗೊಳ್ಳಬೇಕೆಂದು ಕೇಳಿವೆ.

– ಕೆ.ನೀಲಾ

ಪ್ರಜಾವಾಣಿ ಪತ್ರಿಕಾ ಕಚೇರಿಗಳ ಮೇಲಿನ ಧಾಳಿ ಖಂಡಿಸಿ ಜನವರಿ 18, 2012ರಂದು ಎಸ್‌ಎಫ್‌ಐ, ಡಿವೈಎಫ್‌ಐ, ಜೆಎಂಎಸ್ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ನಡೆದ ಪ್ರತಿಭಟನೆ.



ಪ್ರಜಾವಾಣಿ ಪತ್ರಿಕೆಯ ಮೇಲೆ ಸಂಘ ಪರಿವಾರದ ಧಾಳಿಗೆ ಸಿಪಿಐ(ಎಂ) ತೀವ್ರ ಖಂಡನೆ

ಸ್ವಾಮಿ ವಿವೇಕಾನಂದರ ಚಿಂತನೆ ಮತ್ತು ಬದುಕಿನ ಕುರಿತಂತೆ ಅತ್ಯಂತ ನೈಜ ಸಂಗತಿಗಳನ್ನು ಒಳಗೊಂಡ ವಿಚಾರ ಪೂರ್ಣ ಲೇಖನವನ್ನು ಪ್ರಕಟಿಸಿದ ಕಾರಣಕ್ಕಾಗಿ ಪ್ರಜಾವಾಣಿ ಪತ್ರಿಕೆಯ ಹುಬ್ಬಳ್ಳಿ, ಶಿವಮೊಗ್ಗಗಳ ಕಚೇರಿಗಳ ಮೇಲೆ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್‌ನ ಕಾರ್ಯಕರ್ತರು ನಡೆಸಿದ ಗೂಂಡಾ ಧಾಳಿಯನ್ನು ಭಾರತ ಕಮ್ಯುನಿಷ್ಟ್ ಪಕ್ಷ (ಮಾರ್ಕ್ಸ್‌ವಾದಿ)ದ ಕಾರ್ಯದರ್ಶಿ ಮಂಡಳಿಯು ಅತ್ಯಂತ ತೀವ್ರವಾಗಿ ಖಂಡಿಸುತ್ತದೆ. ಇದು ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲಿನ ಕ್ರೂರ ಹಲ್ಲೆಯಾಗಿದ್ದು ಅವರ ಹತಾಶೆ ಮತ್ತು ಫ್ಯಾಸಿಸ್ಟ್ ಪ್ರವೃತ್ತಿಯನ್ನು ತೋರಿಸುತ್ತದೆ. ಲೇಖನದಲ್ಲಿ ವ್ಯಕ್ತಪಡಿಸಲಾದ ಅಭಿಪ್ರಾಯಗಳಿಗೆ ಭಿನ್ನಾಭಿಪ್ರಾಯಗಳಿದ್ದರೆ ಅದನ್ನು ಬರಹದ ಮೂಲಕ ವ್ಯಕ್ತಪಡಿಸಬಹುದಿತ್ತು. ಆದರೆ ಹಾಗೆ ಮಾಡದೇ ದೈಹಿಕ ಧಾಳಿಯನ್ನು ನಡೆಸುವುದು ಪ್ರಜಾಸತ್ತಾತ್ಮಕ ಮೌಲ್ಯಗಳು ಮತ್ತು ವಿಧಾನಗಳ ಬಗೆಗಿನ ಅಸಹನೆ ಹಾಗೂ ಸಂಘ ಪರಿವಾರವು ತಲುಪಿರುವ ಬೌದ್ಧಿಕ ದಿವಾಳಿತನವನ್ನು ತೋರಿಸುತ್ತದೆ. ವಿವೇಕಾನಂದರ ಚಿಂತನೆಗಳನ್ನು ತಿರುಚಿ, ಇಲ್ಲವೇ ಸತ್ಯಗಳನ್ನು ಮರೆ ಮಾಚಿ ತಮ್ಮ ಕೋಮುವಾದಿ ಫ್ಯಾಸಿಷ್ಟ್ ಸ್ವರೂಪದ 'ಹಿಂದುತ್ವ'ದ ಗುಪ್ತ ಅಜೆಂಡಾಕ್ಕೆ ದುರ್ಬಳಕೆ ಮಾಡಿಕೊಳ್ಳುತ್ತಾ ಬಂದದ್ದು ಈಗ ಬಯಲಾಗುತ್ತಿರುವ ಭಯ ಅವರನ್ನು ಕಾಡುತ್ತಿರುವಂತಿದೆ. ಸಂಘಪರಿವಾರ ಹೇಳುವ ಹಿಂದುತ್ವಕ್ಕೂ, ಸ್ವಾಮಿ ವಿವೇಕಾನಂದರು ಹೇಳುವ ವಿಶಾಲಾರ್ಥದ ಹಿಂದು ಧರ್ಮ ಬೇರೆ ಬೇರೆ ಎಂಬ ಸತ್ಯ ಜನತೆಗೆ ತಿಳಿಯದಂತೆ ಇಂತಹ ಧಾಳಿಯನ್ನು ರೂಪಿಸಲಾಗಿದೆ. ಆದರೆ ಇಂತಹ ದಬ್ಬಾಳಿಕೆಗಳ ಮೂಲಕ ಸತ್ಯ, ನ್ಯಾಯದ ದನಿಯನ್ನು ಅಡಗಿಸಲು ಸಾಧ್ಯವಿಲ್ಲ ಎಂದು ಸಿಪಿಐ(ಎಂ) ಎಚ್ಚರಿಸಿದೆ.

ನಾಡಿನ ಜನತೆ ಇಂತಹ ಶಕ್ತಿಗಳ ಹುನ್ನಾರಗಳನ್ನು ಅರಿಯಬೇಕು ಹಾಗೂ ಒಕ್ಕೊರಲಿನಿಂದ ಇಂತಹ ಗೂಂಡಾಗಿರಿಯನ್ನು ಖಂಡಿಸಬೇಕೆಂದು ಅಭಿವ್ಯಕ್ತಿ ಸ್ವಾತಂತ್ರದ ಮೇಲೆ ಧಾಳಿ ನಡೆಸಿದ ಗುಂಡಾಗಳನ್ನು ಬಂಧಿಸಿ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕೆಂದು ರಾಜ್ಯ ಸರ್ಕಾರವನ್ನು ಸಿಪಿಐ(ಎಂ) ಒತ್ತಾಯಿಸುತ್ತದೆ.

ಬೇಡ ಇಸ್ರೇಲ್..........

ಪುಟ 3ರಿಂದ ....

ಫ್ಯಾಲೇಸ್ತೇನ್ ಜನತೆಯನ್ನು ತಾಯ್ನಾಡಿನಿಂದಲೇ ನಿರ್ಮೂಲನೆಗೊಳಿಸಿ, ದೇಶವನ್ನೇ ಕಬಳಿಸಿ ಆ ಜನಾಂಗವನ್ನೇ ನಾಶಗೊಳಿಸುತ್ತಿರುವ ಮಹಾ ಪಾತಕಿ. ಅದರ 'ಮೊಸ್ಸಾಡ್' ಎಂಬ ಗುಪ್ತಚಾರ ಸಂಸ್ಥೆ ವಿಧ್ವಂಸಕ ಕೃತ್ಯಗಳಲ್ಲಿ ಎತ್ತಿದ ಕೈ. ಹೀಗಾಗಿ ವಿಶ್ವಸಂಸ್ಥೆಯ ಖಂಡನೆಗೆ ಹಲವು ಬಾರಿ ಈಡಾಗಿದೆ. ಇಂತಹ ದೇಶವನ್ನೇ ಅಮೇರಿಕಾ ಅರಬ್ ರಾಷ್ಟ್ರಗಳ ವಿರುದ್ಧ, ಮುಸ್ಲಿಂ ಧರ್ಮಿಯರ ವಿರುದ್ಧ ತನ್ನ ದುಷ್ಟ ಯುದ್ಧವ್ಯೂಹಕ್ಕೆ ಬಳಸುತ್ತಾ ಬಂದಿದೆ.

ಇಂತಹ ದುಷ್ಟ ದೇಶದೊಂದಿಗೆ ಭಾರತ ಹಲವಾರು ದಶಕಗಳ ಕಾಲ ತನ್ನ ರಾಜತಾಂತ್ರಿಕ ಸಂಬಂದವನ್ನೇ ಇರಿಸಿಕೊಂಡಿರಲಿಲ್ಲ. ಫ್ಯಾಲೆಸ್ತೇನಿಯನ್ನರ ಹೋರಾಟಕ್ಕೆ ಬೆಂಬಲಿಸುತ್ತಾ, ಅಲಿಪ್ತ ವಿದೇಶಾಂಗ ನೀತಿ ಅನುಸರಿಸುತ್ತಾ ಬಂದಿತ್ತು. ಆದರೆ ಜಾಗತೀಕರಣ-ಉದಾರೀಕರಣದ ಜಾರಿಗೆ ತೊಡಗಿ ಅಮೇರಿಕಾದ ಜೂನಿಯರ್ ಪಾರ್ಟನರ್ ಆದ ಮೇಲೆ ದೇಶದ ಹಿಂದಿನ ಪರಂಪರೆ, ನೀತಿಗಳಿಗೆ ಅದೇ ಕಾಂಗ್ರೆಸ್ ಪಕ್ಷ (ಬಿಜೆಪಿಯೂ ಸಹ) ಕುಣಿಕೆ ಹಾಕಿದೆ. ಭಯೋತ್ಪಾದನೆಯ ವಿರುದ್ಧ ಭಾರತ ಅದರೋದಿಗೆ ಕೈ ಜೋಡಿಸುವುದೆಂದರೆ.. ಅದೇ ದುರಂತವಾಗಲಿದೆ.

ಇಂತಹ ದೇಶದ ರಾಯಭಾರಿ ಕಛೇರಿ ಬೆಂಗಳೂರಿನಲ್ಲಿ (ದೇಶದಲ್ಲಿ) ಆರಂಭಗೊಂಡು ಕಾರ್ಯನಿರ್ವಹಿಸುವುದು ಹಲವು ಅಪಾಯಗಳಿಗೆ ಆಹ್ವಾನ ಕೊಟ್ಟಂತೆ. ಆದ್ದರಿಂದ ಇಂತಹ ಕುಖ್ಯಾತ ಬರ್ಬರ ದೇಶಕ್ಕೆ ರತ್ನಗಂಬಳಿ ಸ್ವಾಗತ ನೀಡುವುದು ಖಂಡನೀಯ.ಆದ್ದರಿಂದ

ಎಲ್ಲಾ ಮಾನವಪ್ರೇಮಿಗಳು, ಸ್ವಾತಂತ್ರ್ಯ ಪ್ರೇಮಿಗಳು ಸರ್ಕಾರದ ನಿರ್ಣಯಕ್ಕೆ ಒಕ್ಕೊರಲಿನ ವಿರೋಧ, ಧಿಕ್ಕಾರ ಹೇಳಬೇಕು. ತನ್ನ ನಿರ್ಧಾರದಿಂದ ಸರಕಾರ ಹಿಂತೆಗೆಯಬೇಕು.

ನಮ್ಮ ಹಣಕಾಸು ವಲಯವನ್ನು ತೆರೆಯದಂತೆ ತಡೆದುದರಿಂದಲೇ ಜಾಗತಿಕ ಕುಸಿತದ ವಿನಾಶಕಾರಿ ಪ್ರಭಾವವನ್ನು ಎದುರಿಸಿ ನಿಲ್ಲಲು ಭಾರತಕ್ಕೆ ನೆರವು ಸಿಕ್ಕಿತು ಎಂಬ ನಮ್ಮ ಸ್ವಂತ ಅನುಭವದಿಂದಲೂ ಪಾಠ ಕಲಿಯಲು ನಿರಾಕರಿಸಿರುವ ಯುಪಿಎ-2 ಸರಕಾರ, ಈಗ ಜಗತ್ತಿನ ಶ್ರೀಮಂತ ದೇಶಗಳ ಬಳಿ ಮುಂದುವರೆಯುತ್ತಿರುವ ಹಿಂಜರಿತದ ವಿಷವರ್ತುಲವನ್ನು ಭೇಧಿಸುವಂತಹ ಹಣಕಾಸು ಅಥವ ಆರ್ಥಿಕ ಮದ್ದುಗುಂಡುಗಳೇನೂ ಇಲ್ಲ ಎಂಬ ವಿಶ್ವಬ್ಯಾಂಕಿನ ಇತ್ತೀಚಿನ ಮುನ್ನೆಚ್ಚರಿಕೆಗೂ ಕುರುಡಾಗಿರುವಂತೆ ಕಾಣುತ್ತಿದೆ. ಇನ್ನಷ್ಟು ಉದಾರೀಕರಣ ಕ್ರಮಗಳನ್ನು ತಂದು ವಿದೇಶಿ ಹಣವನ್ನು ಆಕರ್ಷಿಸಿ ನಮ್ಮ ಬೆಳವಣಿಗೆಗೆ ಉತ್ತೇಜನೆ ಪಡೆಯಬಹುದು ಎಂದು ಕನಸು ಕಾಣುತ್ತಿದೆ.

ಯುಪಿಎ ಸರಕಾರ ವಿಶ್ವಬ್ಯಾಂಕಿನ ಮುನ್ನೆಚ್ಚರಿಕೆಗಾದರೂ ಲಕ್ಷ್ಯ ಕೊಡಲಿ!

'ಪೀಪಲ್ಸ್ ಡೆಮಾಕ್ರಸಿ' ವಾರಪತ್ರಿಕೆಯ ಜನವರಿ 18, 2012 ರ ಸಂಚಿಕೆಯ ಸಂಪಾದಕೀಯದಿಂದ

ಭಾರತದ ಆರ್ಥಿಕ ಒಂದು ವರ್ಷದ ನಿಧಾನಗತಿಯ ಬೆಳವಣಿಗೆಯ ನಂತರ ಈಗ ಮತ್ತೆ ಹಿಂದಿನಂತೆ ಚುರುಕುಗೊಳ್ಳುವುದು ಖಂಡಿತ ಎಂದು ಪ್ರಧಾನ ಮಂತ್ರಿಗಳು ಮತ್ತು ನವ-ಉದಾರವಾದಿ ಪಂಡಿತರುಗಳು ಆಶಾವಾದವನ್ನು ಸೃಷ್ಟಿಸುತ್ತಿದ್ದಾರೆ. ಆದರೆ ಅವರ ಗುರುಗಳು, ಅಂದರೆ, ವಿಶ್ವಬ್ಯಾಂಕ್ ನೀಡಿರುವ ಎಚ್ಚರಿಕೆ ಈ ಆಶಾವಾದದ ಮೇಲೆ ತಣ್ಣೀರೆರಚಿದೆ. ಅಭಿವೃದ್ಧಿ ಹೊಂದುತ್ತಿರುವ ದೇಶಗಳು, ನಿರ್ದಿಷ್ಟವಾಗಿ ಭಾರತ, 2008-09ರ ಜಾಗತಿಕ ಆರ್ಥಿಕ ಕುಸಿತದಷ್ಟು ಅಥವ ಅದಕ್ಕಿಂತಲೂ ಕೆಟ್ಟದಾದ ಒಂದು ಬಿಕ್ಕಟ್ಟಿಗೆ ಸಿದ್ಧವಾಗಿರಬೇಕು ಎಂದು ವಿಶ್ವಬ್ಯಾಂಕ್ ಅಶುಭಸೂಚಕ ಎಚ್ಚರಿಕೆ ನೀಡಿದೆ.


"ಜಗತ್ತಿನ ಅತಿ ದೊಡ್ಡ ಆರ್ಥಿಕ ಪ್ರದೇಶವಾದ ಯುರೋಪಿಯನ್ ಸಂಘ ಹಿಂಜರಿತ ಅನುಭವಿಸುತ್ತಿರುವಾಗಲೇ, ಜಾಗತಿಕ ಆರ್ಥಿಕದ ಚಾಲಕಶಕ್ತಿ-ಅಭಿವೃದ್ಧಿಶೀಲ ದೇಶಗಳು-ನಿಧಾನಗೊಂಡಿದೆ; ಇವೆರಡೂ ಪರಸ್ಪರ ಉಣಿಸಬಹುದು" ಎಂದು ಜನವರಿ 18 ರ ಮುಂಜಾನೆ ಮಾತಾಡುತ್ತ, ವಿಶ್ವಬ್ಯಾಂಕಿನ ಮಹದಾರ್ಥಿಕ ವಿಭಾಗದ ಮುಖ್ಯಸ್ಥರು ಹೇಳಿರುವುದಾಗಿ ಲಂಡನ್ನಿನ 'ಫಿನಾನ್ಶಿಯಲ್ ಎಕ್ಸ್‌ಪ್ರೆಸ್' ಪತ್ರಿಕೆ ವರದಿ ಮಾಡಿದೆ. ವಿಶ್ವ ಬ್ಯಾಂಕ್‌ನ ಆರ್ಥಿಕ ಭವಿಷ್ಯವಾಣಿಗಳು ಜೂನ್ 2011ರಲ್ಲಿ ಮಾಡಿದ್ದಕ್ಕಿಂತ ಬಹಳಷ್ಟು ಕೆಳಗಿಳಿದಿವೆ. 2011ರಲ್ಲಿ ವ್ಯಕ್ತಗೊಳಿಸಿದ ಭಯ ಈಗ ನಿಜವಾಗಿದೆ. ಜಾಗತಿಕ ಆರ್ಥಿಕ 2012ರಲ್ಲಿ 2.5ಶೆ.ದಷ್ಟು, 2013ರಲ್ಲಿ 3.1ಶೇ.ದಷ್ಟು ಬೆಳೆಯಬಹುದು ಎನ್ನಲಾಗಿದೆ. ಹಿಂದಿನ ಭವಿಷ್ಯವಾಣಿ ಈ ಎರಡೂ ವರ್ಷಗಳಲ್ಲಿ 3.6ಶೇ. ಬೆಳವಣಿಗೆ ಇರಬಹುದು ಎಂದಿತ್ತು. ಇದುವರೆಗೆ ಯುರೋ ವಲಯದ ದೇಶಗಳ ಆರ್ಥಿಕಗಳು ಪ್ರತ್ಯೇಕವಾಗಿ ಕುಗ್ಗುತ್ತಿರುವುದನ್ನು ಕಾಣುತ್ತಿದ್ದೆವು. ಇನ್ನು ಮುಂದೆ ಇಂತಹ ಆರ್ಥಿಕ ಕುಗ್ಗುವಿಕೆ ಇಡೀ ಯುರೋವಲಯದಲ್ಲಿ ಒಟ್ಟಾಗಿ ಕಾಣಬರಲಿದೆ- ಅಂದರೆ 2012ರಲ್ಲಿ ಆರ್ಥಿಕ ಬೆಳವಣಿಗೆಯೆಂಬುದೇ ಈ ಪ್ರದೇಶದಲ್ಲಿ ಇರುವುದಿಲ್ಲ, ಬದಲಿಗೆ ಇಳಿಕೆಯಿರುತ್ತದೆ. ಇತರ ಮುಂದುವರೆದ ದೇಶಗಳು ಹೆಚ್ಚೆಂದರೆ 2.1 ಶೇ. ಬೆಳವಣಿಗೆ ಕಾಣಬಹುದು.

ಕೈಗೂಡದ ನಿರೀಕ್ಷೆ

ಜಗತ್ತಿನ ಶ್ರೀಮಂತ ದೇಶಗಳ ಬಳಿ ಮುಂದುವರೆಯುತ್ತಿರುವ ಹಿಂಜರಿತದ ವಿಷವರ್ತುಲವನ್ನು ಬೇಧಿಸುವಂತಹ ಹಣಕಾಸು ಅಥವ ಆರ್ಥಿಕ ಮದ್ದುಗುಂಡುಗಳೇನೂ ಈಗ ಇಲ್ಲ ಎಂದು ವಿಶ್ವಬ್ಯಾಂಕ್ ಎಚ್ಚರಿಸಿರುವಾಗ ಭಾರತದಲ್ಲಿ ಇನ್ನಷ್ಟು ಉದಾರೀಕರಣ ವಿದೇಶಿ ಹಣವನ್ನು ಆಕರ್ಷಿಸಿ ನಮ್ಮ ಬೆಳವಣಿಗೆಗೆ ಉತ್ತೇಜನೆ ಸಿಗಬಹುದು ಎಂಬುದು ಬಹುದೂರದ ನಿರೀಕ್ಷೆಯಾಗಿ ಕಾಣುತ್ತಿದೆ.

ಹೀಗಿದ್ದಾಗ್ಯೂ, ಯುಪಿಎ-2 ಸರಕಾರ ಸಂಸತ್ತಿನ ಬಜೆಟ್ ಅಧಿವೇಶನದಲ್ಲಿ ಮಹತ್ವದ ಹಣಕಾಸು ಸುಧಾರಣಾ ಶಾಸನಗಳನ್ನು ತರಲು ಹೊರಟಂತಿದೆ. ಇವು ಎಡಪಕ್ಷಗಳು ಯುಪಿಎ-1 ಆಳ್ವಿಕೆಯಲ್ಲಿ ಬಾರದಂತೆ ತಡೆದಿದ್ದ ಶಾಸನಗಳು. ನಮ್ಮ ಹಣಕಾಸು ವಲಯವನ್ನು ಈ ರೀತಿ ತೆರೆಯದಂತೆ ತಡೆದುದರಿಂದಲೇ ಜಾಗತಿಕ ಕುಸಿತದ ವಿನಾಶಕಾರಿ ಪ್ರಭಾವವನ್ನು ಎದುರಿಸಿ ನಿಲ್ಲಲು ಭಾರತಕ್ಕೆ ನೆರವು ಸಿಕ್ಕಿತು ಎಂಬ ನಮ್ಮ ಸ್ವಂತ ಅನುಭವದಿಂದಲೂ ಪಾಠ ಕಲಿಯಲು ನಿರಾಕರಿಸಿರುವ ಈ ಸರಕಾರ, ಈಗ ವಿಶ್ವಬ್ಯಾಂಕಿನ ಇತ್ತೀಚಿನ ಮುನ್ನೆಚ್ಚರಿಕೆಗೂ ಕುರುಡಾಗಿರುವಂತೆ ಕಾಣುತ್ತಿದೆ.

ನಮ್ಮ ವಿಮಾವಲಯದೊಳಕ್ಕೆ ಹಣಕಾಸು ಹರಿವಿನ ಮಿತಿಯನ್ನು ಹೆಚ್ಚಿಸುವ ಶಾಸನ, ಖಾಸಗಿ ಭಾರತೀಯ ಬ್ಯಾಂಕುಗಳನ್ನು ವಹಿಸಿಕೊಳ್ಳಲು ವಿದೇಶಿ ಬ್ಯಾಂಕುಗಳಿಗೆ ಅನುಮತಿ ಕೊಡುವ ಬ್ಯಾಂಕಿಂಗ್ ಸುಧಾರಣೆ ಮತ್ತು ಪೆನ್ಶನ್ ನಿಧಿಗಳನ್ನು ಖಾಸಗೀಕರಿಸುವ ಶಾಸನವಲ್ಲದೆ, ರಾಜ್ಯ ವಿಧಾನಸಭಾ ಚುನಾವಣೆಗಳು ಮುಗಿದ ಕೂಡಲೇ ಚಿಲ್ಲರೆ ವ್ಯಾಪಾರದಲ್ಲಿ ಎಫ್‌ಡಿಐ ಗೆ ಅವಕಾಶ ನೀಡುವ ಶಾಸನಕ್ಕೂ ಸರಕಾರ ಸಿದ್ಧವಾಗುತ್ತಿರುವಂತೆ ಕಾಣುತ್ತಿದೆ. ಇದು ಅಗಾಧ ಪ್ರಮಾಣದಲ್ಲಿ ಉದ್ಯೋಗನಷ್ಟಗಳನ್ನುಂಟು ಮಾಡಿ ನಮ್ಮ ಆರ್ಥಿಕದ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ, ನಮ್ಮ ಬಹುಪಾಲು ಜನತೆಯ ಜೀವನಾಧಾರದ ಮೇಲೆ ದಾಳಿ ಮಾಡುತ್ತದೆ ಎಂದು ಈ ಅಂಕಣದಲ್ಲಿ ಮುಂದಿಟ್ಟ ತರ್ಕಗಳಿಗೆ ಯಾವುದೇ ರೀತಿಯಲ್ಲಿ ಒಪ್ಪಬಹುದಾದ ಉತ್ತರ



ಕೃಪೆ: ದಿಹಿಂದೂ

ಕೊಡಲು ಇದುವರೆಗೆ ಈ ಸರಕಾರಕ್ಕೆ ಆಗಿಲ್ಲ.

ವಿದೇಶಿ ಬಂಡವಾಳವನ್ನು ಆಕರ್ಷಿಸುವುದಕ್ಕಾಗಿ

ಚಿಲ್ಲರೆ ವ್ಯಾಪಾರವನ್ನು ಎಫ್‌ಡಿಐ ಗೆ ತೆರೆಯುವ ಪ್ರಧಾನ ಕಾರಣ ಬಹುಶಃ ವಿದೇಶಿ ಬಂಡವಾಳವನ್ನು ಆಕರ್ಷಿಸಿ ಅವರು ಭಾರತದಿಂದ ಸೂಪರ್ ಲಾಭಗಳನ್ನು ಗಳಿಸುವಂತೆ ಮಾಡುವುದು. ಹೀಗೆ ಬಂಡವಾಳ ಹರಿದು ಬಂದರೆ ಆರ್ಥಿಕದಲ್ಲಿ ವಿಶ್ವಾಸ ಉಂಟಾಗುತ್ತದೆ. ಅದು 'ಒಳ್ಳೆಯ ಭಾವನೆಯ ಅಂಶ'ವನ್ನು ಉದ್ದೀಪಿಸುತ್ತದೆ. ಶೇರು ಸೂಚ್ಯಂಕ ಏರುವಂತೆ ಮಾಡುತ್ತದೆ. ಆಮೂಲಕ ಭಾರತ ಕೆಲವೇ ಕೆಲವರಿಗೆ ಇನ್ನಷ್ಟು ಹೊಳೆಯುವಂತೆ ಮಾಡುತ್ತದೆ. ಇಲ್ಲಿರುವ ಒತ್ತು ಇದು ಚಿಲ್ಲರೆ ವ್ಯಾಪಾರದ ಮೇಲೆ ಅಥವ ಭಾರತೀಯ ಜನತೆಯ ಮೇಲೆ ಏನು ಪರಿಣಾಮ ಬೀರುತ್ತದೆ ಎಂಬುದರ ಮೇಲಲ್ಲ, ಬದಲಾಗಿ ವಿದೇಶಿ ಬಂಡವಾಳವನ್ನು ಆಕರ್ಷಿಸುವುದರ ಮೇಲೆ. ಆದರೆ ವಿಶ್ವಬ್ಯಾಂಕಿನ ಭವಿಷ್ಯವಾಣಿಯ ಪ್ರಕಾರ, ಹೀಗಾಗುವ ಸಂಭವ ಬಹಳ ಕಡಿಮೆ. ಒಂದು ವೇಳೆ, ಆಕರ್ಷಿಸಲು ಸಾಧ್ಯವಾದರೂ ಮನಮೋಹನಸಿಂಗ್ ಸರಕಾರ ನಿರೀಕ್ಷಿಸುವ ಮಟ್ಟದಲ್ಲಂತೂ ಸಾಧ್ಯವೇ ಇಲ್ಲ. ಎನ್ರೋನ್‌ಗೆ ಭಾರತದ ಇಂಧನ ಭದ್ರತೆ ನಿರ್ಮಿಸುವ ಹೆಸರಿನಲ್ಲಿ ಬೃಹತ್ ಪ್ರಮಾಣದ ರಿಯಾಯ್ತಿಗಳನ್ನು ಕೊಡುವಾಗ ಅವನ್ನು ಸಮರ್ಥಿಸಿಕೊಳ್ಳಲು ಇಂತಹುದೇ ತರ್ಕಗಳನ್ನು ಮುಂದಿಡಲಾಗಿತ್ತು. ನಂತರ ಎನ್ರೋನ್ ಕತೆಯೇನಾಯ್ತು ಎಂಬುದು ಎಲ್ಲರಿಗೂ ಗೊತ್ತು. ಭಾರತದಲ್ಲಿ ಎನ್ರೋನ್‌ನ ಹೂಡಿಕೆಗಳು ಇಂತಹುದೇ 'ಒಳ್ಳೆಯ ಭಾವನೆಯ ಅಂಶ'ವನ್ನು ಒದಗಿಸಿದ್ದವು. ಇವೆಲ್ಲದರ ಒಟ್ಟು ಫಲಿತಾಂಶವೆಂದರೆ ಒಂದು ಮಹಾ ಅನರ್ಥ. ಅದೇ ರೀತಿ ಚಿಲ್ಲರೆ ವ್ಯಾಪಾರದಲ್ಲಿ ರೈತರು ಮತ್ತು ಬಳಕೆದಾರರ ಬಗ್ಗೆ ಕಾಳಜಿ ಕೇವಲ ಕಣ್ಣೊರೆಸುವ ತಂತ್ರವಷ್ಟೇ.

ಅಭಿವೃದ್ಧಿಶೀಲ ದೇಶಗಳಲ್ಲಿ ಚೀನಾಕ್ಕೆ ಮಾತ್ರವೇ ಮುಂಬರಲಿರುವ ಈ ಹೊಸ ಜಾಗತಿಕ ಆರ್ಥಿಕ ಹಿಂಜರಿತವನ್ನು ಎದುರಿಸಿ ನಿಲ್ಲುವ ಸಾಮರ್ಥ್ಯ ಮತ್ತು ಇಚ್ಛಾಶಕ್ತಿಯಿರುವುದು ಎಂದೂ ವಿಶ್ವಬ್ಯಾಂಕ್ ಹೇಳಿದೆ. ಆದರೆ ಚೀನಾದ ಈ ಸಾಮರ್ಥ್ಯ ಕೂಡ 2008ಕ್ಕಿಂತ ಈಗ ಬಹಳಷ್ಟು ದುರ್ಬಲಗೊಂಡಿದೆ ಎಂದು ವಿಶ್ವಬ್ಯಾಂಕ್ ಎಚ್ಚರಿಸಿದೆ.

ಭಾರತ ನವ-ಉದಾರವಾದಿ ನೀತಿಗಳನ್ನು ಅನುಸರಿಸುವ ಮೂಲಕ ಜಾಗತಿಕ ಆರ್ಥಿಕ ಹಿಂಜರಿತದ ಪರಿಣಾಮವನ್ನು ಅಳಿಸಿ ಹಾಕುವುದು ಸಾಧ್ಯವಿಲ್ಲ ಎಂಬುದು ಸ್ಪಷ್ಟ ಬದಲಿಗೆ ಅದು ನಮ್ಮ ದೇಶದಲ್ಲಿ ಬಿಕ್ಕಟ್ಟನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ. ಶ್ರೀಮಂತರಿಗೆ ವಿಪರೀತ ತೆರಿಗೆ ರಿಯಾಯ್ತಿಗಳನ್ನು ಕೊಡುವ ಬದಲು ಈ ಹಣವನ್ನು ಸಂಗ್ರಹಿಸಿ ನಮ್ಮ ಬಹು ಅಗತ್ಯವಿರುವ ಸಾಮಾಜಿಕ ಮತ್ತು ಆರ್ಥಿಕ ಮೂಲರಚನೆಗಳನ್ನು ಕಟ್ಟಲು ಸಾರ್ವಜನಿಕ ಹೂಡಿಕೆಗಳಾಗಿ ಬಳಸಬೇಕು. ಆಮೂಲಕ ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ನಿರ್ಮಿಸಬೇಕು ಎಂದು ನಾವು ಈ ಪತ್ರಿಕೆಯ ಅಂಕಣಗಳಲ್ಲಿ ಹೇಳುತ್ತ ಬಂದಿದ್ದೇವೆ. ಇದರ ಪರಿಣಾಮವಾಗಿ ಆಂತರಿಕ ಬೇಡಿಕೆಯಲ್ಲಿ ಉಂಟಾಗುವ ಬೆಳವಣಿಗೆ ಒಂದು ಆರೋಗ್ಯಕರ ಬೆಳವಣಿಗೆ ದರಕ್ಕೆ ಪೋಷಕವಾಗ ಬಲ್ಲದು.

ಬಂಡವಾಳಶಾಹಿ ಉದ್ಧಟತನ

1981ರಿಂದ 22 ವರ್ಷಗಳ ಕಾಲ, ಅಂದರೆ ದಕ್ಷಿಣ ಏಶ್ಯಾದಲ್ಲಿ ಸುಧಾರಣೆಗಳ ವರ್ಷಗಳಲ್ಲಿ ಮಲೇಸ್ಯಾದ ಪ್ರಧಾನ ಮಂತ್ರಿಯಾಗಿದ್ದ

ಪುಟ 15ಕ್ಕೆ

ಪಂಕ್ತಿಬೇಧ ಎಂಬ ಅಮಾನವೀಯತೆ ದುಡಿಮೆ, ಬೆವರನ್ನು ಕೀಳ್ಗಳೆಯುವ ಅಸಹ್ಯ

ಪಂಕ್ತಿಬೇಧ, ಜಾತಿಬೇಧಗಳ ಸೈದ್ಧಾಂತಿಕ ನೆಲೆ ಏನು ? ವರ್ಗ ಹಿತಾಸಕ್ತಿ ಏನು ?

ಜಿ.ಎನ್.ನಾಗರಾಜ್

'ಮಡಿ ಮಡಿ ಮಡಿಯೆಂದಡಿಗಡಿಗಾರುತಿ' ಇದು ಉಡುಪಿಯ ಮಾಧ್ವ ಮಠಗಳ ಪರಮ ಭಕ್ತರಾದ ಪುರಂದರದಾಸರ ಪದ. ಪಂಕ್ತಿಬೇಧದ ಹಿಂದಿನ ಬೇಧ ಭಾವನೆಯ ಮೂಲಧಾರವನ್ನು ಸ್ಪಷ್ಟವಾದ ಮಾತುಗಳಲ್ಲಿ ಹೇಳಿ ಖಂಡಿಸುತ್ತಾರೆ ಪುರಂದರದಾಸರು. ಶುಚಿ-ಅಶುಚಿ ಅಥವಾ ಮಡಿ-ಮೈಲಿಗೆ ಎನ್ನುವ ಭಾವನೆ ಜಾತಿ ಪದ್ಧತಿಯ ಮೇಲು-ಕೀಳು ಭಾವನೆಯ ಪ್ರತಿಬಿಂಬ. ಯಾವುದು ಶುಚಿ ಯಾವುದು ಅಶುಚಿ ಎಂಬ ಬಗ್ಗೆ ಪುರೋಹಿತಶಾಹಿ ಜನರಲ್ಲಿ ಇರುವ ದೈನಂದಿನ ಪದ್ಧತಿಗಳನ್ನು, ಆಚರಣೆಗಳನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ. ಮಣ್ಣು, ಧೂಳು, ಕೆಸರು ಅಶುಚಿ-ಮೈಲಿಗೆ. ಮಣ್ಣಿನ ಜೊತೆ, ಧೂಳಿನ ಜೊತೆ ಒಡನಾಡಬೇಕಾದ ದುಡಿಮೆಗಾರ ಜನ ಮೈಲಿಗೆ. ಅವರ ದುಡಿಮೆಯಿಂದ ಹುಟ್ಟುವ ಬೆವರು, ಬೆವರಿನ ವಾಸನೆಯೇ ಮೈಲಿಗೆ. ದಿನಕ್ಕೆ ಹಲವಾರು ಬಾರಿ ಸ್ನಾನ ಮಾಡಿ ಬೆವರ ವಾಸನೆ ಕಳೆಯುವುದಕ್ಕೆ ಗಂಧ ಪೂಸಿಕೊಂಡು ಊದುಕಡ್ಡಿಗಳ, ಹೂವಿನ ಸುವಾಸನೆ ಘಮಘಮವಾದ ನಡುವೆ, ಕುಳಿತು ಮಂತ್ರ ಹೇಳುವ ಅಥವಾ ಓದುವ, ಕಲಿಸುವ ಕ್ರಿಯೆ ಶುಚಿ. ಅನ್ನ ಶುಚಿ-ದೇವರು, ಕೆಸರು ಮೈಲಿಗೆ, ಕೊಳೆ-ಕೆಸರೊಳು ತಾವರೆ ಪುಟ್ಟಲು ಅದತಂದು ಬೀಸಜನಾಭನಿಗೆ ಅರ್ಪಿಸಲಿಲ್ಲವೇ ಎಂದು ಪುರಂದರದಾಸರು ಪ್ರಶ್ನಿಸಿದ್ದು ಇಂತಹ ಬೇಧ ಭಾವದ ಮನಸುಗಳ ಬಗ್ಗೆಯೇ.

ಹೀಗೆ ಆಹಾರವನ್ನು ಬೆಳೆಯುವವವರು-ರೈತರು, ಕೂಲಿಕಾರರು, ಕಮ್ಮಾರ, ಚಮ್ಮಾರ, ಕುಂಬಾರ, ಬಡಿಗ, ಅಕ್ಕಸಾಲಿಗಳೆಲ್ಲಾ, ದನ, ಕುರಿಕಾಯುವ ಗೊಲ್ಲ, ಕುರುಬರೆಲ್ಲಾ-ವಸ್ತುಗಳನೊಡನಾಡಿ-ಮಣ್ಣು, ಸಗಣಿ, ಕಬ್ಬಿಣ, ಮರ, ಚರ್ಮ, ಚಿನ್ನ, ಇದ್ದಿಲು ಇವುಗಳನೊಡನಾಡಿ ಎಲ್ಲರಿಗೂ ಬೇಕಾದ ಅನ್ನ, ಬಟ್ಟೆ, ಮನೆ, ಉಪಕರಣ, ಆಭರಣ ಇವುಗಳನ್ನೂ ಉತ್ಪಾದಿಸುವವರು, ಬೆವರುಹರಿಸಿ ದುಡಿಯುವವರೆಲ್ಲಾ ಮೈಲಿಗೆ. ಅವರನ್ನು ಮುಟ್ಟ ಬಾರದು. ಮುಟ್ಟಿದರೆ ಮೈಲಿಗೆ ನಮಗೂ ಅಂಟಿಬಿಡುತ್ತದೆ. ನಮ್ಮ ಮಡಿಯನ್ನೂ ಕೆಡಿಸುತ್ತದೆ ಎನ್ನುವ ಮನೋಭಾವದ ಹಿಂದೆ ದುಡಿಮೆ ಎನ್ನುವುದೇ ಕೀಳು, ದುಡಿಮೆಗಾರರೆಲ್ಲಾ ಕೀಳು ಎನ್ನುವ ಮನೋಭಾವ ಒಡೆದು ಕಾಣುತ್ತದೆ.

ವೇದವನ್ನೋದುವವರು ಮಾತ್ರ ಮೇಲು, ಉಳಿದವರೆಲ್ಲಾ ಕೀಳು ಎನ್ನುವ ಮನೋಭಾವ ರಾಜನೂ, ಆಳುವವರೂ ತಮಗಿಂತ ಕೀಳು, ವ್ಯಾಪಾರ ಮಾಡುವವನು ಅವರಿಗಿಂತ ಕೀಳು (ಏಕೆಂದರೆ ಇವರೂ ಕೂಡ ಕತ್ತಿ-ಗುರಾಣಿ ಗದೆ, ಭರ್ಜಿಯೊಡನೆ, ತಕ್ಕಡಿ, ಸೇರು, ಚೀಲ ಇವುಗಳೊಡನೆ ವ್ಯವಹರಿಸಬೇಕು.) ಎಂಬ ಭಾವನೆಗೆ ದೂಡುತ್ತದೆ. ಜಾತಿ ಪದ್ಧತಿಯಲ್ಲಿ ಒಂದರ ಕೆಳಗೆ ಒಂದು ಎನ್ನುವ ಶ್ರೇಣೀಕೃತ ಸಮಾಜವನ್ನೂ ಸೃಷ್ಟಿಸುತ್ತದೆ.

ಮಡಿ-ಮೈಲಿಗೆ ಎನ್ನುವ ತರ-ತಮ ಭಾವನೆಯ ಜೊತೆಗೆ ಆಹಾರದಲ್ಲಿ ಮೇಲು ಕೀಳನ್ನು ಕಾಣುವ-ಮಾಂಸಾಹಾರ ಕೀಳು, ಸಸ್ಯಾಹಾರ ಮೇಲು ಎನ್ನುವ ಭಾವನೆ ಜೊತೆ ಗೂಡಿ ಜಾತಿ ಪದ್ಧತಿ ಯಲ್ಲಿ ಕೆಳಗಿನ ಜಾತಿಗಳು



ತಮ್ಮ ಕೀಳುತನವನ್ನು ತಾವೇ ಒಪ್ಪಿಕೊಳ್ಳುವಂತಹ ಪರಿಸ್ಥಿತಿಯನ್ನು ಸೃಷ್ಟಿಸಲಾಗಿದೆ.

ಮನೆಯೊಳಗೆ ಮಾಂಸದ ಅಡಿಗೆ ಮಾಡಬಾರದು. ಇಂತಹ ವರ್ಗ ಅಂತಹ ವರ್ಗವೆನ್ನಬಾರದು, ಮದುವೆ, ಹಬ್ಬಗಳಲ್ಲಿ ನಿಷೇಧ ಎನ್ನುವುದನ್ನೂ ಶಾಸ್ತ್ರ, ಪುರಾಣಗಳ ಮೂಲಕ ಹೇರಿ ಮಾಂಸಾಹಾರ ಮಾಡುವವರೆಲ್ಲಾ ಕೀಳು ಎನ್ನುವ ಸರ್ವ ವ್ಯಾಪಕ ಭಾವನೆಯನ್ನೂ ಬಿತ್ತಲಾಗಿದೆ. (ಯಜ್ಞಯಾಗಾದಿಗಳಲ್ಲಿ ಹಸು, ಕುದುರೆಗಳಾದಿಯಾಗಿ ಪ್ರಾಣಿ ಬಲಿಯನ್ನೂ ವ್ಯಾಪಕವಾಗಿ ಮಾಡಲಾಗಿದೆ. ಎಂಬುವುದನ್ನೇ ಮರೆ ಮಾಚಲಾಗಿದೆ.)

ತಾಮಸ ಗುಣ ರೂಪಗೊಳ್ಳುತ್ತದೆ ಎಂದು ಅವೈಜ್ಞಾನಿಕವಾಗಿ ಭೋಧಿಸುತ್ತದೆ ಭಗವದ್ಗೀತೆಯಲ್ಲಿ 'ಭಗವಂತ'ನಿಂದಲೇ ಇದನ್ನು ಹೇಳಿಸಲಾಗಿದೆ.

ಹೀಗೆ ಮಡಿ-ಮೈಲಿಗೆ ಸಾತ್ವಿಕ-ತಾಮಸ ಆಹಾರ ಇದರಿಂದ ಕೆಳ ಜಾತಿಯವರನ್ನೂ ಕಂಡರೆ ಅಸಹ್ಯ ಪಟ್ಟುಕೊಳ್ಳುವ, ಅವರು ಕಣ್ಣಿಗೆ ಬೀಳುವುದೇ ಪಾಪಕರವೆನ್ನುವ ಭಾವನೆಯನ್ನು ಬೆಳೆಸಲಾಗಿದೆ. ಇಂತಹ ಅಮಾನವೀಯ ಭಾವನೆಗಳಿಂದಾಗಿ ಯಾರ ಮನೆಯಲ್ಲಿ ಯಾರು ಊಟ ಮಾಡಬಾರದು, ಯಾರ ಮನೆಗೆ ಯಾರನ್ನೂ ಸೇರಿಸಬಾರದು, ಸೇರಿಸಿದರೆ ಅವರನ್ನು ಎಲ್ಲಿಯವರೆಗೆ ಸೇರಿಸಬಹುದು ಎನ್ನುವ ವಿಧಿ ನಿಷೇಧಗಳು ಹುಟ್ಟಿ ನಮ್ಮ ಜನರ ರಕ್ತದಲ್ಲಿಯೇ ಸೇರಿ ಬಿಟ್ಟಿದೆಯೇನೋ ಎನ್ನುವಂತೆ ಜಡವಾಗಿಬಿಟ್ಟಿವೆ. ಇಂತಹ ವಿಧಿ ನಿಷೇಧಗಳ ಒಂದು ಕುಪ್ರಸಿದ್ಧ ಮಾದರಿ ಮನುಸ್ಮೃತಿ.

ಈ ಕುರೂಪಿ, ಸಾಮಾಜಿಕ ಅಸಹ್ಯವನ್ನು ಶಂಕರಾಚಾರ್ಯರು, ಮಧ್ವಾಚಾರ್ಯರು, ರಾಮಾನುಜಚಾರ್ಯರು-ಅವರವರೊಳಗೆ ತಾನೇ ಶ್ರೇಷ್ಠ, ತಾವು ಕಂಡಿದ್ದೇ ಶ್ರೇಷ್ಠ ಎಂದು ಎಷ್ಟೇ ಬಡಿದಾಡಿಕೊಂಡರೂ-ಮೂವರೂ ಎತ್ತಿ ಹಿಡಿದಿದ್ದಾರೆ. ಅದೇ ಕೆಲಸವನ್ನೂ ಇಂದು ಆರ್.ಎಸ್.ಎಸ್., ವಿಶ್ವ ಹಿಂದೂ ಪರಿಷತ್, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಇತ್ಯಾದಿಗಳೊಡನೆ ಬಿಜೆಪಿ ಗುಪ್ತವಾಗಿ ಮಾಡುತ್ತಿದೆ. ರಾಮಾಜೋಯಿಸ್ ಮೊದಲಾದ ಬ್ರಾಹ್ಮಣ ಆರೆಸ್ಸೆಸ್ಸಿಗರ ಭಾಷಣ, ಬರಹಗಳನ್ನೂ ಗಮನಿಸಿ.

ಅದೇ ಸಮಯದಲ್ಲಿ ಶಿವಶರಣರ ವಚನ ಚಳುವಳಿ, ಕದ್ರಿ, ಚುಂಚನಗಿರಿಗಳ ನಾಥ ಸಿದ್ಧರ ಪರಂಪರೆ, ಮಾಧ್ವರ ಹರಿದಾಸ ಪರಂಪರೆ, ಕಡಕೊಳ ಮಡಿವಾಳಪ್ಪ, ಕೈವಾರ ನಾರಾಯಣಪ್ಪ, ಶಿಶುನಾಳ ಶರೀಫರ ತತ್ವಪದಕಾರರ ಪರಂಪರೆ ಈ ಜಾತಿ ಬೇಧ, ಪಂಕ್ತಿಬೇಧಗಳನ್ನು ತಿರಸ್ಕರಿಸುತ್ತದೆ. ಅವುಗಳನ್ನು ಆಚರಿಸುವವರನ್ನು ಖಂಡಿಸುತ್ತದೆ.

ಇಲ್ಲಿಯೇ 'ನಾವು ಎದುರಿಸಬೇಕಾದ ಪ್ರಮುಖ ಪ್ರಶ್ನೆ ಹಿಂದು ಧರ್ಮ ಎಂದರೆ ಯಾವುದು ? ಪೇಜಾವರರು, ಆರೆಸ್ಸೆಸ್ಸಿಗರು-ಅವರ ಸಂಘ ಪರಿವಾರ ಬೋಧಿಸುವ ವರ್ಣಾಶ್ರಮ ಧರ್ಮ-ಜಾತಿ ವ್ಯವಸ್ಥೆ, ಕಂದಾಚಾರ-ಮೂಢನಂಬಿಕೆಗಳ ಹಿಂದುತ್ವವೇ ಅಥವಾ ಶಿವಶರಣರ, ದಾಸರನಾಥ ಸಿದ್ಧರ, ತತ್ವಪದಕಾರರ, ಬಹುರೂಪಿ, ಜಾತಿ ವ್ಯವಸ್ಥೆ, ಮೇಲು-ಕೀಳು ವಿರೋಧಿ ಹಿಂದೂ ಧರ್ಮವೇ?.

ಭಾರತೀಯ ಸಮಾಜದ ಜಾತಿ ವ್ಯವಸ್ಥೆ ವಿರೋಧಿ ಪರಂಪರೆಯನ್ನು ಮುಂದುವರೆಸಿ ವೈಜ್ಞಾನಿಕತೆ, ವೈಚಾರಿಕತೆಯ ಬೆಳಕಿನಲ್ಲಿ ಬೆಳೆಸುವ ಸಂವಿಧಾನದ ಮೂಲ ಪ್ರಜಾಸತ್ತಾತ್ಮಕ ತತ್ವಗಳೇ ? ಕಂದಾಚಾರಿ, ಕೋಮುವಾದೀ ಹಿಂದುತ್ವವಾದವೇ ?.

ಈ ಸಮಾಜವನ್ನೂ ಹಿಂದೂಡುವ ಹಾಗೂ ಸಮಾಜವನ್ನೂ ಮುನ್ನಡೆಸುವ ಶಕ್ತಿಗಳ ನಡುವೆ ಹಲವು ರಂಗಗಳಲ್ಲಿ ಸಂಘರ್ಷ ನಡೆದಿದೆ. ಅದರಲ್ಲಿ ಪಂಕ್ತಿಬೇಧ ಅವರ ಮೂಲವಾದ ಜಾತಿಬೇಧ ಒಂದು ಪ್ರಮುಖ ರಂಗ, ಈ ಸಂಘರ್ಷದಲ್ಲಿ 'ನೀವು ಯಾರ ಕಡೆ' ಎಂಬ ಪ್ರಶ್ನೆಯನ್ನೂ ಸಿಪಿಐ(ಎಂ) ಕರ್ನಾಟಕದ ಜನತೆ ಮುಂದಿಟ್ಟಿದೆ. ಮುಂದಿನ ದಿನಗಳಲ್ಲಿ ಹೆಚ್ಚು ಹೆಚ್ಚಾಗಿ ಈ ಪ್ರಶ್ನೆಗಳು ಜನರ ಮುಂದೆ ಬರಲಿವೆ.

ಕರ್ನಾಟಕದಲ್ಲಿ ಬೆವರು ಸುರಿಸಿ ದುಡಿಯುವ ಎಲ್ಲಾ ಜನತೆ, ಕೆಳ ಜಾತಿಗಳೆಂದು ಕೀಳುಗಳೆಯಲ್ಪಟ್ಟ ಎಲ್ಲ ಜನಸಮುದಾಯ ಒಂದಾಗಿ ಈ ಹೋರಾಟದಲ್ಲಿ ಭಾಗವಹಿಸಬೇಕಾಗಿದೆ.





ಜನಶಕ್ತಿ
ಕನ್ನಡ ವಾರಪತ್ರಿಕೆ

ಅಲ್ಪಸಂಖ್ಯಾತರಲ್ಲಿ ಅಪನಂಬಿಕೆ, ಬ್ರಾಹಣ್ಯಕ್ಕೆ ವಿಧೇಯತೆ ಕಳೆದ ಐದು ದಶಕಗಳ ದಕ್ಷಿಣ ಕನ್ನಡದ ಸ್ಥಿತ್ಯಂತರಗಳು


ಆರ್ಥಿಕ, ಸಾಮಾಜಿಕ, ಶೈಕ್ಷಣಿಕವಾದ ಅಭಿವೃದ್ಧಿಯಲ್ಲಿ ಮುಂಚೂಣಿಯಲ್ಲಿದ್ದ ಅವಿಭಜಿತ ದಕ್ಷಿಣ ಕನ್ನಡ-ಕರಾವಳಿಯಲ್ಲಿ ಇಂದು ಕಾಣುವ ದೃಶ್ಯಗಳೇನು ?. ಹಲವು ದಶಕಗಳಲ್ಲಿ ಆದ ಸ್ಥಿತ್ಯಂತರಗಳ ಒಂದು ಪಕ್ಷಿ ನೋಟ.

ವಾಸುದೇವ ಉಚ್ಚಿಲ

ದಕ್ಷಿಣ ಕನ್ನಡ ಮತ್ತು ಉಡುಪಿ ಎಂದು ಗುರುತಿಸಲಾಗುವ ಕರಾವಳಿ ಜಿಲ್ಲೆಗಳಲ್ಲಿ ಕಳೆದ ಸುಮಾರು 30 ವರ್ಷಗಳಿಂದ ಸಂಘ ಪರಿವಾರದ ದಾಂದಲೆಗಳು ನಿಧಾನವಾಗಿ ವೃದ್ಧಿಯಾಗುತ್ತಾ ಬಂದುದನ್ನು ಕಾಣುತ್ತಿದ್ದೇವೆ. ಮುಸ್ಲಿಮರ ಮೇಲೆ ಮತ್ತು ಕ್ರೈಸ್ತರ ಮೇಲೆ ಸುಳ್ಳುಗಳನ್ನು ಮತ್ತು ಅಪಪ್ರಚಾರ ವನ್ನು ನಿಧಾನವಾಗಿ ಮತ್ತು ವ್ಯವಸ್ಥಿತವಾಗಿ ಮಾಡುತ್ತಾ ಬರಲಾಗಿದೆ. ಮತ್ತು ಈ ಸಮುದಾಯಗಳನ್ನು ಬಹುಸಂಖ್ಯಾಕರಾದ ಹಿಂದೂಗಳು ಅಪನಂಬಿಕೆ ಯಿಂದ ನೋಡುವಂತೆ ಮಾಡಲಾಗಿದೆ. ಈ ಮಧ್ಯೆ ಬೇರೆ ಬೇರೆ ನೆವಗಳಲ್ಲಿ ಮುಸ್ಲಿಮರ ಮೇಲೆ ಅಲ್ಲಲ್ಲಿ ದಾಳಿಗಳು ನಡೆದವು. 1992ರ ಅಯೋಧ್ಯಾ ಬಾಬ್ರಿ ಮಸೀದಿ ನಾಶದ ಬಳಿಕ ಕರಾವಳಿಯಲ್ಲಿ ಅಲ್ಲಲ್ಲಿ ಹಿಂದೂ ಮುಸ್ಲಿಂ ಘರ್ಷಣೆಗಳು ನಡೆದುವು. ಅನಂತರದಲ್ಲಿ 1999 ರಲ್ಲಿ ಸುರತ್ಕಲ್ ಪರಿಸರದಲ್ಲಿ ಕೋಮುಗಲಭೆಗಳು ನಡೆದವು. ಆ ಮೇಲಿನ ಅವಧಿಯಲ್ಲಿ ಆದಿ ಉಡುಪಿಯಲ್ಲಿ ಗೋಸಾಗಾಟದ ನೆವದಲ್ಲಿ ಇಬ್ಬರು ಮುಸ್ಲಿಮರನ್ನು ಬೆತ್ತಲೆಗೊಳಿಸಿದ್ದು ಪ್ರಧಾನ ಘಟನೆ. ಗೋಸಾಗಾಟದ ಸಂಬಂಧ ಮುಸ್ಲಿಮರ ಮೇಲೆ ದಾಳಿ ಮತ್ತು ಬಿಜೆಪಿ ಪಕ್ಷವು ರಾಜ್ಯ ಆಡಳಿತದಲ್ಲಿ ಪಾಲ್ಗೊಂಡ ಬಳಿಕ ದಾಳಿಕೋರರಿಗೆ ಪೋಲೀಸರ ಬೆಂಬಲವೂ ದೊರಕಿದ್ದನ್ನು ಕಾಣುತ್ತೇವೆ. ಮುಸ್ಲಿಂ-ಹಿಂದೂ ಹುಡುಗಹುಡುಗಿಯರ ಸ್ನೇಹವನ್ನು 'ಲವ್ ಜಿಹಾದ್' ಹೆಸರಲ್ಲಿ ಅಪಮಾನಗೊಳಿಸುವ ಕೃತ್ಯಗಳೂ ಮುಂದುವರಿದಿವೆ. ಇದರ ಮುಂದುವರಿದ ಭಾಗವಾಗಿ 2008 ಸಪ್ಟೆಂಬರ್ ಬಳಿಕ ಕ್ರೈಸ್ತರ ಚರ್ಚ್‌ಗಳ ಮೇಲೆ ದಾಳಿಗಳು ಆರಂಭವಾದುವು. ಸೌಹಾರ್ದದ ಬಲುದೊಡ್ಡ ಪರಂಪರೆಯಿರುವ ಕರಾವಳಿ ಜಿಲ್ಲೆಗಳು ಕೋಮುದ್ವೇಷದ ಬೆಂಕಿಯಲ್ಲಿ ಕಳೆದ ಮೂರು ದಶಕಗಳಿಂದ ಬೇಯುತ್ತಲಿವೆ.

ಅಸಮಾನತೆ ಬಲ :

ವಿಭಿನ್ನ ಮತಗಳ ಪರಿಸ್ಥಿತಿ ಒಂದೆಡೆ ಈ ರೀತಿ ಆಗಿದ್ದರೆ, ಬಹುಸಂಖ್ಯಾತರಾದ ಹಿಂದೂ ಮತೀಯರಲ್ಲಿನ ಜಾತಿ ಶ್ರೇಣಿ ವ್ಯವಸ್ಥೆ, ಜಾತಿ ಅಸಮಾನತೆಗಳು ಮತ್ತಷ್ಟು ಬಲಗೊಂಡಿವೆ. ದೇಶವು ಸ್ವತಂತ್ರಗೊಂಡ ಬಳಿಕ ಹಾಗೂ ಪ್ರಜಾಪ್ರಭುತ್ವ ರಾಷ್ಟ್ರವಾಗಿ ಕಾರ್ಯಪ್ರವೃತ್ತವಾದ ಬಳಿಕ ಜಾತಿ ವ್ಯವಸ್ಥೆ ಶಿಥಿಲವಾಬೇಕಿತ್ತು; ಜಾತಿ ಅಸಮಾನತೆಗಳು ಕಡಿಮೆಯಾಗಬೇಕಿತ್ತು; ಅಸ್ಪೃಶ್ಯತೆ ಸಂಪೂರ್ಣ ಇಲ್ಲವಾಗಬೇಕಿತ್ತು; ಮಹಿಳೆಯರ ಪರಾಧೀನತೆ ಕಡಿಮೆಯಾಗಬೇಕಿತ್ತು; ಮೂಢನಂಬಿಕೆಗಳು ಇಳಿಮುಖವಾಗಬೇಕಿತ್ತು; ಊಳಿಗಮಾನ್ಯ ಸಮಾಜದ ಧರ್ಮ ದಬ್ಬಾಳಿಕೆಗಳು ಇಲ್ಲವಾಗಬೇಕಿತ್ತು. ಆದರೆ ಈ ಎಲ್ಲಾ ದೋಷಗಳೂ ನಾಜೂಕಾಗಿ ಮುಂದುವರಿಯುತ್ತಿರುವುದನ್ನು ಹಾಗೂ ಶೋಷಿತ ವರ್ಗಗಳು ತಮ್ಮ ಪರಿಸ್ಥಿತಿಯನ್ನು ಅರ್ಥಮಾಡಿಕೊಳ್ಳದೇ ಪರಮತ ದ್ವೇಷಿಗಳಾಗಿ ಪರಿವರ್ತಿತವಾಗಿರುವ ವಿಕೃತ ಸಾಮಾಜಿಕ ಬೆಳವಣಿಗೆಯನ್ನೂ ನಾವು ಕಾಣುತ್ತಿದ್ದೇವೆ. ಆರ್ಥಿಕ ಸಾಮಾಜಿಕ ಶೋಷಣೆಯನ್ನು ಇಲ್ಲವಾಗಿಸುವಲ್ಲಿ ಮೊದಲು ಜಿಲ್ಲೆಗಳಲ್ಲಿ ಬಲಿಷ್ಟವಾಗಿದ್ದ ಕಾಂಗ್ರೆಸ್ ವಿಫಲ ವಾಗಿರುವುದನ್ನು, ಜನಸಂಘ ಮತ್ತು ಅನಂತರದಲ್ಲಿ ಭಾರತೀಯ ಜನತಾಪಕ್ಷವು ಆರೆಸ್ಸೆಸ್ ಮಾರ್ಗದರ್ಶನದಲ್ಲಿ ತನ್ನ ಪರವಾಗಿ ಮೂಡಿಸಿದ ವಿದ್ಯಾಮಾನವನ್ನು ನಾವು ನೋಡುತ್ತಿದ್ದೇವೆ.





ಉಡುಪಿ-ಕೃಷ್ಣ ಮಠ

ಆರ್.ಎಸ್.ಎಸ್. ಪಾತ್ರ

ದಕ್ಷಿಣ ಕರಾವಳಿ ಜಿಲ್ಲೆಗಳ ಜಾತಿ ವ್ಯವಸ್ಥೆಯ ಮೇಲ್ತುದಿಯಲ್ಲಿ ಬ್ರಾಹ್ಮಣರು ಇದ್ದಾರೆ. ಬಳಿಕ ಬಂಟರು, ಜೈನರು ಎಂಬ ಭೂಮಾಲಕರು ಹೆಚ್ಚಿರುವ ಜಾತಿಗಳು ಹಾಗೂ ವ್ಯಾಪಾರಿ ಸಮುದಾಯವಾದ ಗೌಡ ಸಾರಸ್ವತ ಬ್ರಾಹ್ಮಣ (ಕೊಂಕಣಿಗರು) ಬರುತ್ತಾರೆ. ಆ ಬಳಿಕದ ಹಂತದಲ್ಲಿ ಹಿಂದುಳಿದ ಜಾತಿಗಳಿದ್ದು ಅವರಲ್ಲಿ ಬಿಲ್ಲವರು, ಮೊಗವೀರರು ಹೆಚ್ಚು ಸಂಖ್ಯೆಯಲ್ಲಿದ್ದಾರೆ; ಇವರಲ್ಲಿ ಮೊಗವೀರರು ಮೀನುಗಾರಿಕೆಯೊಂದನ್ನೇ ಹೆಚ್ಚಾಗಿ ವೃತ್ತಿಯಾಗಿ ಮಾಡುತ್ತಿದ್ದಾರೆ, ಉಳಿದ ಜಾತಿಗಳವರು ತಮ್ಮ ಜಾತಿವೃತ್ತಿಯೊಂದಿಗೆ ಗೇಣಿ ಕೃಷಿಕಾರರಾಗಿಯೋ, ಕೃಷಿ ಕೂಲಿಕಾರರಾಗಿಯೋ ಇದ್ದವರು. ಆ ಬಳಿಕದ ಹಂತದಲ್ಲಿ ದಲಿತರು (ಇವರಲ್ಲೂ ಹಲವು ಜಾತಿಗಳವರಿದ್ದಾರೆ.) ಹಾಗೂ ಪರಿಶಿಷ್ಟ ಪಂಗಡದವರೆನಿಸಿದ ಮರಾಟಿ ನಾಯ್ಕರು ಮತ್ತು ಮಲೆಕುಡಿಯರಿದ್ದಾರೆ. ಅತ್ಯಂತ ಕೆಳಗಿನ ಹಂತದಲ್ಲಿ ಈಗಲೂ ಇರುವವರು ಕೊರಗರು ಎಂಬ ಬುಡಕಟ್ಟು ಸಮುದಾಯ.

ಆರೆಸ್ಸೆಸ್ಸಿನ ಹಾಗೂ ಜನಸಂಘದ ಪೋಷಕರಾಗಿ ಬಂದವರು ಮೊದಲಲ್ಲಿ ಬ್ರಾಹ್ಮಣ ಹಾಗೂ ಕೊಂಕಣಿಗ ಜಾತಿಯಿಂದ ಬಂದವರು. ಇವರು ಹಿಂದಿನಿಂದಲೇ ಶಿಕ್ಷಣ ಹೊಂದಿದವರಾಗಿದ್ದರಿಂದ ಬೌದ್ಧಿಕವಾಗಿ ಇತರ ಜಾತಿ ಜನಾಂಗಗಳ ಮೇಲೂ ಕ್ರಮಕ್ರಮವಾಗಿ ಪ್ರಭಾವ ಬೀರುತ್ತಾ ಬಂದರು. ಕಡಲ ತಡಿಯಿಂದ ಒಂದೆರಡು ಮೈಲುಗಳ ವ್ಯಾಪ್ತಿಯಲ್ಲೇ ವಾಸವಿದ್ದ ಮೊಗವೀರರು 50 ವರ್ಷಗಳ ಹಿಂದೆ ಕಟ್ಟಾ ಕಾಂಗ್ರೆಸ್ ಬೆಂಬಲಿಗರಾಗಿದ್ದರು. ಇವರಿಗೆ

ಮೀನು ವ್ಯಾಪಾರದಲ್ಲಿ ಮುಸ್ಲಿಮರು ಸ್ಪರ್ಧಿಗಳಾಗಿರುವ ಸನ್ನಿವೇಶವನ್ನು, ಅವರನ್ನು ವೈರಿಗಳಾಗಿ ಪ್ರಚೋದಿಸುವಲ್ಲಿ ಆರೆಸ್ಸೆಸ್ ಪಾತ್ರ ವಹಿಸಿದ್ದರಿಂದ ಇವತ್ತು ಹೆಚ್ಚು ಕಡಿಮೆ ಕರಾವಳಿಯ ಎಲ್ಲಾ ಬೆಸ್ತ ಸಮುದಾಯಗಳೂ ಬಹುಅಂಶ ಬಿಜೆಪಿ ಬೆಂಬಲಿಗರಾಗಿ 3 ದಶಕಗಳ ಹಿಂದೆಯೇ ಪರಿವರ್ತಿತವಾಗಿವೆ. ಬಿಲ್ಲವರು ಹಾಗೂ ಇತರ ಕೆಳಜಾತಿಗಳೂ ನಿಧಾನವಾಗಿ ಬಿಜೆಪಿ ಕಡೆಗೆ ತಿರುಗಿದ್ದಾರೆ. ಬಾಬ್ರಿ ಮಸೀದಿ ಧ್ವಂಸಕ್ಕೆಂದು ಅಯೋಧ್ಯೆಗೆ ಕಳುಹಿಸಲ್ಪಟ್ಟ ಕರಾವಳಿಯ ತಂಡಗಳಿಗೆ ನಾಯಕರು ಮೇಲ್ಜಾತಿಯವರಾದರೂ, ಹಿಂಸಾಕೃತ್ಯಗಳಿಗೆ ಇಳಿಯಬೇಕಾದವರು ಕೆಳಜಾತಿಯವರು. ಆವತ್ತಿನ ಮತ್ತು ಆ ಬಳಿಕದ ಕೋಮುಘರ್ಷಣೆಗಳಲ್ಲಿ ಕೇಸು ದಾಖಲಾಗಿ ಕೋರ್ಟ್ ಪೋಲೀಸ್ ಠಾಣೆ ಎಂದು ಅಲೆದವರು ಕೆಳ ಜಾತಿ ಜನ. ಹೀಗಾಗಿದ್ದರೂ ಈ ಜನ ಕೆಲವು ದಲಿತರೂ ಸೇರಿ ಇನ್ನೂ ಬಿಜೆಪಿ ಹಾಗೂ ಸಂಘಪರಿವಾರವನ್ನು ಬೆಂಬಲಿಸುವ ಕುರುಡು ನಿಷ್ಠೆಯವರಾಗಿದ್ದಾರೆ.



ಕೋಮುವಾದಿ ಉದ್ರಿಕ್ತತೆ

ಈ ನಿಷ್ಠೆ ಹಾಗೂ ಭಾವಾಂಧತೆಯನ್ನು ಮೇಲ್ಜಾತಿಯವರು ತಮ್ಮ ಜಾತಿಶ್ರೇಷ್ಠತೆಯನ್ನು ಹಾಗೂ ಆ ಮೂಲಕ ಜಾತಿ ಅಸಮಾನತೆಯನ್ನು ಕಾಪಾಡುವುದಕ್ಕೆ ಬಳಸಿಕೊಂಡಿದ್ದಾರೆ. ಈ ಪ್ರಕ್ರಿಯೆಯನ್ನು ತಡೆಯುವ ಕಾರ್ಯಕ್ರಮವನ್ನು ಕಾಂಗ್ರೆಸ್ಸು ಹಾಕಿಕೊಳ್ಳದಿದ್ದರಿಂದ ಭೂಸುಧಾರಣೆಗಳಿಂದ ಪಡೆದ ಪ್ರಯೋಜನವನ್ನು ತಮ್ಮ ಪಕ್ಷದ ಬಂಡವಾಳವಾಗಿ ಉಳಿಸಿಕೊಳ್ಳುವಲ್ಲಿಯೂ ಅವರು ವಿಫಲರಾಗಿದ್ದಾರೆ.

ಸಾಮಾಜಿಕ ಶೋಷಣೆ

ಇದರಿಂದಾಗಿ ಧಾರ್ಮಿಕ ಮತ್ತು ಸಾಮಾಜಿಕ ಶೋಷಣೆಯನ್ನು ಮುಂದುವರೆಸಿಕೊಂಡು ಹೋಗಲು ಬ್ರಾಹ್ಮಣ



ಆದಿ ಉಡುಪಿ ಘಟನೆ

ಪುಟ 12ಕ್ಕೆ

ಸಿಪಿಐ(ಎಂ) ಮಂಡ್ಯ ಸಮ್ಮೇಳನದ ವಿಶ್ಲೇಷಣೆ

ಪುಟ 4ರಿಂದ....

ಮಾಡಿರುವವರನ್ನೇ ಅಭ್ಯರ್ಥಿಗಳನ್ನಾಗಿ ನೇಮಿಸುತ್ತಿವೆ.

ಹಸಿವು, ನಿರುದ್ಯೋಗದಲ್ಲಿ ವ್ಯಾಪಕ ಹೆಚ್ಚಳ ದಿವಾಳಿಯತ್ತ ಮಂಡ್ಯ ಜಿಲ್ಲೆ.

ವ್ಯವಸಾಯ ಪ್ರಧಾನವಾದ ಮಂಡ್ಯ ಜಿಲ್ಲೆಯಲ್ಲಿ ಶೇ. 80 ರಷ್ಟು ಜನಕ್ಕೆ ಭೂಮಿಯೇ ಆರ್ಥಿಕ ಮೂಲಾಧಾರ. ಭೂ ಹಿಡುವಳಿದಾರರ ಪೈಕಿ ಶೇ. 85 ರಷ್ಟು ಹಿಡುವಳಿದಾರರು ಸಣ್ಣ, ಅತಿಸಣ್ಣ ರೈತಾಪಿ ವರ್ಗಕ್ಕೆ ಸೇರಿದವರು. ಶೇ 48 ರಷ್ಟು ಭೂಮಿ ಕಾಲುವೆ ನೀರಾವರಿ. ಪಂಪಸೆಟ್, ಬೋರ್ ವೆಲ್‌ಗಳಿಂದ ನೀರಾವರಿಗೆ ಒಳಪಟ್ಟಿದ್ದರೆ ಶೇ 50 ಕ್ಕಿಂತ ಹೆಚ್ಚು ಭೂಮಿ ಮಳೆಯಾಶ್ರಿತವಾಗಿ ಮುಂದುವರೆದಿದೆ. ಕಬ್ಬು, ರೇಷ್ಮೆ ಮುಖ್ಯ ವಾಣಿಜ್ಯ ಬೆಳೆಗಳಾಗಿದ್ದು 5 ಸಕ್ಕರೆ ಕಾರ್ಖಾನೆಗಳನ್ನು ಹೊಂದಿದೆ. ಇದರ ಜೊತೆಗೆ ರಾಗಿ, ಭತ್ತ, ತರಕಾರಿ ಬೆಳೆಗಳನ್ನು ಬೆಳೆಯಲಾಗುತ್ತಿದೆ. ಕಾಲುವೆ ನೀರಾವರಿಯ ಹೆಚ್ಚಿನ ರೈತರು ವಾಣಿಜ್ಯ ಬೆಳೆಯಾಗಿ ಕಬ್ಬನ್ನು ಆಶ್ರಯಿಸಿದ್ದರೆ, ಬೋರ್‌ವೆಲ್, ಪಂಪಸೆಟ್ ರೈತರು ರೇಷ್ಮೆಯನ್ನು ವಾಣಿಜ್ಯ ಬೆಳೆಯಾಗಿ ಆಶ್ರಯಿಸಿದ್ದಾರೆ.

ಕೃಷಿ ಬಿಕ್ಕಟಿನ ಆಳವಾದ ಪರಿಣಾಮಗಳನ್ನು ಅನುಭವಿಸುತ್ತಿರುವ ಜಿಲ್ಲೆಯ ಕೃಷಿರಂಗದ ಸಮಸ್ಯೆಯು ರೈತ ಆತ್ಮಹತ್ಯೆಗಳಲ್ಲಿ, ವ್ಯಾಪಕವಾದ ವಲಸೆಯಲ್ಲಿ ಅಭಿವ್ಯಕ್ತಿಗೊಳ್ಳತ್ತಿದೆ. ರೈತ ಆತ್ಮಹತ್ಯೆಗೆ ಇಡೀ ದೇಶದಲ್ಲೆ ಕುಖ್ಯಾತಿ ಪಡೆದಿರುವ ಕರ್ನಾಟಕ ರಾಜ್ಯದ ರೈತ ಆತ್ಮಹತ್ಯೆ ಪಟ್ಟಿಯಲ್ಲಿ ಪ್ರತಿವರ್ಷವೂ ಮೊದಲ ಐದು ಜಿಲ್ಲೆಗಳಲ್ಲಿ ಒಂದಾಗಿರುತ್ತದೆ.


ಜಾಗತೀಕರಣ, ಉದಾರೀಕರಣ, ಖಾಸಗೀಕರಣ ನೀತಿಗಳಿಂದ ರಸಗೊಬ್ಬರದ ಬೆಲೆಯಲ್ಲಿ ಆಗಿರುವ ವಿಪರೀತ ಹೆಚ್ಚಳ, ಬಿತ್ತನೆಬೀಜ, ಉಳುಮೆ ವೆಚ್ಚ, ಕೀಟನಾಶಕದ ವೆಚ್ಚದಲ್ಲಿ ಆಗಿರುವ ವೆಚ್ಚ ಒಂದೆಡೆಯಾದರೆ ನಿರಂತರವಾಗಿ ಇಳಿಯುತ್ತಿರುವ ಕೃಷಿ ಉತ್ಪನ್ನಗಳ ಬೆಲೆ ಜಿಲ್ಲೆಯ ರೈತಾಪಿ ಸಮುದಾಯವನ್ನು ಹೈರಾಣುಗೊಳಿಸಿದೆ. 5 ವರ್ಷದ ಹಿಂದಿನ ಭತ್ತದ ಬೆಲೆ ಈಗಲೂ ಆದೇ ರೀತಿ ಇದೆ. ಕ್ವಿಂಟಾಲ್‌ಗೆ 880 ರೂನಿಂದ 950 ರೂ.ವರೆಗೆ ಮಾತ್ರ ಸಿಗುತ್ತಿದೆ. ಕಳೆದ 1 1/2 ವರ್ಷದ ಹಿಂದೆ ಮತ್ತು ಕಳೆದ ಕೇಂದ್ರ ಬಜೆಟ್‌ನಲ್ಲಿ, ಸುಂಕರಹಿತವಾಗಿ ರೇಷ್ಮೆ ಆಮದು ಮಾಡಿಕೊಳ್ಳುವ ಕೇಂದ್ರ ಸರ್ಕಾರದ ತೀರ್ಮಾನದಿಂದ ರೇಷ್ಮೆ ಗೂಡಿನ ದರಗಳು ಭಾರೀ ಪ್ರಮಾಣದ ಕುಸಿತಕ್ಕೆ ಒಳಗಾಗಿ ಅಪಾರ ಪ್ರಮಾಣದ ಕಷ್ಟಕ್ಕೆ ಗುರಿಮಾಡಿವೆ. 313-00 ಸರಾಸರಿ ಕೆಜಿಗೂಡಿನ ಬೆಲೆ 120-00 ಸರಾಸರಿಗೆ ಕುಸಿದು ಉತ್ಪಾದನಾ ವೆಚ್ಚವು ಗಿಟ್ಟದೇ 4 ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕಬ್ಬು ಬೆಳೆ ಬೆಳೆಯುವ ಖರ್ಚು, ಕಾರ್ಖಾನೆಗೆ ಕಬ್ಬು ಸಾಗಿಸುವ ಖರ್ಚು ಹಲವು ಪಟ್ಟು ಹೆಚ್ಚಳವಾಗಿದ್ದರೂ, ರಾಜ್ಯ, ಕೇಂದ್ರ ಸರ್ಕಾರಗಳ ಬೆಲೆ ನಿಗದಿ ನೀತಿ, ಸಕ್ಕರೆ ನೀತಿಯಿಂದಾಗಿ ರೈತನಿಗೆ ನಷ್ಟವಾಗುತ್ತಿದೆ. ಕಳೆದ ವರ್ಷದ ಬಾಕಿ ಹಣವನ್ನು ನೀಡುತ್ತಿಲ್ಲ. ಈಗ ನೀಡುತ್ತಿರುವ ಟನ್‌ಗೆ 2,000 ರೂ.ಗಳ ಹಣವನ್ನು ಕೂಡ 3 ತಿಂಗಳಿನಿಂದ ಆರು ತಿಂಗಳಿನ ತನಕ ವಿಳಂಬಿಸಲಾಗುತ್ತಿದೆ. ಮತ್ತು ಒಂದೇ ಕಂತಿನಲ್ಲಿ ನೀಡುತ್ತಿಲ್ಲ. ಕಾರ್ಖಾನೆಯಿಂದ ಹಣ ಪಡೆಯಲು ಹೋರಾಟವನ್ನು ಮಾಡಬೇಕಾಗಿರುವುದು ಅನಿವಾರ್ಯ ಎಂಬಂತಾಗಿದೆ.

ಶಿಕ್ಷಣ, ಆರೋಗ್ಯ, ಮದುವೆ ಮೊದಲಾದ ವೆಚ್ಚಗಳಿಂದ ತತ್ತರಿಸುತ್ತಿರುವ ರೈತಾಪಿ ಜನ, ಇರುವ ಅಲ್ಪಸ್ವಲ್ಪ ಭೂಮಿಯನ್ನು ಮಾರಾಟಮಾಡಿ ಭೂಹೀನ ಕೃಷಿಕೂಲಿಕಾರರಾಗಿ ಸೇರ್ಪಡೆಗೊಳ್ಳುತ್ತಿದ್ದಾರೆ. ಬೇಸಾಯಕ್ಕಾಗಿ ಮತ್ತು ಜೀವನ ನಿರ್ವಹಣೆಗಾಗಿ ಬೇಕಾಗಿರುವ ಸಾಲದ ಅಗತ್ಯಗಳಿಗಾಗಿ ಖಾಸಗಿ ಲೇವಾದೇವಿಯನ್ನೇ ಪ್ರಮುಖವಾಗಿ ಅವಲಂಬಿಸಿದ್ದಾರೆ. ಖಾಸಗಿ ಫೈನಾನ್ಸ್, ಲೇವಾದೇವಿ ವ್ಯವಹಾರ ಮತ್ತು ರಿಯಲ್ ಎಸ್ಟೇಟ್ ವ್ಯವಹಾರ ಜೊತೆ ಜೊತೆಗೆ ಸಾಗುತ್ತಿದೆ. ಜಿಲ್ಲೆಯ ಎಲ್ಲಾ ಕಡೆ ರಿಯಲ್ ಎಸ್ಟೇಟ್ ತನ್ನ ಕಬಂಧ ಬಾಹುಗಳನ್ನು ಚಾಚಿದ್ದು ಕೃಷಿ ಭೂಮಿಯನ್ನು ಕೊಂಡಿರುವುದನ್ನು ಕಾಣಬಹುದು. ಈ ಪ್ರಕ್ರಿಯೆ ಇನ್ನಷ್ಟು ವೇಗವಾಗಿ ಮುಂದುವರೆಯುವ ಎಲ್ಲಾ ಲಕ್ಷಣಗಳು ಇವೆ. ಇದರಿಂದಾಗಿ ಇಡೀ ಜಿಲ್ಲೆಯಲ್ಲಿ ಈ ವರೆಗೆ ಕನಿಷ್ಠ 1 ಲಕ್ಷ ಎಕರೆ ಕೃಷಿ ಭೂಮಿ ಹೂಡಿಕೆದಾರರ 'ಸುರಕ್ಷಿತ ತಾಣ'ವಾಗಿ ತೆಕ್ಕಲು ಬಿದ್ದಿದೆ.

ಕೃಷಿಯಲ್ಲಿ ಇರುವ ವ್ಯಾಪಕ ನಿರುದ್ಯೋಗ ದೊಡ್ಡ ಪ್ರಮಾಣದಲ್ಲಿ ಹೆಚ್ಚಳವಾಗುತ್ತಿದೆ. ಭೂಹೀನ ಕುಟುಂಬಗಳಿಗೆ ಉದ್ಯೋಗವೇ ಇಲ್ಲದಷ್ಟು ಪ್ರಮಾಣದಲ್ಲಿ ನಿರುದ್ಯೋಗ ಬೆಳೆಯುತ್ತಿದೆ. ಕೃಷಿ ಚಟುವಟಿಕೆಗಳಿಗೆ ಯಂತ್ರಗಳ ಬಳಸಿ ಕಟಾವು-ನಾಟಿ ಮಾಡಲಾಗುತ್ತಿದೆ. ಮುಯ್ಯಿ ಅಳಿನ ಪದ್ಧತಿ ವ್ಯಾಪಕವಾಗಿದೆ. ಸುಗ್ಗಿ ವೇಳೆ ಭತ್ತ ತೂರಲು ರಾಮನಗರ, ಚಾಮರಾಜನಗರ ಜಿಲ್ಲೆಗಳಿಂದ ವಲಸೆ ಬರುತ್ತಿದ್ದ ಕೂಲಿ ಆಳುಗಳ ವಲಸೆ ಶೇ 100 ರಷ್ಟು ನಿಂತಿದೆ. ಇದೇ ಸಂದರ್ಭದಲ್ಲಿ ಕಬ್ಬು ಕಟಾವು ಮಾಡಲು ಬಳ್ಳಾರಿ ಜಿಲ್ಲೆಯಿಂದ ಸಾವಿರಾರು ಕುಟುಂಬ ಗಳನ್ನು 2 ಖಾಸಗಿ ಸಕ್ಕರೆ ಕಾರ್ಖಾನೆಗಳು 5 ತಿಂಗಳುಗಳ ಕಾಲ ಇಲ್ಲೇ ನೆಲೆಸುವಂತೆ ಕರೆಸಿಕೊಂಡಿರುವುದು. ಕಬ್ಬು ಕಟಾವು ಕೂಲಿ ಮೇಲೆ ಮತ್ತು ಕಟಾವು ಕೆಲಸದ ಮೇಲೆ ಪರಿಣಾಮ ಬೀರಿದೆ. ಕಟಾವು ಕೂಲಿ ಮೇಲೆ ಜೀವನ ಮಾಡುತ್ತಿದ್ದ ಕೂಲಿಕಾರರಿಗೆ ನಿರುದ್ಯೋಗ ಉಂಟು ಮಾಡಿದೆ. ಈ ಎಲ್ಲಾ ಬೆಳವಣಿಗೆಗಳಿಂದ ಕಟ್ಟಡ ಕಾರ್ಮಿಕರ ಸಂಖ್ಯೆ, ಪಾಲುಬೆಳೆಗಾರರ ಸಂಖ್ಯೆಗಳಲ್ಲಿ ತೀವ್ರವಾದ ಹೆಚ್ಚಳ ಕಂಡು ಬರುತ್ತಿದೆ. ಕೃಷಿಯೇತರ ಆದಾಯ ಹೊಂದಿರುವ ರೈತರು ಮುಖ್ಯವಾಗಿ ಮೇಲ್ಮಧ್ಯಮ ರೈತರು ಕೃಷಿಯಿಂದ ದೂರ ಉಳಿದು ಪಾಲಿಗೆ ನೀಡುತ್ತಿದ್ದಾರೆ. ಕೂಲಿ ಹುಡುಕಿಕೊಂಡು ಬಾಂಬೆ, ಬೆಂಗಳೂರಿಗೆ ದೊಡ್ಡ ಪ್ರಮಾಣದಲ್ಲಿ ವಲಸೆ ಮತ್ತು ಬೆಂಗಳೂರಿಗೆ ಕೂಲಿಗೆ ಹೋಗಿ ಬರುವವರ ಸಂಖ್ಯೆಯಲ್ಲಿ ತೀವ್ರವಾದ ಹೆಚ್ಚಳ ಆಗಿದೆ.

ಈ ಅವಧಿಯಲ್ಲಿ ಗೆಜ್ಜಲಗೆರೆ ಕೈಗಾರಿಕಾ ಪ್ರದೇಶದಲ್ಲಿ ಒಂದು ಗಾರ್ಮೆಂಟ್ಸ್ ಘಟಕ ಮತ್ತು ಶ್ರೀರಂಗಪಟ್ಟಣದ ಅರಕೆರೆ, ತೂಬಿನಕೆರೆ ಕೈಗಾರಿಕಾ ಪ್ರದೇಶಗಳಲ್ಲಿ ಸಣ್ಣ-ಪುಟ್ಟ ಕಾರ್ಖಾನೆಗಳು ಪ್ರಾರಂಭವಾಗಿದ್ದು, ಕೆಲವು ಸಾವಿರಗಟ್ಟಲೆ ಮಹಿಳೆಯರಿಗೆ ಉದ್ಯೋಗ ನೀಡಿವೆ. ದಿನವೂ ಕೆಲಸ ನೀಡುವಂತೆ ಈ ಘಟಕಗಳ ಕದತಟ್ಟುವವರ ಸಂಖ್ಯೆಯೇ ಸಾವಿರಾರು ಇದೆ. ರೇಷ್ಮೆ ಬೆಲೆ ಕುಸಿತ ಮುಂದುವರೆದಿರುವುದು. ಕೃಷಿ ಪರಿಸ್ಥಿತಿ ಮತ್ತಷ್ಟು ಅಧೋಗತಿಗೆ ಹೋಗುತ್ತಿರುವುದು ಸಣ್ಣ ಮತ್ತು ಅತಿ ಸಣ್ಣ ರೈತರೇ ಅಧಿಕವಾಗಿರುವ ಮಂಡ್ಯ ಜಿಲ್ಲೆಯನ್ನು ದಿವಾಳಿಯತ್ತ ಕೊಂಡೊಯ್ಯುತ್ತಿದೆ.

ಈ ರೀತಿ ನಿಜ ಆದಾಯದಲ್ಲಿ ಉಂಟಾಗಿರುವ ತೀವ್ರವಾದ ಕುಸಿತವು ಹಸಿವು, ಅಪೌಷ್ಠಿಕತೆಯನ್ನು ಹೆಚ್ಚು ಮಾಡಿದ್ದು, ಪ್ರದೇಶವಾರು ಅತಿಹೆಚ್ಚು ಖಾಸಗಿ ಆಸ್ಪತ್ರೆಗಳನ್ನು ಹೊಂದಿರುವ ತಾಣವಾಗಿ ಮಂಡ್ಯ ಗುರುತಿಸಲ್ಪಡುತ್ತಿದೆ. ಔಷಧಿ ಮಾರಾಟ ಭಾರೀ ಪ್ರಮಾಣದಲ್ಲಿ ನೆಗೆತ ಕಂಡಿದ್ದು ರೋಗಿಗಳ ಕಿಸೆಗೆ ಕತ್ತರಿ ಹಾಕಲಾಗುತ್ತಿದೆ. ಗ್ರಾಮೀಣ ಕರಕುಶಲ ಕರ್ಮಿಗಳು ಸಂಪೂರ್ಣ ನೆಲಕಚ್ಚಿದ್ದು ಉದ್ಯೋಗ ಇಲ್ಲದ ಪರಿಸ್ಥಿತಿ ಉಂಟಾಗಿದೆ.



ಹೆಚ್ಚುತ್ತಿರುವ ಆರ್ಥಿಕ ಅಭದ್ರತೆ, ಹಲವು ಸಾಮಾಜಿಕ ದುಷ್ಪರಿಣಾಮಗಳಿಗೆ ಕಾರಣವಾಗಿದೆ. ವರದಕ್ಷಿಣೆ- ಹೊಸ-ಹೊಸ ರೂಪಗಳೊಂದಿಗೆ ಅತಿ ಗಟ್ಟಿಯಾದ ಸಾಮಾಜಿಕ ಆಚರಣೆಯಾಗಿದೆ. ಮದುವೆ ಮಾಡುವ ವಿಷಯ ಬಂದಾಗ 'ಜಾತಿ ಬೇಕಾದರೂ ಬಿಡುವೆವು ಹಣವನ್ನು ಬಿಡಲಾರೆವು', ಎಂಬಂತಾಗಿದೆ. ಮಹಿಳೆಯರ ದುಡಿಮೆಯಲ್ಲೇ ಬದುಕುವ ಕುಟುಂಬಗಳ ಸಂಖ್ಯೆ ಹೆಚ್ಚಾಗುತ್ತಿದೆ. ಮಹಿಳೆಯರ ಮೇಲಿನ ದೌರ್ಜನ್ಯ, ಕಿರುಕುಳ, ಕೌಟುಂಬಿಕ ಹಿಂಸೆ, ವರದಕ್ಷಿಣೆ ಕಿರುಕುಳ ಪ್ರಕರಣಗಳು ಹೆಚ್ಚು ಹೆಚ್ಚು ವರದಿಯಾಗುತ್ತಿವೆ. ಮಕ್ಕಳ ಅದರಲ್ಲೂ ಹೆಣ್ಣು ಮಕ್ಕಳ, ಮಹಿಳೆಯರ ಅಪಹರಣ, ಕಾನೂನು ಬಾಹಿರ ಮಾನವ ಸಾಗಾಟ ಹೆಚ್ಚು ಹೆಚ್ಚು ನಡೆಯುತ್ತಿವೆ.

ಸರಳ ಮದುವೆಗಳಿಗೆ ಹೆಸರುವಾಸಿಯಾಗಿದ್ದ ಮಂಡ್ಯ ಜಿಲ್ಲೆಯಲ್ಲಿ ಅತಿಕಡಿಮೆ ಎನಿಸುವಷ್ಟು ಸರಳ ಮದುವೆಗಳು ನಡೆಯುತ್ತಿವೆ. ದುಂದು ವೆಚ್ಚದ ದುಬಾರಿ ಮದುವೆಗಳು ಒಂದು ಕಡೆಯಾದರೆ, ರಾಜಕಾರಣಿಗಳು ಆಯೋಜಿಸುವ ಸಾಮೂಹಿಕ ವಿವಾಹಗಳು ಇನ್ನೊಂದು ಕಡೆ ಹೆಚ್ಚು ಹೆಚ್ಚು ಜರುಗುತ್ತಿವೆ.

ಜಾತಿ-ಅಸ್ಪೃಶ್ಯತೆ ವ್ಯಾಪಕವಾಗಿದೆ. ಎರಡು ಲೋಟ ಪದ್ಧತಿ, ದೇವಸ್ಥಾನಕ್ಕೆ ಪ್ರವೇಶ ನಿರಾಕರಣೆ, ಸಾರ್ವಜನಿಕ ವಸ್ತುಗಳ ಉಪಯೋಗ ತಾರತಮ್ಯ, ಕ್ಷೌರ ನಿರಾಕರಣೆ, ಊರಿನ ಕೆಲಸಗಳಿಗೆ ಬಿಟ್ಟಿಯಾಗಿ ಸೇವೆ ಮಾಡುವುದು ಮುಂತಾದ ಅನಿಷ್ಠ ಅಸ್ಪೃಶ್ಯ
ಆಚರಣೆಗಳು ಎಲ್ಲೆಡೆ ವ್ಯಾಪಕವಾಗಿವೆ. ಒ
ಜನಸಂಖ್ಯೆಯ ಶೇ 14 ರಷ್ಟಿರುವ ದಲಿ
ಜನಸಂಖ್ಯೆಯಲ್ಲಿ ಬಹುತೇಕ ಆದಿಕರ್ನಾ
ಭೋವಿ, ಮಾದಿಗ, ಆದಿ ದ್ರಾವಿಡ
ಸಮುದಾಯಕ್ಕೆ ಸೇರಿದ್ದಾರೆ. ಅಸ್ಪೃಶ್ಯತೆ ಯಂ
ಸಾಮಾಜಿಕ ಪ್ರಶ್ನೆಗಳು ಪ್ರಜಾಸತ್ತಾ
ಚಳುವಳಿಯಲ್ಲಾಗಲಿ, ದಲಿತ ಚಳುವಳಿಯಲ್ಲಾ
ಇನ್ನು ಆದ್ಯತೆಯ ವಿಷಯಗಳ
ರೂಪುಗೊಂಡಿಲ್ಲ.

ಬೃಹತ್ ರ್‍ಯಾಲಿ, ಬಹಿರಂಗಸಭೆ ಪ್ರತಿನಿಧಿ ಅಧಿವೇಶನ

ಡಿಸೆಂಬರ್ 17,18-2011 ರಂದು ಎರ
ದಿನಗಳ ಕಾಲ ಮದ್ದೂರು ತಾಲ್ಲೂ
ಭಾರತೀನಗರದಲ್ಲಿ ನಡೆದ ಸಿಪಿಐ(ಎಂ) 6
ಜಿಲ್ಲಾ ಸಮ್ಮೇಳನವು ಬೃಹತ್ ರ್‍ಯಾಲಿ ಯೊಂ
ಆರಂಭವಾಯಿತು. ಸುಮಾರು ಸಾವಿರಕ್ಕೂ ಹ
ಮಹಿಳೆಯರೆ ಹೆಚ್ಚಿನ ಸಂಖ್ಯೆಯ
ಭಾಗವಹಿಸಿದ್ದ ಆಕರ್ಷಕ ಮೆರವಣಿ
ಜಾನಪದ ಪೂಜಾ ಕುಣಿತ ಮೆರಗನ್ನು ತಂ
ಕೊಟ್ಟಿತು. ಕೆಂಪು ಬಾವುಟಗಳ ಮೆರವ
ಜ್ಯೋತಿ ಬಸು ವೇದಿಕೆ ಎಂದು ಹೆಸರಿಸಲಾಗಿ
ಮಂಡ್ಯ ಸರ್ಕಲ್‌ನಲ್ಲಿ ಬಹಿರಂಗ ಸಭೆಯಾ
ಮಾರ್ಪಟ್ಟಿತು.

ಈ ಬಹಿರಂಗ ಸಭೆಯನ್ನು ಉದ್ದೇ
ಮಾತಾನಾಡಿದ ಸಿಪಿಐಎಂ ರಾಜ್ಯ ಕಾರ್ಯದ
ಮಂಡಳಿ ಸದಸ್ಯರಾದ ಕಾಂ/ ಜಿ.ಎ
ನಾಗರಾಜ್ ರೈತ ಕಾರ್ಮಿಕರ ಕಷ್ಟಗ
ಕಾರಣವಾಗಿರುವ ಕೇಂದ್ರ, ರಾಜ್ಯ ಸರ್ಕಾರ
ನೀತಿಗಳನ್ನು ವಿವರಿಸಿದರು. ಗಣಿಗಳ್ಳರು ಮ
ಭೂಗಳ್ಳರ ಕೈಗೊಂಬೆಯಾಗಿ ಸದಾನಂದಗೌ
ಸರ್ಕಾರ ಕೆಲಸ ಮಾಡುತ್ತಿದೆ. ಬ್ರಹ್ಮಾಂ
ಭ್ರಷ್ಟಾಚಾರದ ಕಾರಣಕ್ಕೆ ಜೈಲು ಪಾಲಾಗಿ
ಯಡಿಯೂರಪ್ಪ ರಾಜೀನಾಮೆ ನೀಡಿದ್ದರ
ಅಕ್ರಮಗಳು, ಹಗರಣಗಳು ಮುಂದುವ
ಯುತ್ತಿವೆ. ಯಡಿಯೂರಪ್ಪ ಸರ್ಕಾರ
ಹಗರಣಗಳನ್ನು ಮುಚ್ಚಿ ಹಾಕುವುದೇ
ಸರ್ಕಾರದ ಪ್ರಮುಖ ಕೆಲಸವಾಗಿದೆ ಎಂ
ಕುಟುಕಿದರು. ಮತ್ತೋರ್ವ ಸಿಪಿಐ(ಎಂ) ರಾ
ಕಾರ್ಯದರ್ಶಿ ಮಂಡಳಿ ಸದಸ್ಯರಾ
ಕಾಂ.ನಿತ್ಯಾನಂದಸ್ವಾಮಿ ಮಾತನಾಡಿದ
ಸಭೆಯ ಅಧ್ಯಕ್ಷತೆಯನ್ನು ಸಿಪಿಐ(ಎಂ) ಜಿ
ಕಾರ್ಯದರ್ಶಿ ಜಿ.ರಾಮಕೃಷ್ಣ ವಹಿಸಿದ್ದರು. ಕಾ
ಹರಿಕಿಷನ್ ಸಿಂಗ್ ಸುರ್ಜಿತ್ ಸಭಾಂಗ
ಎಂದು ನಾಮಕರಣ ಮಾಡಿದ್ದ ವೀರಶೈ
ಸಮುದಾಯ ಭವನದಲ್ಲಿ ಪ್ರತಿನಿಧಿ ಅಧಿವೇಶ
ಜರುಗಿತು. 70 ಜನರಷ್ಟಿದ್ದ ಪ್ರತಿನಿಧಿಗ
ಚರ್ಚೆಯನ್ನು ಆಧರಿಸಿ 16 ಜನ ಕರಡು ವರ
ಮೇಲೆ ಮಾತನಾಡಿದರು. ಅಂತಿಮವಾಗಿ ನೂತ
ಜಿಲ್ಲಾ ಸಂಘಟನಾ ಸಮಿತಿ ಸರ್ವಾನುಮತದಿಂ
ಆಯ್ಕೆಯಾಗಿ ನೂತನ ಜಿಲ್ಲಾ ಸಂಘಟ
ಸಮಿತಿ ಕಾರ್ಯದರ್ಶಿಯಾಗಿ ಎಂ. ಪುಟ್ಟಮಾದ
ಸದಸ್ಯರುಗಳಾಗಿ ಜಿ.ರಾಮಕೃಷ್ಣ ಟಿ.ಎಲ
ಕೃಷ್ಣೇಗೌಡ, ಟಿ.ಹೆಚ್. ಆನಂದ್, ದೇವಿ,
ಯಶವಂತ, ಸಿ.ಕುಮಾರಿ, ಕೆ.ಬಸವರಾಜು, ಎ
ಸುರೇಂದ್ರ ಆಯ್ಕೆಯಾದರು. ಈ ಸಂದರ್ಭದ
ನಿರ್ಣಯಗಳನ್ನು ಜಾರಿಗೊಳಿಸಲು ಹೋರಾ
ರೂಪಿಸುವ ಹುಮ್ಮಸ್ಸಿನೊಂದಿ
ಮುಕ್ತಾಯವಾಯಿತು.

ಸೋರುತಿಹುದು ಮನೆಯ ಮಾಳಿಗೆ.......

'ಅಂದಿನ ಕಲ್ಲಿದ್ದಲು ಅಂದೇ ಬಳಸು, ಕರ್ನಾಟಕ ರಾಜ್ಯವನ್ನು ಕತ್ತಲೆಯತ್ತ ಮುನ್ನಡೆಸು..... '

ಈ ವಿಷಯ ಇದೇ ಅಂಕಣದಲ್ಲಿ ಹಲವು ಬಾರಿ ಪ್ರಸ್ತಾಪವಾಗಿದೆ. ಕರ್ನಾಟಕ ರಾಜ್ಯ ಕ್ರಮೇಣ ಗಾಢ ಕತ್ತಲೆಯತ್ತ ಜಾರುತ್ತಿದೆ. ಹಲವು ತಜ್ಞರು, ವಿದ್ಯುತ್ ಪರಿಸ್ಥಿತಿಯನ್ನು ಹತ್ತಾರು ವರ್ಷ ನಿಭಾಯಿಸಿದ ಅನುಭವ ಉಳ್ಳ ನಿವೃತ್ತ ಅಧಿಕಾರಿಗಳು, ಜನಪರ ಸಂಘಟನೆಗಳು, ಪತ್ರಿಕೆಗಳು ಸಾಕಷ್ಟು ಎಚ್ಚರಿಕೆ ನೀಡಿದರೂ ಪರಿಸ್ಥಿತಿ 'ಅಲ್ಲಿಗೇ' ಬಂದು ಮುಟ್ಟಿದೆ. 'ಅಲ್ಲಿಗೆ' ಎಂದರೆ ಎಲ್ಲಿಗೆ ? ನೋಡಿ.

ರಾಜ್ಯಕ್ಕೆ ವಿದ್ಯುತ್ ಪೂರೈಸುವ ಪ್ರಮುಖ ವಿದ್ಯುತ್ ಸ್ಥಾವರಗಳಲ್ಲಿ ರಾಯಚೂರಿನ ಥರ್ಮಲ್ ವಿದ್ಯುತ್ ಘಟಕವೂ ಒಂದು. ಇಲ್ಲಿನ ವಿದ್ಯುತ್ ಘಟಕಗಳಿಗೆ ಆಂಧ್ರ ಪ್ರದೇಶ, ಮಹಾರಾಷ್ಟ್ರ, ಛತ್ತೀಸ ಗಡ ಮುಂತಾದ ರಾಜ್ಯಗಳ ಕಲ್ಲಿದ್ದಲು ಗಣಿಗಳಿಂದ ನಿತ್ಯವೂ ಕಲ್ಲಿದ್ದಲು ಪೂರೈಕೆಯಾಗಬೇಕು. ಆದರೆ ನಿತ್ಯ ಪೂರೈಕೆಯಾಗುವ ಕಲ್ಲಿದ್ದಲನ್ನೇ ನಂಬಿ ಕೂರಲಾಗುವುದಿಲ್ಲ. ಮಳೆ, ಪ್ರವಾಹ, ಮುಷ್ಕರ, ರೈಲು ಅಪಘಾತ,..... ನಾನಾ ಕಾರಣಗಳಿಗಾಗಿ ಕಲ್ಲಿದ್ದಲು ಪೂರೈಕೆಗೆ ಯಾವುದೇ ಹಂತದಲ್ಲಿ ಅಡೆತಡೆ ಬರಬಹುದು. ಹಾಗಾಗಿ ಮುನ್ನೆಚರಿಕೆ ಕ್ರಮವಾಗಿ 6-7 ಲಕ್ಷ ಟನ್‌ಗಳಷ್ಟು ಕಲ್ಲಿದ್ದಲನ್ನು ಸಂಗ್ರಹ ಮಾಡಿಟ್ಟುಕೊಳ್ಳುವ ಕ್ರಮವನ್ನು ಮೊದಲಿನಿಂದಲೂ ಪಾಲಿಸುತ್ತ ಬರಲಾಗಿತ್ತು.

ಕರ್ನಾಟಕ ರಾಜ್ಯಕ್ಕೆ ಬಿಜೆಪಿ ಸರ್ಕಾರ ಬಂದೇ ಬಂತು. ಈ ರೀತಿ ಇದ್ದ ಕಲ್ಲಿದ್ದಲು ಸಂಗ್ರಹ ದಿನೇ ದಿನೇ ಕರಗುತ್ತ ಬಂತು. ಈಗ ಪರಿಸ್ಥಿತಿ ಎಲ್ಲಿಗೆ ಬಂದಿದೆ ಎಂದರೆ, ಅಂದು ಪೂರೈಕೆಯಾಗುವ ಕಲ್ಲಿದ್ದಲನ್ನು ಬಳಸಿ ಅಂದು ವಿದ್ಯುತ್ ಉತ್ಪಾದನೆ ನಡೆಸಬೇಕು. ಸಂಗ್ರಹಗಾರದಲ್ಲಿ ಏನೂ ಇಲ್ಲ.

ಒಂದೊಮ್ಮೆ ಕಲ್ಲಿದ್ದಲು ಪೂರೈಕೆಯಲ್ಲಿ ವ್ಯತ್ಯಾಸವಾದರೆ ಏನು ಮಾಡುವುದು ? ಕರ್ನಾಟಕ ರಾಜ್ಯವನ್ನು ಕತ್ತಲೆಗೆ ದೂಡಿ ಇಂಧನ ಸಚಿವರು, ರಾಜ್ಯದ ಮುಖ್ಯಮಂತ್ರಿಗಳು, ಮಹಾ



ಮುಖ್ಯಮಂತ್ರಿಗಳು (ಮಹಾ ಮುಖ್ಯಮಂತ್ರಿಗಳು ಯಾರು ಎಂದು ಗೊತ್ತಾಗದಿದ್ದರೆ ದಯಮಾಡಿ ತಾವು ಸನ್ಮಾನ್ಯ ಅಬಕಾರಿ ಸಚಿವ ರೇಣುಕಾಚಾರ್ಯ ಅವರನ್ನು ಸಂಪರ್ಕಿಸಿ.) ಅಧಿಕಾರಿ ವರ್ಗದವರು ಶ್ರೀ ಶ್ರೀ ಶ್ರೀ ರವಿಶಂಕರ ಅವರ ' ಬದುಕುವ ಕಲೆ'ಯ ಪಾಠವನ್ನು ಧ್ಯಾನಿಸುತ್ತ ತಾವೂ ಕತ್ತಲಲ್ಲಿ ಕೂರಬಹುದು. ಆ ಧ್ಯಾನದಲ್ಲಿ ರಾಜ್ಯದ ಜನತೆಗೆ ಬೆಳಕು ಸಿಗದಿದ್ದರೂ, ಈ ಕೆಲವು ಗಣ್ಯ ವರ್ಗಕ್ಕಂತೂ ಬೆಳಕು ಸಿಕ್ಕೇ ಸಿಗುತ್ತದೆ.


ಇದೀಗ ಡಿಸೆಂಬರ್ ತಿಂಗಳು ಕಳೆದು ಜನವರಿ ತಿಂಗಳು ಉರುಳುತ್ತಿದೆ. ರಾಜ್ಯದ ಜಲಾಶಯಗಳ ನೀರು ಖಾಲಿಯಾಗುತ್ತಾ ಬರುತ್ತಿದೆ. ಈಗಾಗಲೆ ಇರುವ ವಿದ್ಯುತ್ ಕಣ್ಣಾ ಮುಚ್ಚಾಲೆ ಆಟಗಳು ಮುಂದೆ ಇನ್ನೂ ಜೋರಾಗುತ್ತವೆ. ಕೆಲಸವಿಲ್ಲದ ಜನರೂ ತಮ್ಮ ಬಾಲ್ಯದ ದಿನಗಳನ್ನು ನೆನೆದು ತಾವೂ ಕಣ್ಣಾ ಮುಚ್ಚಾಲೆ ಆಟ ಆಡಬಹುದು. ಹೀಗಿರುವಾಗ ರಾಜ್ಯದ ಖಾಸಗಿ ವಿದ್ಯುತ್ ಉತ್ಪಾದಕರು, ಖಾಸಗಿ ಕಬ್ಬಿನ ಕಾರ್ಖಾನೆ ಮಾಲಿಕರು, ರಾಜ್ಯದ ಜನರ ಹಿತ ರಕ್ಷಣೆಗಾಗಿ ನಾವು ವಿದ್ಯುತ್ ಕೊಡುತ್ತೇವೆ ಎನ್ನುವರು. ಕಷ್ಟ ಕಾಲದಲ್ಲಿ ಬೆಳಕು ಕೊಡುವವರಿಗೆ ಕೊಂಚ " ಧಾರಾಳವಾಗಿ ಬೆಲೆ ಕೊಟ್ಟು" ವಿದ್ಯುತ್ ಖರೀದಿಸಿದರೂ ಏನೂ ತಪ್ಪಿಲ್ಲ ಬಿಡಿ ಎಂದು ನಮ್ಮ ಜನರೂ ಒಪ್ಪಿಗೆ ಕೊಡುತ್ತಾರೆ. ಹಾಂ !! ನೋಡಿ. ಈಗ ಅದೇ ಬೇಕಾಗಿರುವುದು. ಜನರ ಒಪ್ಪಿಗೆ. ಈಗ ಇಲ್ಲಿ ವಿದ್ಯುತ್ ಉತ್ಪಾದಿಸುವ ಕೆಲಸ ಬಿಟ್ಟು, ಖಾಸಗಿ ವಿದ್ಯುತ್ ಖರೀದಿಗೆ ಜನರ ಒಪ್ಪಿಗೆ ಉತ್ಪಾದಿಸಲಾಗುತ್ತಿದೆ. ಇದನ್ನು ನಾವು ಹೇಳುತ್ತಿರುವುದಲ್ಲ. ಆಗಲೇ ಹೇಳಲಾದ ವಿಷಯ ತಜ್ಞರೇ ಇದನ್ನೂ ಹೇಳಿದ್ದಾರೆ.


ಇಂಥಾ ಅಮೂಲ್ಯ ಒಪ್ಪಿಗೆ ಉತ್ಪಾದನೆಯಲ್ಲಿ ಬಿಜೆಪಿ ಸರ್ಕಾರವನ್ನು ಮೀರಿಸುವವರಿಲ್ಲ. ಏನಂತೀರಿ.

ಕುಡಿಯುವ ನೀರಿಗೆ ಯೋಜನೆ : ಬಿಡುಗಡೆಯಾಗಿದ್ದು 920 ಕೋಟಿ : ಖರ್ಚಾಗಿರುವುದು 250 ಕೋಟಿ

ಕರ್ನಾಟಕ ರಾಜ್ಯದ ಸು. 99 ತಾಲ್ಲೂಕುಗಳನ್ನು ಬರಪೀಡಿತವೆಂದು ಘೋಷಿಸಲಾಗಿದೆ. ಕುಡಿಯುವ ನೀರಿನ ಕೊರತೆ, ಮೇವಿನ ಕೊರತೆ, ಬೆಳೆ ವಿಫಲತೆಯಿಂದ ಜನರು ನರಳುತ್ತಿದ್ದಾರೆ. ಸರ್ಕಾರದ ಕಡೆಯಿಂದ ಬರಪೀಡಿತ ಪ್ರದೇಶವೆಂಬ ಘೋಷಣೆ ಬಿಟ್ಟು ಹೆಚ್ಚಿನ ಬೇರೇನನ್ನು ಮಾಡಿರುವುದಕ್ಕೆ ಸಾಕ್ಷಿಗಳು ಜನರಿಗೆ ಕಂಡು ಬರುತ್ತಿಲ್ಲ. ಈ ಮಾಹಿತಿ ನೋಡಿ.

ಪ್ರಸಕ್ತ ಹಣಕಾಸು ವರ್ಷದಲ್ಲಿ ಗ್ರಾಮೀಣ ಭಾಗದ ಕುಡಿಯುವ ನೀರು ಪೂರೈಕೆಗಾಗಿ ಸರ್ಕಾರ ಬಜೆಟ್‌ನಲ್ಲಿ ನಿಗದಿ ಪಡಿಸಿದ ಮೊತ್ತ 1500 ಕೋಟಿ ರೂಪಾಯಿಗಳು. ಇದರಲ್ಲಿ 920 ಕೋಟಿ ರೂಪಾಯಿಗಳು ಬಿಡುಗಡೆಯಾಗಿದೆಯಂತೆ. ಆದರೆ ಅದರಲ್ಲಿ ಬಳಕೆಯಾಗಿರುವುದು (ಜನವರಿ 5, 2012 ರ ಮಾಹಿತಿಯಂತೆ) ಕೇವಲ 250 ಕೋಟಿ ರೂಪಾಯಿಗಳು. ಜನ ಕುಡಿಯುವ ನೀರಿಲ್ಲದೇ ಹಾಹಾಕಾರದಲ್ಲಿ ತತ್ತರಿಸುವಾಗಲೂ ಬಿಡುಗಡೆಯಾಗಿರುವ ಹಣವನ್ನೂ ಖರ್ಚು ಮಾಡಿಸಲು ಈ ಸರ್ಕಾರಕ್ಕೆ ಆಗಿಲ್ಲ. ಸರ್ಕಾರದ ಆಡಳಿತ ಯಂತ್ರ, ಬಜೆಪಿ ಸರ್ಕಾರದ ಸಚಿವರು, ಶಾಸಕರು, ಸ್ಥಳೀಯ ಸಂಸ್ಥೆಗಳ ಚುನಾಯಿತ ಸದಸ್ಯರುಗಳಿಗೆ, ಬಿಜೆಪಿಯ ಸಂಸದರಿಗೆ ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ಗಮನ ನೀಡಲಾರದಂತಹ - ಕಡಿದು ಕಟ್ಟೆ ಹಾಕುವಂತಹ ಘನಾಂಧಾರಿ ಕೆಲಸ ಬೇರೆ ಏನಿದೆ ??!! ರಾಜ್ಯದ ಜನರಿಗೆ ದೇಶ ಪ್ರೇಮದ ಪಾಠವನ್ನೂ, ಬಿಜೆಪಿ ಸರ್ಕಾರಕ್ಕೆ 'ಜನಪರ ಆಡಳಿತದ ಪಾಠ'ವನ್ನು ಬೋಧಿಸುವ ದೇಶಭಕ್ತ ಆರೆಸ್ಸೆಸ್ ಇದನ್ನೆಲ್ಲಾ ನೋಡಿಕೊಂಡು ಏನು-ಮಾಡುತ್ತಿದೆ. ಈ ರಾಜ್ಯದಲ್ಲಿ ಏನು ನಡೆಯುತ್ತಿದೆ. ?





ಆರ್.ರಾಮಕೃಷ್ಣ

ಬಿಜೆಪಿ ಸರ್ಕಾರಕ್ಕೆ ಬಡಿದಿರುವ ರೋಗವೇನು ?

ಇದನ್ನು ಏನೆಂದು ಕರೆಯಬೇಕೆಂದು ತೀರ್ಮಾನಿಸಿಕೊಳ್ಳಬೇಕಿದೆ. ರಾಜ್ಯದಲ್ಲಿ ಕಳೆದ 9 ತಿಂಗಳಿಂದ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯವಾದ ಔಷಧವನ್ನೇ ಖರೀದಿ ಮಾಡಿಲ್ಲ. ಇಲಾಖೆ ಏಪ್ರಿಲ್ ತಿಂಗಳಿನಲ್ಲಿ ಸರ್ಕಾರಿ ಆಸ್ಪತ್ರೆಗಳಿಗೆ ಅಗತ್ಯವಾದ ಔಷಧಗಳನ್ನು ಟೆಂಡರ್ ಮೂಲಕ ಖರೀದಿ ಮಾಡಬೇಕು. ಒಂಭತ್ತು ತಿಂಗಳು ಕಳೆದು ಹತ್ತನೇ ತಿಂಗಳು ನಡೆಯುತ್ತಿದೆ. ಆದರೆ ಇದುವರೆಗೂ ಟೆಂಡರನ್ನೇ ಕರೆದಿಲ್ಲ. !!

ರಾಜ್ಯದ ಜನರ ಆರೋಗ್ಯ ರಕ್ಷಣೆಯ ಉಸ್ತುವಾರಿ ನೋಡಿಕೊಳ್ಳಲು ರಾಜ್ಯ ಬಿಜೆಪಿ ಸರ್ಕಾರದಲ್ಲಿ ಒಬ್ಬ ಸಚಿವರಿದ್ದಾರೆ. " ದಕ್ಷ ಆಡಳಿತ ಕೊಡುತ್ತೇನೆ, ಜನಪರವಾದ ಆಡಳಿತ ಕೊಡುತ್ತೇನೆ" ಎನ್ನುತ್ತಾ, ಸರ್ಕಾರದ ಯೋಜನೆಗಳನ್ನು ಸರಿಯಾಗಿ ಜಾರಿ ಮಾಡುತ್ತಿಲ್ಲ ಎಂದು ಅಧಿಕಾರಿಗಳ ಮೇಲೆ ಹರಿ ಹಾಯುವ ಮುಖ್ಯಮಂತ್ರಿಯೊಬ್ಬರು ಸಿ.ಎಂ. ಕುರ್ಚಿಯ ಮೇಲೆ ಕುಳಿತಿದ್ದಾರೆ. ದಕ್ಷಿಣ ಭಾರತದ ಪ್ರಪ್ರಥಮ ಬಿಜೆಪಿ ಸರ್ಕಾರಕ್ಕೆ ಮಾರ್ಗದರ್ಶನ ಮಾಡಲು ಬಿಜೆಪಿಯ ದೆಹಲಿ ಹೈ ಕಮಾಂಡ್, ಇತ್ತ ನಾಗಪುರದ ಸೂಪರ್ ಹೈಕಮಾಂಡ್‌ನ ಕರ್ನಾಟದ ತುಂಡು 'ಕೇಶವ ಕೃಪ' ದ ದೇಶಭಕ್ತರ ದಂಡು, ಸದಾ ಕಾಲ ಜನಹಿತವನ್ನೇ ಉಸಿರಾಡುವ ಹತ್ತಾರು ಮಠಾಧಿಪತಿಗಳ ಹಿಂಡು ಎಲ್ಲ ಇದ್ದುಕೊಂಡು ಈ ಬಿಜೆಪಿ ಸರ್ಕಾರದ ದರ್ಬಾರಿನಲ್ಲಿ ನಡೆಯುತ್ತಿರುವುದೇನು ? ಸಮಾಜದ ದುರ್ಬಲ ವರ್ಗಗಳಿಗೆ ಇಲ್ಲಿ ದೊರೆಯುತ್ತಿರುವುದೇನು ?

ರೋಗಿಗಳ ರಕ್ತ ಹೀರುವ ಖಾಸಗಿ ನರ್ಸಿಂಗ್ ಹೋಮ್‌ಗಳಿಗೆ ಹೋಗುವ ಶಕ್ತಿ ಇಲ್ಲದೇ ಸರ್ಕಾರಿ ಆಸ್ಪತ್ರೆಗಳಿಗೆ ಬರುವ ಬಡ ರೋಗಿಗಳಿಗೆ ಇಲ್ಲಿ ಸಿಗುತ್ತಿರುವುದು " ಖಾಸಗಿ ಮೆಡಿಕಲ್ ಸ್ಟೋರುಗಳಿಂದ ತನ್ನಿ "ಎಂದು ಬರೆದುಕೊಡುವ ಔಷಧ ಮಾತ್ರೆಗಳ ಚೀಟಿ.

ಇದನ್ನು ಅನ್ಯಾಯ, ವಂಚನೆ, ಜನದ್ರೋಹ, ಇತ್ಯಾದಿ ಪದಗಳನ್ನು ಬಳಸಿ ಬಣ್ಣಿಸಬೇಕಾ ಅಥವಾ ಬಿಜೆಪಿ ದರ್ಬಾರ್ ಎಂದರೆ ಅಷ್ಟೆ ಸಾಕಾ?

ಬಾಲಂಗೋಚಿ: ಬಿಜೆಪಿ ಸರ್ಕಾರಕ್ಕೆ ಬಡಿದುಕೊಂಡಿರುವ ಈ ಸಮಸ್ಯೆಗೆ ಏನು ಪರಿಹಾರ ? ಏನು ಔಷಧಿ ? ಬರೆದುಕೊಡುವವರು ಯಾರು ಅಂತ ಈಗ ಯೋಚಿಸಲೇ ಬೇಕಿದೆ. ಬಿಜೆಪಿ ಸರ್ಕಾರಕ್ಕೆ ಬಡಿದಿರುವುದು ಮಾರಕ ಕ್ಯಾನ್ಸರ್ ಖಾಯಿಲೆ. ಜನರೇ ಅದಕ್ಕೆ ಔಷಧಿ ಕೊಡಬೇಕು. [illegible] ಕೊಡಬಾರದು. ಜನ ತಾವೇ ಔಷಧಿ ಕೊಡಬೇಕು. [illegible]

ಅಲ್ಪಸಂಖ್ಯಾತರಲ್ಲಿ ಅಪನಂಬಿಕೆ, ಬ್ರಾಹ್ಮಣ್ಯಕ್ಕೆ ವಿಧೇಯತೆ

ಪುಟ 9 ರಿಂದ

ಜಾತಿಗಳ ಸ್ಪರ್ಧಿಗಳು ಹಾಗೂ ಸನಾತನವಾದಿಗಳು ಅವಕಾಶ ಪಡೆದುಕೊಂಡಿದ್ದಾರೆ. ಬ್ರಾಹ್ಮಣರ ಮಾರ್ಗದರ್ಶನವಿಲ್ಲದೆ ಯಾವ ಧಾರ್ಮಿಕ ಕೆಲಸಗಳೂ ನಡೆಯಲಾರವು ಎಂದು ನಿರೂಪಿಸಲಾಗಿದೆ. ಬ್ರಾಹ್ಮಣೇತರರ ಮದುವೆ, ಗೃಹಪ್ರವೇಶ, ಸಾವಿನ ಆಚರಣೆಗಳಲ್ಲಿ 50 ವರ್ಷಗಳ ಹಿಂದಿನವರೆಗೆ ಬ್ರಾಹ್ಮಣರಿಗೆ ಪ್ರವೇಶವೇ ಇರಲಿಲ್ಲ; ಅವರಿಗೆ ಅವರದೇ ಆದ ವಿಧಿಗಳಿದ್ದವು. ಆದರೆ ಈಗ ಬಹುತೇಕರ ಕೌಟುಂಬಿಕ ಆಚರಣೆಗಳಲ್ಲಿ ಬ್ರಾಹ್ಮಣರಿಲ್ಲದೆ ಇಲ್ಲ ಎಂಬಂತಾಗಿದೆ. ಬ್ರಾಹ್ಮಣೇತರರ (ಶೂದ್ರರ) ದೈವಸ್ಥಾನ, ನೇಮ, ಬೂತಕೋಲಗಳಲ್ಲಿ ಬ್ರಾಹ್ಮಣರಿಗೆ ಪಾತ್ರವಿರಲಿಲ್ಲ; ಬಹಳ ಅಪೂರ್ವವಾಗಿ ಉತ್ಸವ ದಿನ ನಿರ್ಣಯ ಮತ್ತು ಶುದ್ಧಿಗಳಿಗೆಂದು ಮಾತ್ರ ಬ್ರಾಹ್ಮಣರನ್ನು ಸಂಪರ್ಕಿಸಲಾಗುತ್ತಿತ್ತು. ಈಗಂತೂ ಶೂದ್ರರ ದೈವಸ್ಥಾನ ಮಾತ್ರವಲ್ಲ, ದೇವರುಗಳ ಸಾರ್ವಜನಿಕ ದೇವಾಲಯಗಳಲ್ಲೂ ಜ್ಯೋತಿಷಿಗಳಾದ ಬ್ರಾಹ್ಮಣರ ಆದೇಶದಂತೆ ಬ್ರಹ್ಮಕಲಶ, ಜೀರ್ಣೋದ್ಧಾರ, ಪುನ:ಪ್ರತಿಷ್ಠಾಪನೆ, ನಾಗಮಂಡಲ ಇತ್ಯಾದಿ ನಾನಾ ವಿಧದ–ಹಿಂದೆ ಅಪೂರ್ವವಾಗಿದ್ದ–ಉತ್ಸವಗಳು ಮೂಡಿ ಬರುತ್ತಿದೆ. ಮುಂಬಯಿಗೆ ಹೋಗಿ ಹೋಟೇಲು ಇಟ್ಟ ಉದ್ಯಮಿಗಳು ಹಾಗೂ ಪಾತಕ ಲೋಕದ ಕರಾವಳಿಯ ದುಷ್ಟರನ್ನು ಬಗ್ಗಿಸಿ ಅವರ ಹಣದಿಂದ ಇವನ್ನೆಲ್ಲಾ ಮಾಡಿಸಲಾಗುತ್ತಿದೆ. ಇದರ ಪ್ರಮುಖ ಫಲಾನುಭವಿಗಳು ಬ್ರಾಹ್ಮಣರು ಹಾಗೂ ಅವರಲ್ಲಿನ ಪುರೋಹಿತವರ್ಗ. ಇಲ್ಲಿ ಹೇಳಿದ ಉತ್ಸವಗಳಲ್ಲಿಯೂ ಕೆಲವೆಡೆ ದೇವಾಲಯದ ಜಾತ್ರೆಗಳಲ್ಲಿಯೂ ಅನ್ನಸಂತರ್ಪಣೆ ನಡೆಯುತ್ತದೆ. ಈ ಅನ್ನ ಸಂತರ್ಪಣೆಯಲ್ಲಿ ಬ್ರಾಹ್ಮಣರ ಪಂಕ್ತಿ ಬೇರೆ ಹಾಗೂ ಮೊದಲು; ಆ ಬಳಿಕ ಇತರರು. ಸಂಘ ಪರಿವಾರದ ವಿವಿಧ ಬಣಗಳ ಸ್ವಯಂಸೇವಕರು ಕಾವಿ ಬಟ್ಟೆಯುಟ್ಟು ಕಾವಿ ಶಾಲು ಹಾಕಿಕೊಂಡು ಈ ಉತ್ಸವಗಳಲ್ಲಿ ದುಡಿಯುತ್ತಾರೆ.

ಹಿಂದೂಗಳ ಯಾರ ಮನೆಯೆಂದು ನೋಡದೆ ಆ ಮನೆಗಳ ಮದುವೆ, ಸಾವು, ಗೃಹಪ್ರವೇಶಗಳಲ್ಲಿ ಸ್ವಯಂಸೇವಕರಾಗಿ ಕೆಲಸ ಮಾಡಿ ಆ ಮನೆಯವರ ವಿಶ್ವಾಸ ಗಳಿಸುತ್ತಾರೆ; ಆ ಮೂಲಕ ಸಂಘ ಪರಿವಾರವನ್ನು ಬಲಪಡಿಸುತ್ತಿದ್ದಾರೆ.

ಜಾತಿ ತಾರತಮ್ಯವನ್ನು ಸೂಚಿಸುವ ಕೆಲವು ಆಚರಣೆಗಳನ್ನು ಸಂಪ್ರದಾಯ ಎನ್ನುವ ಹೆಸರಲ್ಲಿ ಮುಂದುವರಿಸಲಾಗುತ್ತದೆ. ಈಗಾಗಲೇ ಹೇಳಿದ ಭೋಜನದಲ್ಲಿ ಪಂಕ್ತಿಭೇದ ಮುಖ್ಯವಾದುದು. ಸಂಪ್ರದಾಯವಾದೀ ಬ್ರಾಹ್ಮಣರು ಇವತ್ತಿಗೂ ಶೂದ್ರರನ್ನು ತಮ್ಮ ಮನೆಯ ಒಳ ಅಂಗಣಕ್ಕೆ ಆಹ್ವಾನಿಸುವುದಿಲ್ಲ. ಸಂಘಪರಿವಾರದ ನೇತೃತ್ವದಲ್ಲಿ ಸಹಪಂಕ್ತಿ ಭೋಜನವನ್ನು ಆಗೀಗ ಏರ್ಪಡಿಸುವರಾದರೂ, ಅಲ್ಲೆಲ್ಲೂ ಅಡುಗೆಯನ್ನು ಬ್ರಾಹ್ಮಣೇತರರು ಮಾಡುವುದಿಲ್ಲ; ಬ್ರಾಹ್ಮಣರೇ ಮಾಡುತ್ತಾರೆ. ಉಡುಪಿ, ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯದ ದೇವಾಲಯಗಳಲ್ಲಿ ಬ್ರಾಹ್ಮಣರಿಗೂ ಇತರರಿಗೂ ಊಟದಲ್ಲಿ ಪ್ರತ್ಯೇಕ ಪಂಕ್ತಿಗಳಿವೆ. ಕರಾವಳಿಯ ಹೆಚ್ಚಿನ ದೇವಾಲಯಗಳಲ್ಲಿ ಈ ಭೇದ ಇದೆ. ಕುಕ್ಕೆ ಸುಬ್ರಹ್ಮಣ್ಯದಲ್ಲಿ ಹಾಗೂ ಇತರೆಡೆ ಮಡೆಸ್ನಾನದಲ್ಲಿ ವರ್ಷವರ್ಷ ಹೆಚ್ಚು ಜನರು ಭಾಗವಹಿಸುವಂತೆ ಕ್ಷೇತ್ರ ಮಹಿಮೆಯನ್ನು ಮಾಧ್ಯಮಗಳಲ್ಲಿ ಪ್ರಸಾರಗೊಳಿಸಲಾಗುತ್ತಿದೆ. ನಾಗನ ಬಗ್ಗೆ ಹೆಚ್ಚಿನ ಭಯವನ್ನು ಕರಾವಳಿಯಾದ್ಯಂತ ಬಿತ್ತಲಾಗಿದೆ. ನಾಗಬನವನ್ನು ಕಡಿದು ಜ್ಯೋತಿಷಿಗಳ ಆಜ್ಞೆಯಂತೆ ನಾಗನ ಕಟ್ಟೆಗಳನ್ನು ನಿರ್ಮಿಸಲಾಗುತ್ತಿದೆ; ನಾಗಸಂಸ್ಕಾರ, ಆಶ್ಲೇಷಾಬಲಿ, ನಾಗಮಂಡಲಗಳನ್ನು ಮಾಡಿಸಲಾಗುತ್ತಿದೆ. 50 ವರ್ಷಗಳ ಹಿಂದೆ ಇವು ಕೇಳಿಯೇ ಇಲ್ಲದ ಆಚರಣೆಗಳು.

ಅತ್ಯಂತ ನಿಮ್ನ ಸ್ಥಾನದಲ್ಲಿರುವ ಕೊರಗರನ್ನು 'ಅಜಲು' ಪದ್ಧತಿ ಮೂಲಕ ಹೀನಾಯವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಎಂಜಲೆಲೆ ನೀಡುವುದು ಈಗ ನಿಂತಿದೆ. ಸಾವು, ಜಾತ್ರೆ, ಕಂಬಳಗಳಲ್ಲಿ ಡೋಲು ಬಾರಿಸುವುದು ತಮ್ಮ ಕರ್ತವ್ಯವೆಂದೂ ಇಂದೂ ಈ ಜನ ನಂಬಿ, ಅಜಲಿಗೆ ಕಾನೂನಿನ ನಿಷೇಧವಿದ್ದರೂ ಡೋಲು ಬಾರಿಸಲು ಹೋಗುತ್ತಾರೆ. ಉತ್ಸವದ ಇತರ ವಾದ್ಯಗಾರರದೊಂದಿಗೆ ಇವರಿಗೆ ಬಾರಿಸಲು ಅವಕಾಶವಿರುವುದಿಲ್ಲ. ಇತರ ಕೆಲವು ಕೆಳ ಜಾತಿಯವರಿಗೂ 'ಅಜಲು ' ಎನ್ನಬಹುದಾದ ವಿಧಿಗಳಿದ್ದವು. ಕ್ಷೌರಿಕ, ಮಡಿವಾಳ ಮೊದಲಾದ ಜಾತಿಗಳವರಿಗೆ ಇತರ ಜಾತಿಗಳ ಮದುವೆ ಸಾವುಗಳಲ್ಲಿ ಮಾಡಬೇಕಾದ ವಿಧಿಗಳು ಇದ್ದುವು. ದೇವಾಲಯದ ವಿಧಿಗಳಲ್ಲಿ ಕೆಲವು ನಿರ್ದಿಷ್ಟ ಕೆಲಸಗಳು ನಿರ್ದಿಷ್ಟ ಜಾತಿಗಳಿಗೆ ಇದ್ದುವು; ಸಂಪ್ರದಾಯದ ಹೆಸರಿನಲ್ಲಿ ಅವನ್ನು ಮುಂದುವರಿಸಲಾಗುತ್ತಿದೆ.

ದೈವಗಳ ನರ್ತನವನ್ನು ನಲ್ಕೆ, ಪರವ, ಪಂಬದ ಮೊದಲಾದ ಜಾತಿಗಳವರು ಜಾತಿ ಸಂಪ್ರದಾಯವೆಂದು ಮಾಡಬೇಕಾದ ಒತ್ತಡಕ್ಕೆ ಒಳಗಾಗಿದ್ದಾರೆ. ಇವರು ಮತ್ತು ಇತರ ದಲಿತ ಜಾತಿಯವರು ಅಸ್ಪೃಶ್ಯತೆಯನ್ನು ಅಷ್ಟಾಗಿ ಅನುಭವಿಸುತ್ತಿಲ್ಲವಾದರೂ, ಮೇಲ್ಜಾತಿಯವರು ತಮ್ಮನ್ನು ಕೀಳಾಗಿ ನೋಡುವುದರಿಂದ ಬಿಡುಗಡೆ ಹೊಂದಿಲ್ಲ. ಪೌರಕಾರ್ಮಿಕ ವೃತ್ತಿಯನ್ನು ಕೊರಗರು ಮತ್ತು ದಲಿತರು ಮಾತ್ರ ಮಾಡುತ್ತಿದ್ದಾರೆ.

ಮೇಲ್ಜಾತಿಗಳಿಂದ ಪ್ರೇರೇಪಿಸಲ್ಪಟ್ಟ ಹಿಂದೂತ್ವದ ಚಿಂತನೆಗಳು ದಲಿತರನ್ನು ಒಳಗೊಂಡು ಎಲ್ಲ ಜಾತಿಗಳವರನ್ನು ಆವರಿಸಿರುವುದು ಕರಾವಳಿಯಲ್ಲಿ ಇವತ್ತು ನಾವು ಕಾಣುವ ಪರಿಸ್ಥಿತಿ. ಇದರ ಸೂತ್ರಧಾರಿಗಳಾಗಿ ಕಾಣಿಸಿಕೊಂಡವರು ಕೊಂಕಣಿಗ ಮತ್ತು ಬ್ರಾಹ್ಮಣ ಜಾತಿಗಳಿಂದ ಬಂದಿರುತ್ತಾರೆ. ಬ್ರಾಹ್ಮಣ ಜಾತಿ ಶ್ರೇಷ್ಠತೆ ಒಂದು ಸರ್ವಸಮ್ಮತ ಚಿಂತನೆಯಾಗುವಂತೆ ಸಂಕಥನಗಳು ಸಾಗಿವೆ. ಹಿಂದೂತ್ವ ಚಿಂತನೆಯ ಬಹುಮುಖ್ಯ ನೇತಾರರಾದ ಪೇಜಾವರ ಸ್ವಾಮಿಗಳು ಮಾಧ್ವ (ಶಿವಳ್ಳಿ) ಬ್ರಾಹ್ಮಣ ಪರಂಪರೆಯವರು. ಉಡುಪಿಯನ್ನು ಅಧಿಪತ್ಯದ ಕೇಂದ್ರ ಸ್ಥಾನವಾಗಿಸುವ ಪ್ರಯತ್ನ ಶತಮಾನಗಳ ಹಿಂದಿನಿಂದಲೇ ಸಾಗಿ ಬಂದಿತ್ತು.' ಆ ಪರಂಪರೆಯಲ್ಲೇ ಪೇಜಾವರ ಶ್ರೀಗಳು ಹಿಂದೂತ್ವವನ್ನು ಇತರ ಮತಗಳ ಮೇಲೆ ಮೇಲ್ಮೈ ಮಾಡಿಸುವಲ್ಲಿ ಯಶಸ್ಸು ಪಡೆಯಿಸುವ ಪ್ರಯತ್ನದಲ್ಲಿದ್ದಾರೆ.

ಮಧ್ವಾಚಾರ್ಯರು ಉಡುಪಿಯನ್ನು ಕೇಂದ್ರವಾಗಿಟ್ಟು ದ್ವೈತ ಮತವನ್ನು ಪ್ರಾರಂಭಿಸಿದ್ದರೂ, ಸುಮಾರು 4 ಶತಮಾನಗಳ ಕಾಲ ಮಧ್ವ ಮತಕ್ಕೆ ಪ್ರಾಬಲ್ಯ ಒದಗಿರಲಿಲ್ಲ. ಮಧ್ವರೆನಿಸಿದ ಶಿವಳ್ಳಿ ಬ್ರಾಹ್ಮಣರು ಇತರ ಬ್ರಾಹ್ಮಣ ಮತಗಳ ಹಾಗೂ ಹಿಂದೂ ಜಾತಿಗಳ ಮೇಲೆ ಸ್ವಾಮ್ಯವನ್ನು ಸಾಧಿಸುವುದು 16ನೇ ಶತಮಾನದಲ್ಲಿ ವಾದಿರಾಜ ಯತಿಗಳು ಉಡುಪಿ ಅಷ್ಟಮಠದ ಸ್ವಾಮಿಗಳಲ್ಲೊಬ್ಬರಾಗಿ ಬಂದ ಅನಂತರವಷ್ಟೇ ಸಾಧ್ಯವಾಯಿತು.

ವಾದಿರಾಜರು ಕನಕದಾಸ, ಪುರಂದರದಾಸರ ಸಮಕಾಲೀನರಾಗಿದ್ದು, ದಾಸಪರಂಪರೆಯಲ್ಲಿ ಅವರು ಬರೆದ ಕೀರ್ತನೆಗಳೂ ಸಾಕಷ್ಟಿವೆ. ಅವರು ಉಡುಪಿಯ ಅಷ್ಟಮಠಗಳಲ್ಲೊಂದಾದ ಸೋದೆ ಮಠದ ಯತಿಗಳಾಗಿದ್ದು, ನೂರು ವರ್ಷಗಳಿಗೂ ಮೀರಿ ಬದುಕಿದ್ದರೆಂದು ತಿಳಿದು ಬರುತ್ತದೆ. (ಕ್ರಿ.ಶ.1480–1600)ರ ದೀರ್ಘಕಾಲ ಜೀವಿಸಿದ್ದ ಕಾರಣದಿಂದಲೂ ಯತಿಗಳೂ ಕವಿಗಳೂ ಆದ ಕಾರಣದಿಂದಲೂ ತುಳುವ ನಾಡು ಕರಾವಳಿ ಪ್ರದೇಶದಲ್ಲಿ ಪಾಳೆಯಗಾರಿ ಪಾಳೆಪಟ್ಟುಗಳು, ಭೂಮಾಲೀಕರು ಹಾಗೂ ಜಾತಿ ಮುಖಂಡರ ಮೇಲೆ ಪ್ರಭಾವ ಬೀರಬಲ್ಲವರಾಗಿದ್ದರು. ಹಿಂದೆ ಉಡುಪಿಯ 8 ಮಠಗಳಿಗೂ ಜಮೀನು ಇರಲಿಲ್ಲ. ಉಡುಪಿ ದೇವಸ್ಥಾನದಲ್ಲಿ ಪವಾಡವೆನ್ನಬಹುದಾದ ವಿದ್ಯಮಾನ ಹುಟ್ಟುಹಾಕಿ ಉಂಟುಮಾಡಿದ ಉಡುಪಿ ಕೃಷ್ಣನ ಮಹಿಮೆಯ ಬಲದಿಂದ ಎಲ್ಲ 8 ಮಠಗಳಿಗೂ ದ.ಕ.ಮತ್ತು ಉಡುಪಿ ಜಿಲ್ಲೆಗಳಲ್ಲಿ ಅಲ್ಲಿನ ಪಾಳೆಯಗಾರರ ಸಹಾಯದಿಂದ ಎಂಟು ಊರುಗಳಲ್ಲಿಯೂ ಸುತ್ತಲಿನ ಇತರ ಊರುಗಳಲ್ಲಿಯೂ

ಜಮೀನು ಉಂಬಳಿ ವಾದಿರಾಜರು ಕೊಡಿಸಿದರು. ಹೀಗಾಗಿಯೇ ಇವತ್ತು 8 ಮಠಗಳು 8 ಊರುಗಳ ಹೆಸರಿನಲ್ಲಿವೆ. ಪವಾಡ ಯಾವುದೆಂದರೆ ಉಡುಪಿಗೆ ಕನಕದಾಸರು ಭೇಟಿ ನೀಡಿದ ಸಂದರ್ಭದಲ್ಲಿ ದೇವಾಲಯದ ಕೃಷ್ಣನ ಮೂರ್ತಿಯನ್ನು ಪೂರ್ವದಿಂದ ಪಶ್ಚಿಮಕ್ಕೆ ತಿರುಗಿಸಿ ಗೋಡೆಗಳಲ್ಲಿ ಕಂಡಿಯೊಡೆದು, ಕನಕನ ಭಕ್ತಿಗೆ ಕೃಷ್ಣನೇ ತಿರುಗಿದನೆಂದು ಪ್ರಚಾರ ಮಾಡಿದ್ದು ಮತ್ತು ಆ ಮೂಲಕ ಉಡುಪಿ ದೇವಾಲಯಗಳ, ಮಠಾಧೀಶರ ಹಾಗೂ ಮಾಧ್ವ ಬ್ರಾಹ್ಮಣರ ಅಧಿಪತ್ಯವನ್ನು ಕರಾವಳಿಯ ದೇವಾಲಯಗಳು ಹಾಗೂ ಜನಸಮೂಹದ ಮೇಲೆ ಹೇರಿದ್ದು. ಕರಾವಳಿಯ ದೇವಾಲಯಗಳಲ್ಲಿ ಅರ್ಚಕರಾಗಿದ್ದ ಸ್ಥಾನಿಕ ಬ್ರಾಹ್ಮಣರನ್ನು ದೇವಾಲಯದ ಕೀಳು ಸೇವೆಗೆ ಹಚ್ಚಿ, ಮಾಧ್ವ ಬ್ರಾಹ್ಮಣರನ್ನು ಅರ್ಚಕರಾಗಿ ನೇಮಿಸಲಾಯಿತು. ವಿಶೇಷವೆಂದರೆ ಇಂದಿಗೂ ಈ ಮಾಧ್ವ ಅಥವಾ ಶಿವಳ್ಳಿ ಬ್ರಾಹ್ಮಣರು ಕರಾವಳಿಯ ವೈಷ್ಣವ ದೇವಾಲಯಗಳಲ್ಲಿ ಮಾತ್ರವಲ್ಲ, ಶೈವ, ದೇವೀ ಹಾಗೂ ಇತರ ದೇವರ ಗುಡಿಗಳಲ್ಲೂ (ಹೆಚ್ಚಿನವುಗಳಲ್ಲಿ) ಅರ್ಚಕರಾಗಿದ್ದಾರೆ. ಶಿವಳ್ಳಿ ಬ್ರಾಹ್ಮಣರ ಭೋಜನದಲ್ಲಿ ಸ್ಥಾನಿಕರು ಇತ್ತೀಚಿನವರೆಗೂ ಅಡ್ಡಪಂಕ್ತಿಯವರಾಗಿದ್ದರು. ಮಟ್ಟು ಪ್ರದೇಶದ ಮೊಗವೀರರನ್ನು ಬ್ರಾಹ್ಮಣರಾಗಿ ಪರಿವರ್ತಿಸಿದರು. (ಬಹುಶ: ಬ್ರಾಹ್ಮಣ ಸ್ತ್ರೀಯರ ಕೊರತೆಯಿಂದಲಾಗಿ ಮಟ್ಟುವಿನ ಮೊಗವೀರ ಮಹಿಳೆಯರನ್ನು ಬ್ರಾಹ್ಮಣ ಪುರುಷರು ಮದುವೆಯಾಗಿರಬೇಕು. ಮಟ್ಟು ಪ್ರದೇಶ ಮೂಲದ ಬ್ರಾಹ್ಮಣರನ್ನು ಬೇರೆ ಶಿವಳ್ಳಿಯವರು ಇವತ್ತೂ ತಮಾಷೆ ಮಾಡುವುದಿದೆ.) ಧರ್ಮಸ್ಥಳದ ಹೆಗ್ಗಡೆಗಳೊಂದಿಗೂ ಒಪ್ಪಂದ ಮಾಡಿಕೊಂಡು ಮಾಧ್ವ ಬ್ರಾಹ್ಮಣರನ್ನು ಮಂಜುನಾಥೇಶ್ವರ ದೇವಾಲಯದಲ್ಲಿ ಅರ್ಚಕರಾಗಿ ನೇಮಿಸಿದರು. ಎರಡು ತಿಂಗಳಿಗೊಮ್ಮೆ ಪರ್ಯಾಯವಾಗಿ ಉಡುಪಿ ಕೃಷ್ಣನಿಗೆ ಪೂಜೆ ಮಾಡುತ್ತಿದ್ದ ಪದ್ಧತಿಯನ್ನು ಬದಲಿಸಿ, ಎರಡು ವರ್ಷಗಳಿಗೊಮ್ಮೆ 'ಪರ್ಯಾಯ' ವ್ಯವಸ್ಥೆಗೊಳಿಸಿದರು. ಈ ಎರಡು ವರ್ಷಗಳಿಗೊಮ್ಮೆ ನಡೆಯುವ ಪೂಜಾಧಿಕಾರ ಹಸ್ತಾಂತರ ಸಮಾರಂಭಗಳು ಇವತ್ತು ಉಡುಪಿ ಪರ್ಯಾಯೋತ್ಸವವೆಂದು ಖ್ಯಾತಿ ಪಡೆದಿದೆ.

ವಾದಿರಾಜರ ಅನಂತರ ವಿಷ್ಣುವನ್ನೇ ಅತಿಶ್ರೇಷ್ಠ ದೇವರಾಗಿ ಮೂಡಿಸುವ ಕೆಲಸ ಮುಂದುವರಿದಿದೆ. ಯಕ್ಷಗಾನದಲ್ಲಿ ವಿಷ್ಣು–ಶಿವರ ಮಧ್ಯದ ಸಂಘರ್ಷಗಳ ಕಥೆಗಳು ಬಂದಿದ್ದು, ಅಲ್ಲೂ ವಿಷ್ಣುವೇ ಶ್ರೇಷ್ಠನೆಂದು ಸ್ಥಾಪಿಸಲಾಗಿದೆ. ಮತ್ತು ಬ್ರಾಹ್ಮಣೇತರ ಜನರ ಮಧ್ಯೆಯೂ ಯಕ್ಷಗಾನ ಆಟಗಳ ವೀಕ್ಷಣೆಯಿಂದ ಇಂತಹ ಶ್ರದ್ಧೆ ಉಳಿದಿದೆ. ಒಟ್ಟಿನಲ್ಲಿ ಶಿವಳ್ಳಿ ಬ್ರಾಹ್ಮಣರು ಕಳೆದ 5 ಶತಮಾನಗಳಿಂದ ಸಾಮಾಜಿಕವಾಗಿ ಮೇಲಿನ ಶ್ರೇಣಿಯಲ್ಲಿ ಸ್ಥಾಪಿತರಾಗಿದ್ದಾರೆ. ಉಡುಪಿ ಮಠಗಳ ಸ್ವಾಮಿಗಳಿಗೂ ಪ್ರಾಧಾನ್ಯ ಬಂದ ಕಾರಣ ಇದೇ ಆಗಿದೆ. ಈಗಿನ ಮಠಾಧೀಶರಲ್ಲಿ ಹಿರಿಯರೂ ರಾಜಕೀಯವಾಗಿ ಸಂಘಪರಿವಾರಕ್ಕೂ ಸೇರಿದ ಪೇಜಾವರ ಸ್ವಾಮಿಗಳ ಮಾತಿಗೆ ಹಿಂದೂತ್ವದ ಹಿಂಬಾಲಕರಲ್ಲಿ ಹೆಚ್ಚಿನ ಗೌರವವಿದ್ದು, ಅದನ್ನು ಅವರು ಯಶಸ್ವಿಯಾಗಿ ಬಳಸಿಕೊಂಡಿದ್ದಾರೆ.


ಪೇಜಾವರ ಮಠಾಧೀಶರ ನೇತೃತ್ವದಲ್ಲಿ ನಡೆಯುತ್ತಿರುವ ಹಿಂದೂತ್ವದ ಅಭಿಯಾನ– ಮುಸ್ಲಿಂ ಮತ್ತು ಕ್ರೈಸ್ತರನ್ನು ಕರಾವಳಿ ಜಿಲ್ಲೆಗಳಲ್ಲಿ

ಅಪ್ರಸ್ತುತಗೊಳಿಸುತ್ತಿರುವುದರಿಂದ ಜೊತೆಗೇನೇ, ಎಲ್ಲ ಹಿಂದೂ ಕೆಳಜಾತಿಗಳನ್ನೂ ಬ್ರಾಹ್ಮಣ್ಯಕ್ಕೆ ವಿಧೇಯಗೊಳಿಸುತ್ತಿರುವುದು – ಸಂವಿಧಾನದ ಆಶಯಗಳನ್ನೇ ಗೌಣಗೊಳಿಸುತ್ತಿರುವ ಸಂಗತಿಗಳಾಗಿವೆ ಎಂದು ಅರ್ಥೈಸಬಹುದು.

ಜನಶಕ್ತಿ
ಕನ್ನಡ ವಾರಪತ್ರಿಕೆ

ಮಕ್ಕಳಲ್ಲಿ ಅಪೌಷ್ಟಿಕತೆ: ಯುಪಿಎ-2 ಸರಕಾರಕ್ಕೆ ನಾಚಿಕೆಯಾಗಿಲ್ಲವೇ?

ಭಾರತದಲ್ಲಿ ಮಕ್ಕಳಲ್ಲಿನ ಅಪೌಷ್ಟಿಕತೆಯ ಪ್ರಮಾಣ ಒಂದು ರಾಷ್ಟ್ರೀಯ ಅವಮಾನ ಎಂದು ಪ್ರಧಾನ ಮಂತ್ರಿಗಳು ಕಳೆದ ವಾರ ಭಾರೀ ಆತಂಕ ವ್ಯಕ್ತಪಡಿಸಿದ್ದರು. ಅದರೆ ಇದಕ್ಕಿಂತ ಹೆಚ್ಚಾಗಿ ಇದು, ಸದಾ ಜಿಡಿಪಿ ಬೆಳವಣಿಗೆಯ ಬಗ್ಗೆ ಕೊಚ್ಚಿಕೊಳ್ಳುವ ಅವರ ನೇತೃತ್ವದ ಯುಪಿಎ-2 ಸರಕಾರ ನಾಚಿಕೆಪಟ್ಟುಕೊಳ್ಳಬೇಕಾದ ಸಂಗತಿಯಲ್ಲವೇ ಎಂದು ಅಖಿಲ ಭಾರತ ಅಂಗನವಾಡಿ ಕಾರ್ಯಕರ್ತೆಯರ ಸಂಘಟನೆಯ ಮುಖಂಡರು ಪ್ರಶ್ನಿಸಿದ್ದಾರೆ. ಭಾರತದ ಮಕ್ಕಳಲ್ಲಿ ಇಷ್ಟೊಂದು ಅಪೌಷ್ಟಿಕತೆ ಇದೆ ಎಂಬುದು ಒಂದು ಕಾರ್ಪೊರೇಟ್ ಎನ್‌ಜಿಒ ದ ವರದಿ ನೋಡಿದ ಮೇಲೆಯೇ ಪ್ರಧಾನ ಮಂತ್ರಿಗಳ ಗಮನಕ್ಕೆ ಬಂತೇನು- ಎಂದು ಅವರು ಖಾರವಾಗಿ ಪ್ರಶ್ನಿಸಿದ್ದಾರೆ.



ಮಕ್ಕಳಲ್ಲಿ ಎಷ್ಟೊಂದು ಅಪೌಷ್ಟಿಕತೆ ಇದೆ ಎಂಬುದನ್ನು ಸರಕಾರದ ಹಲವು ಅಧಿಕೃತ ವರದಿಗಳು ಸೇರಿದಂತೆ ಹಲವಾರು ವರದಿಗಳು ಹಲವು ಬಾರಿ ದೇಶದ ಗಮನಕ್ಕೆ ತಂದಿವೆ. ಆದರೆ ಆಗೆಲ್ಲ ಕೇವಲ ಜಿಡಿಪಿ ಬೆಳವಣಿಗೆಯ ಬಗ್ಗೆ ಹೆಮ್ಮೆ ಪಟ್ಟುಕೊಳ್ಳುತ್ತಿದ್ದ ಪ್ರಧಾನ ಮಂತ್ರಿಗಳು ಮತ್ತು ಅವರ ಇತರ ಸಹಯೋಗಿಗಳಿಗೆ ಈಗ ಇದ್ದಕ್ಕಿದ್ದಂತೆ ಯಾವುದೋ ಒಂದು ಕಾರ್ಪೊರೇಟ್ ಎನ್‌ಜಿಒದ ವರದಿ ನೋಡಿ ಜ್ಞಾನೋದಯವಾಗಿದೆ ಎಂದು ನಾವು ನಂಬಬೇಕೆ? ಅಥವ ಇದರ ಹಿಂದೆಯೂ ಒಂದು ವ್ಯವಸ್ಥಿತ ನವ-ಉದಾರವಾದಿ ದುರುದ್ದೇಶ ಇದೆಯೇ ಎಂಬ ಸಂದೇಹ ಪ್ರಜಾಪ್ರಭುತ್ವವಾದಿಗಳನ್ನು ಕಾಡುತ್ತಿದೆ.

1975ರಲ್ಲಿ ಮಕ್ಕಳು ಮತ್ತು ತಾಯಂದಿರ ಅಪೌಷ್ಟಿಕತೆಯ ಸಮಸ್ಯೆಯನ್ನು ಎದುರಿಸಲು ಪ್ರಯೋಗಾತ್ಮಕವಾಗಿ 'ಸಮಗ್ರೀಕೃತ ಮಕ್ಕಳ ಅಭಿವೃದ್ಧಿ ಯೋಜನೆ'(ಐಸಿಡಿಎಸ್)ಯನ್ನು ಜಾರಿಗೆ ತರಲಾಯಿತು. ಇದು ಈ ಸಮಸ್ಯೆಯನ್ನು ಎದುರಿಸುವಲ್ಲಿ ಸಾಕಷ್ಟು ಪರಿಣಾಮಕಾರಿ ಎಂದು ಕಂಡು ಬಂದರೂ 25 ವರ್ಷಗಳ ನಂತರ, ಇದನ್ನು ಸಾರ್ವತ್ರೀಕರಿಸಬೇಕು, ಆರು ವರ್ಷಗಳ ಕೆಳಗಿನ ಎಲ್ಲ ಮಕ್ಕಳು ಹಾಗೂ ಗರ್ಭಿಣಿ ಮತ್ತು ಹಾಲುಣ್ಣಿಸುವ ಮಹಿಳೆಯರನ್ನೆಲ್ಲ ಇದು ಒಳಗೊಳ್ಳಬೇಕು ಎಂದು ನವಂಬರ್ 2001ರಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯ ಮಧ್ಯಪ್ರವೇಶಿಸಿ ನಿರ್ದೇಶನ ನೀಡಬೇಕಾಗಿ ಬಂತು. ಏಕೆಂದರೆ ಅದುವರೆಗೂ ಭಾರತ ಸರಕಾರ ಏನೂ ಮಾಡಲಿಲ್ಲ. ಆನಂತರವೂ ಏನೂ ಮಾಡದಿದ್ದಾಗ 2004ರಲ್ಲಿ ಸುಪ್ರಿಂ ಕೋರ್ಟ್ ಮತ್ತೆ ಮಧ್ಯಪ್ರವೇಶಿಸಿ ಐಸಿಡಿಎಸ್‌ನ ಅಡಿಯಲ್ಲಿ 14 ಲಕ್ಷ ಅಂಗನವಾಡಿ ಕೇಂದ್ರಗಳನ್ನು ತೆರೆಯಬೇಕು ಎಂದು ಆದೇಶಿಸಬೇಕಾಗಿ ಬಂತು.

ಆದರೆ ಈಗಲೂ ಆರು ವರ್ಷ ಕೆಳಗಿನ ದೇಶದ 16 ಕೋಟಿ ಮಕ್ಕಳಲ್ಲಿ ಅರ್ಧದಷ್ಟು ಕೂಡ ಈ ಯೋಜನೆಯ ಅಡಿಗೆ ಬಂದಿಲ್ಲ. 2004ರಲ್ಲಿ ಸುಪ್ರಿಂಕೋರ್ಟ್ ಆದೇಶದ ನಂತರ ಅಂಗನವಾಡಿ ಕೇಂದ್ರಗಳನ್ನು ತೆರೆಯಲು ಮಂಜೂರಾತಿ ನೀಡಿದ್ದರೂ ಸುಮಾರು ಒಂದು ಲಕ್ಷಕ್ಕೂ ಹೆಚ್ಚು ಕೇಂದ್ರಗಳು ಇನ್ನೂ ಕಾಗದದ ಮೇಲೆಯೇ ಇವೆ. ಸುಮಾರು ಇಷ್ಟು ಸಂಖ್ಯೆಯ ಕೇಂದ್ರಗಳು ತೆರೆದಿದ್ದರೂ ಯಾವುದೇ ಸೌಕರ್ಯಗಳಿಲ್ಲದೆ ಕೆಲಸ ಮಾಡಲಾರದ ಸ್ಥಿತಿಯಲ್ಲಿವೆ. ಯುಪಿಎ-2 ಸರಕಾರ ಸಾರ್ವಜನಿಕ ಆರೋಗ್ಯದ ಮೇಲೆ ಮಾಡುತ್ತಿರುವ ಖರ್ಚು ನಮ್ಮ ಜಿಡಿಪಿಯ 1 ಶೇ.ಕ್ಕಿಂತಲೂ ಕಡಿಮೆ, ದೇಶದ ಭವಿಷ್ಯ ಎನ್ನುವ ಮಕ್ಕಳ ಅಭಿವೃದ್ಧಿಗೆ ಮಾಡುತ್ತಿರುವ ಖರ್ಚು ಇನ್ನೂ ಕಡಿಮೆ. ಈ ಎಲ್ಲ ಅಂಶಗಳ ಬಗ್ಗೆ ಪ್ರಧಾನ ಮಂತ್ರಿಗಳಿಗಾಗಲೀ ಅವರ ಯುಪಿಎ-2 ಸರಕಾರಕ್ಕಾಗಲೀ ಏನೂ ಆತಂಕ ಅಥವ ನಾಚಿಕೆ ಇನ್ನೂ ಇದ್ದಂತಿಲ್ಲ. ಬದಲಾಗಿ, ಹಲವು ರಾಷ್ಟ್ರೀಯ, ಅಂತರ್ರಾಷ್ಟ್ರೀಯ ಅಧ್ಯಯನಗಳು ಅಪೌಷ್ಟಿಕತೆಯ ಸಮಸ್ಯೆಯನ್ನು ಎದುರಿಸುವಲ್ಲಿ ಇದೊಂದು ಪರಿಣಾಮಕಾರಿ ಯೋಜನೆ ಎಂದು ಹೇಳಿದ್ದರೂ ಅದನ್ನು ಪೂರ್ಣವಾಗಿ ಜಾರಿಗೆ ತರದ, ಅದರ ಪೂರ್ಣ ಸಾಧ್ಯತೆಗಳನ್ನು ಬಳಸಿಕೊಳ್ಳದ ಸರಕಾರದ ಪ್ರಧಾನ ಮಂತ್ರಿಗಳು "ಇನ್ನು ಮುಂದೆ ಅಪೌಷ್ಟಿಕತೆಯ ಪ್ರಶ್ನೆಯನ್ನು ಎದುರಿಸಲು ನಾವು ಕೇವಲ ಐಸಿಡಿಎಸ್ ನ್ನು ಅವಲಂಬಿಸಿರಲು ಸಾಧ್ಯವಿಲ್ಲ" ಎಂದು ಹೇಳಿರುವುದು ಅಪೌಷ್ಟಿಕತೆಯ ಬಗ್ಗೆ ಅವರು ಪ್ರದರ್ಶಿಸಿರುವ ಕಾಳಜಿಯ ಹಿಂದಿರುವ ನಿಜ ಉದ್ದೇಶವನ್ನು ಬಯಲು ಮಾಡಿದೆ ಎಂದು ಅಂಗನವಾಡಿ ಕಾರ್ಯಕರ್ತೆಯರ ಸಂಘಟನೆಯ ಮುಖಂಡರು ಹೇಳಿದ್ದಾರೆ.

ಪ್ರಭುತ್ವ ಅಥವ ಸರಕಾರ ತನ್ನ ಜವಾಬ್ದಾರಿಗಳನ್ನು ಖಾಸಗಿಯವರಿಗೆ ವಹಿಸಿ ಹಿಂದೆ ಸರಿಯುವುದು ನವ-ಉದಾರವಾದಿ ತತ್ವದ ಹೂರಣ. ಅಂತೆಯೇ, ಸಮುದಾಯವನ್ನು ತೊಡಗಿಸುವ ಹೆಸರಿನಲ್ಲಿ ಅಂಗನವಾಡಿಗಳನ್ನು ಕ್ರಮೇಣ ಖಾಸಗೀಕರಿಸುವ ದಿಕ್ಕಿನಲ್ಲಿ ಸಾಗಿರುವ ಸರಕಾರ, ಇದರಿಂದ ಅಪೌಷ್ಟಿಕತೆಯ ಪ್ರಶ್ನೆಯನ್ನು ಎದುರಿಸುವಲ್ಲಿ ಯಾವುದೇ ಪ್ರಯೋಜನವಾಗಿಲ್ಲ ಎಂದು ಕಂಡು ಬಂದರೂ ಅದೇ ದಿಕ್ಕಿನಲ್ಲಿ ಐಸಿಡಿಎಸ್ ನ್ನು 'ಪುನರ್ರಚಿಸುವ' ಮಾತಾಡುತ್ತಿದೆ. ಈಗ ಪ್ರಧಾನ ಮಂತ್ರಿಗಳಿಗೆ ಜ್ಞಾನೋದಯವನ್ನು ತಂದ ಎನ್‌ಜಿಒ ಕೂಡ ಇದುವರೆಗಿನ ಖಾಸಗೀಕರಣದ ಪ್ರಯೋಜನ ಪಡೆದ ಒಂದು ಸಂಸ್ಥೆ ಎಂಬುದು ಗಮನಾರ್ಹ. ಅಪೌಷ್ಟಿಕತೆಗೆ ಕಾರಣ ಹಸಿವು, ಬಡತನವಲ್ಲ, ಆಹಾರ ಮತ್ತು ಉಣಿಸುವ ಅಭ್ಯಾಸಗಳು ಕಾರಣ ಎಂದು ಈ ಎನ್‌ಜಿಒ ತನ್ನ ವರದಿಯಲ್ಲಿ ಅಭಿಪ್ರಾಯ ಪಟ್ಟಿದೆ ಎಂಬುದು ಕೂಡ ಗಮನಾರ್ಹ.

★

ಉದ್ಯೋಗಾವಕಾಶ ನಿರ್ಮಿಸದ ಜಿಡಿಪಿ ಹೆಚ್ಚಳದಿಂದೇನು?

ಇದು ದೇಶದ ಕಾರ್ಮಿಕ ಸಂಘಗಳು ಯುಪಿಎ-2 ಸರಕಾರಕ್ಕೆ ಹಾಕಿರುವ ಪ್ರಶ್ನೆ. ಎಂದಿನಂತೆ ಬಜೆಟ್ ಪೂರ್ವ ಸಮಾಲೋಚನೆಗಳಿಗೆಂದು ಕೇಂದ್ರೀಯ ಕಾರ್ಮಿಕ ಸಂಘಟನೆಗಳನ್ನು ಯುಪಿಎ-2 ಸರಕಾರ ಈ ವಾರ ಆಹ್ವಾನಿಸಿತ್ತು. ಸಮಾಲೋಚನೆಯ ಆಹ್ವಾನದೊಂದಿಗೆ ಸರಕಾರ ಕಳಿಸಿದ 'ಭಾರತೀಯ ಆರ್ಥಿಕದ ಸ್ಥಿತಿ-ಗತಿ' ಎಂಬ ಟಿಪ್ಪಣಿಯಲ್ಲಿ 2005ರಿಂದ ಜಿಡಿಪಿ ಬೆಳವಣಿಗೆಯ ಬಗ್ಗೆ ಎರಡೂವರೆ ಪುಟಗಳ ನಿರೂಪಣೆಯಿದೆ, ಆದರೆ ಇದರಲ್ಲಿ ಎಲ್ಲಿಯೂ ಈ ಅವಧಿಯಲ್ಲಿ ಎಷ್ಟು ಉದ್ಯೋಗಾವಕಾಶಗಳ ನಿರ್ಮಾಣವಾಯಿತು ಎಂಬ ಬಗ್ಗೆ ಚಕಾರವಿಲ್ಲ.

ಈ ಅಂಶವನ್ನು ಒಂದು ಉದಾಹರಣೆಯಾಗಿ ಸರಕಾರದ ಗಮನಕ್ಕೆ ತಂದಿರುವ ಕೇಂದ್ರ ಕಾರ್ಮಿಕ ಸಂಘಟನೆಗಳು, ಉಲ್ಬಣಗೊಳ್ಳುತ್ತಿರುವ ಕೃಷಿ ಸಂಕಟ, ತೀವ್ರ ಬೆಲೆಯೇರಿಕೆಗಳಿಂದಾಗಿ ಅಸಹನೀಯ ಹಣದುಬ್ಬರ, ಉದ್ಯೋಗ ನಷ್ಟ, ಹೆಚ್ಚುತ್ತಿರುವ ನಿರುದ್ಯೋಗ ಈ ಎಲ್ಲ ಪ್ರಶ್ನೆಗಳನ್ನು ಪರಿಶೀಲಿಸುವ ಅಗತ್ಯವಿರುವಾಗ ಈ ಟಿಪ್ಪಣಿ ಅವನ್ನೆಲ್ಲ ಕೇವಲವಾಗಿ ಕಂಡಿದೆ ಎಂದು ಆಕ್ಷೇಪಣೆ ವ್ಯಕ್ತಪಡಿಸಿದವು. ಆರ್ಥಿಕ ಬೆಳವಣಿಗೆಯಿಂದ ಜನತೆಗೆ ಏನು ದಕ್ಕಿದೆ ಎಂಬುದನ್ನು ತಿಳಿಯಬೇಕಾದರೆ, ಮೂರು ತಿಂಗಳಿಗೊಮ್ಮೆ ಜಿಡಿಪಿ ಬೆಳವಣಿಗೆಯ ಅಂದಾಜು ಅಂಕಿ-ಅಂಶಗಳನ್ನು ಬಿಡುಗಡೆ ಮಾಡುವಾಗ, ಜತೆಗೇ ಉದ್ಯೋಗಾವಕಾಶಗಳ ಅಂಕಿ-ಅಂಶಗಳನ್ನೂ ಬಿಡುಗಡೆ ಮಾಡಬೇಕು. ಆಗ ಆರ್ಥಿಕ ಬೆಳವಣಿಗೆಯ ಫಲಗಳನ್ನು ಹೇಗೆ ಮಾಲಕರು/ಹೂಡಿಕೆದಾರರು ದಕ್ಕಿಸಿಕೊಳ್ಳುತ್ತಿದ್ದಾರೆ, ಜನಸಾಮಾನ್ಯರಿಗೆ ಏನೂ ದಕ್ಕದಂತೆ ಮಾಡುತ್ತಿದ್ದಾರೆ ಎಂಬುದು ಕಾಣ ಬರುತ್ತದೆ ಎಂದು ಅವು ಅಭಿಪ್ರಾಯ ಪಟ್ಟಿವೆ. ಇನ್ನು ಮುಂದಾದರೂ ಆರ್ಥಿಕದ ವಾಸ್ತವಿಕ ಸ್ಥಿತಿ-ಗತಿಯನ್ನು ತಿಳಿಯಲು ಅನುಕೂಲವಾಗುವಂತೆ ಉದ್ಯೋಗದ ಬೆಳವಣಿಗೆ ಮತ್ತು ಜಿಡಿಪಿ ಬೆಳವಣಿಗೆಯ ನಡುವಿನ ವಾಸ್ತವಿಕ ಕೊಂಡಿಯನ್ನು ಸಾರ್ವಜನಿಕ ಅರಿವಿಗೆ ತರುವಂತಹ ವ್ಯವಸ್ಥೆಯನ್ನು ರೂಪಿಸಬೇಕು ಎಂದು ಕೇಂದ್ರ ಕಾರ್ಮಿಕ ಸಂಘಟನೆಗಳು ಸರಕಾರವನ್ನು ಆಗ್ರಹಿಸಿವೆ.



ವೇದರಾಜ ಎನ್.ಕೆ.

ಮುಂಬರುವ ಬಜೆಟ್ ಜನೋನ್ಮುಖವಾಗಬೇಕು, ಬಡತನ, ನಿರುದ್ಯೋಗ ಮತ್ತು ಸಾಮಾಜಿಕ ಮೂಲ ರಚನೆಯ ಪ್ರಶ್ನೆಗಳನ್ನು ಎತ್ತಿಕೊಳ್ಳಬೇಕು ಎಂದಿರುವ ಕೇಂದ್ರ ಕಾರ್ಮಿಕ ಸಂಘಟನೆಗಳು ಈ ದಿಕ್ಕಿನಲ್ಲಿ ನಿರ್ದಿಷ್ಟ ಪ್ರಸ್ತಾವಗಳನ್ನು ಸರಕಾರದ ಮುಂದಿಟ್ಟಿವೆ, ಅವಕ್ಕೆ ಸಂಪನ್ಮೂಲಗಳ ಮೂಲಗಳು ಯಾವವಿವೆ ಎಂಬ ಬಗ್ಗೆಯೂ ಅವು ಸರಕಾರಕ್ಕೆ ಪ್ರಸ್ತಾವಗಳನ್ನು ಕೊಟ್ಟಿವೆ. ಈ ದಿಕ್ಕಿನಲ್ಲಿ ಸರಕಾರದ ಗೋಸುಂಬೆತನ ಹೆಚ್ಚೆಚ್ಚು ಸ್ಪಷ್ಟವಾಗಿ ಬಯಲಿಗೆ ಬರುತ್ತಿರುವಾಗ ಈ ಪ್ರಸ್ತಾವಗಳನ್ನು ಸರಕಾರ ಗಂಭೀರವಾಗಿ ಪರಿಶೀಲಿಸುತ್ತದೆ ಎಂಬ ಆಶಯವನ್ನು ಈ ಬಾರಿಯೂ ಇಟ್ಟುಕೊಳ್ಳುವಂತಿಲ್ಲ.

★

ಪರಮಾಣು ಸುರಕ್ಷಿತತೆಗೆ ಹಲ್ಲಿಲ್ಲದ ಪ್ರಾಧಿಕಾರ

ಈಗ ಸಂಸತ್ತಿನ ವಿಜ್ಞಾನ ಮತ್ತು ತಂತ್ರಜ್ಞಾನ ಸ್ಥಾಯೀ ಸಮಿತಿಯ ಮುಂದಿರುವ ಪರಮಾಣು ನಿಯಂತ್ರಣ ಪ್ರಾಧಿಕಾರ ಮಸೂದೆಯ ಉದ್ದೇಶ ಒಂದು ಸ್ವತಂತ್ರ ಪರಮಾಣು ನಿಯಂತ್ರಣ ಪ್ರಾಧಿಕಾರವನ್ನು ಕೊಡುವುದಲ್ಲ, ಬದಲಾಗಿ, ಹಲ್ಲಿಲ್ಲದ, ಯಾವ ಪ್ರಯೋಜನಕ್ಕೂ ಬಾರದ ಒಂದು ಸಂಸ್ಥೆಯನ್ನು ಎಂದು ಪರಮಾಣು ತಜ್ಞರು ಅಭಿಪ್ರಾಯ ಪಡುತ್ತಿದ್ದಾರೆ. ಯಾವುದೇ

ಪುಟ 15 ಕ್ಕೆ

ಜಗದಗಲ

ಶರತ್‌ಚಂದ್ರ

ಕೊರಿಯನ್ನರಿಗೆ ಪ್ರಿಯ ಸಾಮ್ರಾಜ್ಯಶಾಹಿಗಳಿಗೆ ಅಪ್ರಿಯ ದ್ವಿತೀಯ ಕಿಮ್ ಇಲ್-ಸುಂಗ್

ಉತ್ತರ ಕೊರಿಯಾದ ನಾಯಕ ದ್ವಿತೀಯ ಕಿಮ್-ಇಲ್-ಸುಂಗ್ ಡಿಸೆಂಬರ್ ಕೊನೆಯಲ್ಲಿ ನಿಧನರಾದಾಗ ಉತ್ತರ ಕೊರಿಯಾದ ಸುಭದ್ರತೆ ಮತ್ತು ಉತ್ತರ-ಪೂರ್ವ ಏಶ್ಯಾದ ಬಗ್ಗೆ ಆತಂಕ ಹರಡಿತ್ತು. ಅಥವಾ ಪಾಶ್ಚಿಮಾತ್ಯ ಮಾಧ್ಯಮಗಳು ಮತ್ತು ಸರ್ಕಾರಗಳಿಂದ ಆತಂಕ ಹರಡಲಾಗಿತ್ತು ಎಂದರೆ ಹೆಚ್ಚು ಸರಿಯಾದೀತು. ಜಪಾನ್ ಮತ್ತು ಅಮೆರಿಕದ ದೊಡ್ಡಣ್ಣನ ಆಣತಿಯಂತೆ ದಕ್ಷಿಣ ಕೊರಿಯಾದ ಸೈನ್ಯ ಸಪುರ ಸನ್ನದ್ಧವಾಗಿರಲು ನಿರ್ದೇಶನ ಕೊಡಲಾಗಿತ್ತಂತೆ. ಉತ್ತರ ಕೊರಿಯಾದಲ್ಲಿ ಶಾಂತಿಯುತವಾಗಿ ಹೊಸ ನಾಯಕತ್ವವನ್ನು ಆರಿಸಲಾಗಿ ದೇಶದ ಸುಭದ್ರತೆಯ ಬಗ್ಗೆ ಆತಂಕ ನಿವಾರಣೆ ಆಯಿತು. ದಕ್ಷಿಣ ಕೊರಿಯಾ ಮತ್ತು ಜಪಾನುಗಳ ಆತಂಕಕ್ಕಂತೂ ಯಾವುದೇ ಬುನಾದಿಯೇ ಇರಲಿಲ್ಲ.

15 ವರ್ಷಗಳಿಗಿಂತಲೂ ಹೆಚ್ಚು ಕಾಲ ಅತ್ಯಂತ ಕಷ್ಟದ ಸನ್ನಿವೇಶದಲ್ಲಿ ದೇಶದ ನಾಯಕತ್ವ ವಹಿಸಿದ ದ್ವಿತೀಯ ಕಿಮ್ ರನ್ನು 'ತಲೆತಿರುಕ ಮಿಲಿಟರಿ ಸರ್ವಾಧಿಕಾರಿ' ಎಂಬಂತೆ ಪಾಶ್ಚಿಮಾತ್ಯ ಮಾಧ್ಯಮಗಳು ಚಿತ್ರಿಸಿದ್ದವು. ಆದರೆ ದ್ವಿತೀಯ ಕಿಮ್ ಮರಣದ ನಂತರ ಹತ್ತು ಲಕ್ಷಕ್ಕೂ ಹೆಚ್ಚು ಕೊರಿಯನ್ನರು ಸಂತಾಪ ಸೂಚನೆಯಲ್ಲಿ ಭಾಗವಹಿಸಿದರು ಎಂಬುದೇ ಅವರು ಜನಪ್ರಿಯ ನಾಯಕರಾಗಿದ್ದರೆಂದು ತೋರಿಸುತ್ತದೆ. ತಂದೆ ಪ್ರಥಮ ಕಿಮ್-ಇಲ್-ಸುಂಗ್ ಕೊರಿಯಾದ 'ಆಜೀವ ಅಧ್ಯಕ್ಷ'ರೆಂದು ಹಿಂದೆನೇ ಘೋಷಿಸಲಾಗಿದ್ದರಿಂದ , ಅವರು ಅಧ್ಯಕ್ಷ ಪದವಿಯನ್ನು ಎಂದೂ ಸ್ವೀಕರಿಸಲಿಲ್ಲ. ಮಿಲಿಟರಿ ಮತ್ತು ಸರ್ಕಾರದ ಮುಖ್ಯಸ್ಥರಾಗಿದ್ದರು ಅಷ್ಟೇ.

ಅಮೆರಿಕ 1950 ರ ದಶಕದಿಂದಲೂ 'ತಾಂತ್ರಿಕವಾಗಿ' ಉತ್ತರ ಕೊರಿಯಾದ ಜತೆ ಯುದ್ಧದ ಸ್ಥಿತಿಯಲ್ಲಿ ಇದ್ದುದರಿಂದ , ಬಾಹ್ಯ ಶಕ್ತಿಗಳಿಂದ ಮಿಲಿಟರಿ ಭದ್ರತೆ ಅದಕ್ಕೆ ಯಾವಾಗಲೂ ಆದ್ಯತೆಯ ಪ್ರಶ್ನೆಯಾಗಿತ್ತು. ಶೀತ ಲಸಮರದಿಂದ ಕೊರಿಯಾ ತೀವ್ರವಾಗಿ ಬಾಧಿತವಾಗಿತ್ತು. ಅಲ್ಲದೆ ಸೋವಿಯೆಟ್ ಒಕ್ಕೂಟ ಮತ್ತು ಚೀನಾಗಳಿಂದಲೂ ಸ್ವತಂತ್ರವಾಗಿದ್ದು 'ತನ್ನ



ಕಾಲ ಮೇಲೆ ನಿಲ್ಲುವ' ನೀತಿ ಹೊಂದಿದ್ದರಿಂದಲೂ ಮಿಲಿಟರಿ ಭದ್ರತೆ ಆದ್ಯತೆಯದಾಗಿತ್ತು. ಆರ್ಥಿಕವಾಗಿ ಸಮಾಜವಾದಿ ಬಣದಿಂದ ಮೊದಲ ದಶಕಗಳಲ್ಲಿ ಸುಭದ್ರವಾಗಿದ್ದರೂ, 1991 ರಲ್ಲಿ ಸಮಾಜವಾದಿ ಜಗತ್ತಿನ ವಿಘಟನೆಯಿಂದ ತೀವ್ರ ಸಂಕಷ್ಟಕ್ಕೆ ಒಳಗಾಗಿತ್ತು.

1992 ರಲ್ಲಿ ಮೊದಲ ಬಾರಿ ಅಮೆರಿಕದ ಅಧ್ಯಕ್ಷ ಕಾರ್ಟರ್ ಭೇಟಿ ನೀಡಿ, ಅಣು ಶಕ್ತಿಯನ್ನು ಶಾಂತಿಯುತ ಉದ್ದೇಶಗಳಿಗೆ ಮಾತ್ರ ಬಳಸುವ, ಮತ್ತು ಇದಕ್ಕೆ ಬದಲಾಗಿ ಅಮೆರಿಕ ಅಣು ಶಕ್ತಿ ಬೆಳವಣಿಗೆಗೆ ತಾಂತ್ರಿಕ ನೆರವು ನೀಡುವ, ರಾಯಭಾರ-ಮಿಲಿಟರಿ ದಿಗ್ಬಂಧನ ತೆಗೆದು ಹಾಕಿ ತೈಲ ಮುಂತಾದ ಇಂಧನಗಳನ್ನು ಪೂರೈಸುವ ಒಪ್ಪಂದಕ್ಕೆ ಆಗ ತಾನೆ ಸಹಿ ಹಾಕಿತ್ತು. ಆದರೆ ಇದನ್ನು ಜಾರಿ ಮಾಡುವ ಬದಲು ಅಧ್ಯಕ್ಷ ಬುಶ್ ಮೀನ ಮೇಷ ಎಣಿಸುತ್ತಾ ಕೊನೆಗೆ ಇರಾಕ್, ಇರಾನ್ ಜತೆ 'ದುಷ್ಟ ಸಾಮ್ರಾಜ್ಯದ' ಭಾಗ ಎಂದು ಜರೆಯಿತು. ಬುಶ್ 'ದುಷ್ಟ ಸಾಮ್ರಾಜ್ಯದ' ದಾಳಿ ತೀವ್ರಗೊಳಿಸಿದಾಗ ಉ.ಕೊರಿಯಾ ಅಣ್ವಸ್ತ್ರ ಪ್ರಸರಣ ನಿಷೇಧ ಒಪ್ಪಂದದಿಂದ ಹೊರ ಬರುವ ಮೂಲಕ ಇದಕ್ಕೆ ಪ್ರತಿಭಟಿಸಿತು. ಆಗ ಅಮೆರಿಕವನ್ನು ಈ ಒಪ್ಪಂದದ ಜಾರಿಗೆ ಒತ್ತಡ ಹೇರಲು ಮತ್ತು ಬಾಹ್ಯ ಭದ್ರತೆ ಸ್ಥಾಪಿಸಲು ಕೊರಿಯಾ ಅಣು ಅಸ್ತ್ರಗಳ ಬೆಳವಣಿಗೆಗೆ ಮುಂದಾಯಿತು. ಈ ತಂತ್ರ ಸಾಕಷ್ಟು ಸಫಲವೂ ಆಯಿತು. ಪುನಃ ಅಮೆರಿಕ ಐ.ಎ.ಇ.ಎ. ಪರೀಕ್ಷಣೆ, ವಿಶ್ವಸಂಸ್ಥೆಯ ದಿಗ್ಬಂಧನಗಳ ಹೆಸರಲ್ಲಿ ಕೊರಿಯನ್ ಸಾರ್ವಭೌಮತೆ ಪ್ರಶ್ನಿಸಲು ಬಡಿಗೆ ಬಳಸಲು ಮುಂದಾದಾಗ ಅಣು ಅಸ್ತ್ರಗಳ ಪರೀಕ್ಷಣೆ ನಡೆಸಿತು. ಆರು-ದೇಶಗಳು ಮಧ್ಯಸ್ತಿಕೆ ವಹಿಸಿದ ಮಾತುಕತೆಗೆ ಅಮೆರಿಕ ಒಪ್ಪುವಂತೆ ಮಾಡಲು ಸಾಧ್ಯವಾಯಿತು.

ಈ ನಡುವೆ, ದ್ವಿತೀಯ ಕಿಮ್ ತಮ್ಮ ರಾಜಕೀಯ ಚಾಣಾಕ್ಷತೆ ಬಳಸಿ 1998 ರಲ್ಲಿ ದಕ್ಷಿಣ ಕೊರಿಯಾದ ಹೊಸ ಸರ್ಕಾರ ಜತೆ ಮಾತುಕತೆ ನಡೆಸಿ ಶಾಂತಿ-ಸಹಕಾರಗಳ ಒಪ್ಪಂದಕ್ಕೆ ಸಹಿ ಹಾಕಿದರು. ಇದನ್ನು ಎರಡು ಕೊರಿಯಾಗಳು 'ಸೂರ್ಯೋದಯ' ನೀತಿ ಎಂದು ಕರೆದಿದ್ದು ಅದು ಅಮೆರಿಕದ ದೊಡ್ಡಣ್ಣನಿಗೆ ಇಷ್ಟವಿಲ್ಲದಿದ್ದರೂ ಎಂಟು ವರ್ಷಗಳ ಕಾಲ ಮುಂದುವರೆಯಿತು. ಎರಡೂ ದೇಶಗಳ ನಡು ಆರ್ಥಿಕ ಸಂಬಂಧ ಏರ್ಪಟ್ಟು ಎರಡ ಆರ್ಥಿಕ ಪ್ರಯೋಜನಗಳು ಆದವು. ಆದರೆ ನಂತರ ಬಂದ ದ.ಕೊರಿಯಾ ಸರ್ಕಾ ಅಮೆರಿಕದ ನೀತಿ ಅನುಸರಿಸಿದ್ದು, ಅದರ ಜಂಟಿ ಕವಾಯಿತು ಹೆಸರಲ್ಲಿ ಆಕ್ರಾ ಪ್ರದರ್ಶಿಸಿದೆ. ಎಲ್ಲಾ ಆರ್ಥಿಕ ಸಂಬಂಧ ನೆರವು ಕಡಿದು ಹಾಕಿದೆ. ದ.ಕೊರಿಯ ಯುದ್ಧ ಹಡಗು ಮುಳುಗಿಸಿದೆ ಎಂಬ ಸು ಆಪಾದನೆ ಹೊರಿಸಿದೆ. ಈ ನಡು ಉ.ಕೊರಿಯಾದಲ್ಲಿ ಹಲವು ಪ್ರಾಕೃ ವಿಕೋಪಗಳು ಸರಣಿಯಾಗಿ ಬಂದು ಆಹ ಉತ್ಪಾದನೆ ಮತ್ತು ಆರ್ಥಿಕ ಕುಸಿದಿದೆ. ಅದ ಸಹ ಚೀನಾದ ಬೆಂಬಲ ಮತ್ತು ಕೊರಿಯ ಜನರ ಬೆಂಬಲದಿಂದ ಎದುರಿಸಲು ದ್ವಿತೀ ಕಿಮ್ ಸಫಲರಾದರು. ಅವರ ಜತೆ ನಿಕಟವ ವ್ಯವಹರಿಸಿದ ದಕ್ಷಿಣ ಕೊರಿಯಾ ಮ ಚೀನಾದ ಉನ್ನತ ನಾಯಕರು, ಆತನನ್ನು ದೇ ಹಿತಾಸಕ್ತಿ ಎತ್ತಿ ಹಿಡಿಯುವ ಚಾಣಾ ರಾಜಕೀಯ ನಾಯಕ ಎಂದು ಬಣ್ಣಿಸಿದ್ದಾ

'ವಶಪಡಿಸಿಕೊಳ್ಳಿ' 2011ರ ಅತ್ಯಂತ ಜನಪ್ರಿಯ ಶಬ್ದ

ಈ ನಡುವೆ, 'ವಾಲ್ ಸ್ಟ್ರೀಟ್ ವಶಪಡಿಸಿಕೊಳ್ಳಿ' ಚಳುವಳಿ ದೇಶದ ಜನತೆಯ ಮನಗೆದ್ದಿದ್ದು, ಜನ ಆಳುವವರಿಗೆ ಬುದ್ಧಿ ಕಲಿಸುವ ಮೂಡಿನಲ್ಲಿ ಇದ್ದಾರೆ. ನ್ಯೂಯಾರ್ಕಿನ 'ವಶಪಡಿಸಿಕೊಳ್ಳಿ' ಚಳುವಳಿ, ಪೋಲೀಸು ಕಸಿದುಕೊಂಡಿದ್ದ ಝುಕೊತಿ ಪಾರ್ಕ್‌ಗೆ ಪುನಃ ಪ್ರವೇಶಿಸಿದೆ. ಇದೇ ರೀತಿ ಸಾನ್ ಫ್ರಾನ್ಸಿಸ್ಕೊ , ಚಿಕಾಗೊ ಮುಂತಾದ ಪ್ರಮುಖ ನಗರಗಳಲ್ಲಿ 'ವಶಪಡಿಸಿಕೊಳ್ಳಿ' ಚಳುವಳಿ, ಪುನರಾರಂಭವಾಗಿದೆ. ಚದುರಿಸಲಾಗಿದ್ದ ಚಳುವಳಿ, ಹೊಸ ರೂಪ-ತಂತ್ರಗಳ ಮತ್ತು ಹೊಸ ಹಕ್ಕೊತ್ತಾಯಗಳೊಂದಿಗೆ ಪುನರಾರಂಭವಾಗಿದೆ. 'ನಮ್ಮ ಮನೆಗಳನ್ನು ವಶಪಡಿಸಿಕೊಳ್ಳಿ' ಚಳುವಳಿಯ ಇಂತಹ ಹೊಸ ರೂಪಕ್ಕೆ ಉದಾಹರಣೆ. ಸಾಲ ಮರುಪಾವತಿ ಮಾಡದೆ ಬ್ಯಾಂಕು ವಶಪಡಿಸಿಕೊಂಡ ತಮ್ಮ ಮನೆಗಳನ್ನು ಪುನಃ ವಶಪಡಿಸಿಕೊಳ್ಳುವ ಚಳುವಳಿಗೆ ಸಾಕಷ್ಟು ಬೆಂಬಲ ದೊರಕಿದೆ. 'ವಶಪಡಿಸಿಕೊಳ್ಳಿ' 2011 ರ ಅತ್ಯಂತ ಜನಪ್ರಿಯ ಶಬ್ದವಾಗಿ, ಸಾಮಾಜಿಕ ತಾಣಗಳಿಗೆ ಸಂಬಂಧಿಸಿದ ಶಬ್ದಗಳನ್ನು ಹಿಂದೆ ಹಾಕಿ ಆಯ್ಕೆಯಾಗಿದೆ.

ಅರ್ಜೆಂಟಿನಾ, ನಿಕರಾಗುವ : ಎಡ ಅಧ್ಯಕ್ಷರುಗಳ ಪುನರಾಯ್ಕೆ

ಅರ್ಜೆಂಟಿನಾ ಮತ್ತು ನಿಕರಾಗುವಗಳಲ್ಲಿ ಎಡ ಅಧ್ಯಕ್ಷರುಗಳು ಪುನರಾಯ್ಕೆಯಾಗಿದ್ದಾರೆ. ಇದರಿಂದ ಎಡ ಆಯ್ಕೆ ಬರಿಯ ಪ್ರತಿಭಟನಾ ಮತಗಳ ಫಲವಲ್ಲ. ಲ್ಯಾಟಿನ್ ಅಮೆರಿಕದಲ್ಲಿನ ಎಡ ಶಕ್ತಿಗಳು ತಮ್ಮ ಸ್ಥಾನ ಸುಭದ್ರಪಡಿಸಿಕೊಂಡಿವೆ ಎಂದು ಸಾಬೀತಾಗಿದೆ. ನಿಕರಾಗುವದಲ್ಲಿ 1980 ರ ದಶಕದಲ್ಲೇ ಚುನಾವಣೆಗಳ ಮೂಲಕ ಅಧಿಕಾರಕ್ಕೆ ಬಂದಿದ್ದು, ಅಮೆರಿಕ ಹಣ-ಮಿಲಿಟರಿ ಬಳಸಿ ಅದನ್ನು ಉರುಳಿಸಿತ್ತು. ಈಗಲೂ ಬಲಪಂಥೀಯ ಶಕ್ತಿಗಳಿಗೆ ಬೆಂಬಲ ಕೊಡುವ ಮೂಲಕ ಮೂಗು ತೂರಿಸುತ್ತಲೇ ಇದೆ. ನಿಕರಾಗುವದಲ್ಲಿ 2006ರಲ್ಲಿ ಎರಡನೇ ಬಾರಿಗೆ ಅಧ್ಯಕ್ಷರಾಗಿ ಆಯ್ಕೆಯಾದ ಡೇನಿಯಲ್ ಒರ್ಟೇಗಾ, ಈಗ ಇನ್ನೂ ಹೆಚ್ಚಿನ ಮತಗಳಿಂದ (ಶೇ.68) ಪುನರಾಯ್ಕೆಯಾಗಿದ್ದಾರೆ. ಅವರ ಸ್ಯಾಂಡಿನಿಸ್ಟಾ ಪಕ್ಷ ಸಹ ಪುನಃ ಸ್ಪಷ್ಟ ಬಹುಮತ ಗಳಿಸಿದೆ. ಅವರ ಸಾಮಾಜಿಕ ಕಾರ್ಯಕ್ರಮಗಳು ಬಹಳ ಜನಪ್ರಿಯವಾಗಿವೆ.

9 ವರ್ಷಗಳ ಹಿಂದೆ ಐಎಂಎಫ್ ಸಾಲ ಮರುಪಾವತಿ ನಿಲ್ಲಿಸಬೇಕಾಗಿ ಬಂದ ಅರ್ಜೆಂಟಿನಾ ಕ್ರಿಸ್ಟಿನಾ ಕಿರ್ಚನರ್ ಅವರ ಆಡಳಿತದಲ್ಲಿ ಭಾರೀ ಪ್ರಗತಿ ಸಾಧಿಸಿದೆ. ಅವರು ಶೇ.54 ಮತಗಳಿಸಿ ಮೊದಲ ಸುತ್ತಿನಲ್ಲೇ ಅಧ್ಯಕ್ಷೆಯಾಗಿ ಪುನಃ ಆಯ್ಕೆಯಾದದ್ದು ಆಶ್ಚರ್ಯವೇನಲ್ಲ. 2002-2011 ಅವಧಿಯಲ್ಲಿ ಅದು ಶೇ.94 ಬೆಳವಣಿಗೆ ಸಾಧಿಸಿದೆ. ಇದು ಅಪಾರವಾಗಿ ಬೆಳೆದ ಬ್ರೆಜಿಲಿನ ಎರಡು ಪಟ್ಟು, ಎಲ್ಲಾ ದೇಶಗಳಲ್ಲಿ ಬೆಳವಣಿಗೆ ಅಸಮಾನತೆ, ಬಡತನ ಹೆಚ್ಚಾದರೆ ಇಲ್ಲಿ ಆಗಲಿಲ್ಲ ಎಂಬುದು ಇನ್ನೂ ವಿಶೇಷ. 2002 ರಲ್ಲಿ ತಾರಕಕ್ಕೇರಿದ ಬಡತನವನ್ನು ಇದೇ ಅವಧಿಯಲ್ಲಿ ಮೂರನೇ ಎರಡರಷ್ಟು ಕಡಿತ ಮಾಡಲಾಗಿದೆ. ಇದೇ ವರ್ಷಗಳಲ್ಲಿ, ಸಾಮಾಜಿಕ ಕಾರ್ಯಕ್ರಮಗಳಿಗೆ ಖರ್ಚು ನಿಜ ಬೆಲೆಗಳಲ್ಲಿ ಮೂರು ಪಟ್ಟು ಆಗಿದೆ. ಅಸಮಾನತೆ ಅರ್ಧದಷ್ಟು ಕಡಿಮೆಯಾಗಿದೆ. ಅತಿ ಹೆಚ್ಚು ವರಮಾನ ಇರುವ ಶೇ. 5 ಜನರ ವರಮಾನ, ಅತಿ ಕಡಿಮೆ ಇರುವ ವರಮಾನ ಇರುವ ಶೇ. 5 ಜನರ ವರಮಾನದ 32 ಪಟ್ಟು ಇದ್ದದ್ದು 17 ಪಟ್ಟಿಗೆ ಇಳಿದಿದೆ. ಇದೇ ಕ್ರಿಸ್ಟಿನಾ ಅವರ ಪುನರಾಯ್ಕೆಯ ಗುಟ್ಟು.

'ಧಾರ್ಮಿಕ ಸ್ವಾತಂತ್ರ್ಯಎಂದರೆ ತಾರತಮ್ಯದ ಸಮರ್ಥನೆ ಅಲ್ಲ''

ಪುಟ 2 ರಿಂದ

ಎಂದರೆ, 'ಧಾರ್ಮಿಕಸ್ವಾತಂತ್ರ್ಯ' ನೀಡುವುದರೊಂದಿಗೆ ಅದಕ್ಕೆ ಪ್ರಮುಖ ಮೂರು ತರಹದ ಕಡಿವಾಣಗಳನ್ನು ಹಾಕಲಾಗಿದೆ.

ಯಾವುದೆ ಧಾರ್ಮಿಕ ಸ್ವಾತಂತ್ರ್ಯವೂ..

1) ಮತ್ತೊಬ್ಬರ ಶಾಂತಿಗೆ ಭಂಗ ತರುವಂತಿಲ್ಲ.
2) ನೈತಿಕತೆಗೆ ಬದ್ಧವಾಗಿರಬೇಕು.
3) ಜನರ ಆರೋಗ್ಯಕ್ಕೆ ದಕ್ಕೆ ತರುವಂತದ್ದಾಗಿರಬಾರದು.

ಮೇಲಿನ ಆಶಯಗಳಿಗೆ ಅನುಗುಣವಾಗಿಯೇ ನಮ್ಮ ದೇಶದಲ್ಲಿ ಸತಿಸಹಗಮನ ಪದ್ಧತಿ, ದೇವದಾಸಿ ಪದ್ಧತಿ, ಹೆಣ್ಣುಭ್ರೂಣಹತ್ಯೆ, ವೇಶ್ಯಾವಾಟಿಕೆಯಂತಹ ಪದ್ದತಿಗಳ ಮೇಲೆ ನಿಷೇಧಗಳು ಜಾರಿಯಲ್ಲಿವೆ. ಅದರ ಭಾಗವಾಗಿಯೇ ನಿಷೇಧವಾಗಬೇಕಿರುವುದು 'ಮಡೆಸ್ನಾನ'ದಂತಹ ಅನಿಷ್ಠ ಪದ್ಧತಿ.

ಇದರ ಜೊತೆಯಲ್ಲೇ ಸಂವಿಧಾನದ ಪರಿಚ್ಛೇದ 51(ಎ)(ಎಚ್) ಎಲ್ಲಾ ಭಾರತೀಯರಿಗೆ ಕೆಲವು ಪ್ರಮುಖ ಕರ್ತವ್ಯಗಳನ್ನು ನೇರವೇರಿಸಬೇಕೆಂದು ತಾಕೀತು ಮಾಡುತ್ತದೆ. ಅದರಲ್ಲಿ ಪ್ರಮುಖವಾಗಿ

1) ವೈಜ್ಞಾನಿಕ ಮನೋಧರ್ಮವನ್ನು ಬೆಳೆಸಲು ಎಲ್ಲರೂ ಶ್ರಮಿಸಬೇಕು.
2) ಸಮಾಜದಲ್ಲಿರುವ 'ಮೌಢ್ಯತೆ'ಗಳನ್ನು ಹೋಗಲಾಡಿಸಲು ಮುಂದಾಗಬೇಕು.
3) ಧಾರ್ಮಿಕ ಸುಧಾರಣೆಗಳಿಗಾಗಿ ಕೆಲಸ ಮಾಡಬೇಕು.

ನಾವೇ ಒಪ್ಪಿಕೊಂಡಿರುವ ಸಂವಿಧಾನವು ಹೀಗೆ ನಮ್ಮ ಕರ್ತವ್ಯಗಳನ್ನು ಸ್ಪಷ್ಟಪಡಿಸಿರುವಾಗ ಅದರ ಅಡಿಯಲ್ಲಿಯೇ ಬರುವ ಧಾರ್ಮಿಕ ಸಂಸ್ಥೆಗಳು ಮಡೆಸ್ನಾನ, ಪಂಕ್ತಿಬೇಧದಂತಹ ತಾರತಮ್ಯಗಳನ್ನು ಧಾರ್ಮಿಕಸ್ವಾತಂತ್ರ್ಯದ ಹೆಸರಿನಲ್ಲಿ ಸಮರ್ಥಿಸಿಕೊಳ್ಳುತ್ತಿರುವುದು ಸರಿಯಾದ ಕ್ರಮವಲ್ಲ. ಸಂವಿಧಾನದ ಹೆಸರಲ್ಲಿ ಸಚಿವರಾಗಿರುವ ವೈದ್ಯಕೀಯ ಶಿಕ್ಷಣ ಸಚಿವ ಡಾ|| ವಿ.ಎಸ್. ಆಚಾರ್ಯ ಮಡೆಸ್ನಾನದಿಂದ ಜನರ ರೋಗ–ರುಜಿನಗಳು ವಾಸಿಯಾಗುತ್ತವೆ ಎಂದು ಹೇಳಿಕೆ ನೀಡಿರುವುದು ಖಂಡನೀಯ. ಇಂಡಿಯನ್ ಮೆಡಿಕಲ್ ಕೌನ್ಸಿಲ್(imc) ಕೂಡಲೇ ಅವರ ವೈದ್ಯಕೀಯ ಪದವಿಯನ್ನು ರದ್ದು ಮಡಬೇಕು.

ಜನಶಕ್ತಿ : ನಾವು ಸರ್ಕಾರದ ಯಾವುದೇ ಕೃಪಾಕಟಾಕ್ಷದಲ್ಲಿಲ್ಲ. ಹಾಗಾಗಿ ನಮ್ಮ ಮೇಲೆ ನಿಯಂತ್ರಣ ಹೇರುವ ಹಕ್ಕು ಸರ್ಕಾರಕ್ಕಿಲ್ಲ ಎನ್ನುವ ವಾದದ ಬಗೆಗೆ ನಿಮ್ಮ ಅಭಿಪ್ರಾಯ ?

ಪ್ರೊ ರವಿವರ್ಮ ಕುಮಾರ್ : ಭಾರತದ ಸಂವಿಧಾನವೇ ಎಲ್ಲರಿಗೂ ಶ್ರೇಷ್ಠ. ಅದರ ಅಡಿಯಲ್ಲಿ ಬರುವುದೇ 'ಧಾರ್ಮಿಕ ಸ್ವಾತಂತ್ರ್ಯ'. ಅಲ್ಲದೆ ಸಂವಿಧಾನ ಇರುವುದು ಕೇವಲ ಸರ್ಕಾರಕ್ಕೆ ಮತ್ತು ಧಾರ್ಮಿಕ ಸಂಸ್ಥೆಗಳಿಗಲ್ಲ. ಬದಲಾಗಿ ಎಲ್ಲಾ ಭಾರತೀಯರಿಗೂ ಅದು ಅನ್ವಯವಾಗುತ್ತದೆ. ಹಾಗಾಗಿ ಯಾವುದೇ ಧಾರ್ಮಿಕ ಸಂಸ್ಥೆ ಧಾರ್ಮಿಕ ಆಚರಣೆ ಸಂವಿಧಾನ ವಿರೋಧಿಯಾಗಿದ್ದರೆ, ಅದನ್ನು ನಿಯಂತ್ರಿಸುವ ಎಲ್ಲಾ ಹಕ್ಕು 'ಸಂವಿಧಾನ ಬದ್ಧವಾಗಿ ರಚನೆಯಾಗುವ ಎಲ್ಲಾ ಸರ್ಕಾರಗಳಿಗೂ ಇದ್ದೇ ಇರುತ್ತದೆ. ಆದ್ದರಿಂದ ಯಾವುದೆ ತೆರನಾದ ಪಂಕ್ತಿಭೇಧಗಳಿರಲಿ, ಮಡೆಸ್ನಾನ ದಂತಹ ಕಂದಾಚಾರದ ಕೃತ್ಯಗಳನ್ನು ನಿಯಂತ್ರಿಸುವ ಹಕ್ಕು ಸರ್ಕಾರಕ್ಕೆ ಇದೆ.

ಜನಶಕ್ತಿ : ನ್ಯಾಯಾಂಗ ಈ ವಿಷಯವಾಗಿ ಹೇಗೆ ಮಧ್ಯ ಪ್ರವೇಶಿಸಬಹುದು ?

ಪ್ರೊ ರವಿವರ್ಮ ಕುಮಾರ್ : ಖಂಡಿತವಾಗಿ ನ್ಯಾಯಾಂಗ ಈ ವಿಷಯವಾಗಿ ಮಧ್ಯ ಪ್ರವೇಶಿಸಲು ಅವಕಾಶವಿದೆ.

ಜನಶಕ್ತಿ: ಇಂತಹ ಸನ್ನಿವೇಶದಲ್ಲಿ ಜನತೆಯ ಪಾತ್ರ ಏನು ?

ಪ್ರೊ ರವಿವರ್ಮ ಕುಮಾರ್: ಜನರು ಸ್ವತಃ ಪ್ರಜ್ಞಾವಂತರಾಗಬೇಕಾದುದ್ದು ಅವಶ್ಯಕವಿದೆ. ಮತ್ತು ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಸಮಾಜದಲ್ಲಿರುವ ಪ್ರಜ್ಞಾವಂತರೆಲ್ಲರೂ ಮೊಡಬೆಕಿದೆ. ಇಂತಹ ಕೆಲಸವನ್ನು ಕೈಗೆತ್ತಿಕೊಂಡಿರುವ ಸಿಪಿಐ(ಎಂ) ಪಕ್ಷದ ಪ್ರಯತ್ನ ಸಂತೋಷದ ಸಂಗತಿ. ಮುಂದುವೆಯಿರಿ ನಿಮಗೆ ನನ್ನ ಸಂಪೂರ್ಣ ಬೆಂಬಲವಿದೆ.

ಯುಪಿಎ ದರ್ಬಾರ್

ಪುಟ 13 ರಿಂದ

ಪರಮಾಣು ಸಂಬಂಧಿತ ಶಾಸನವನ್ನು ಅಮೆರಿಕಾದೊಂದಿಗೆ ಮನಮೋಹನ್ ಸಿಂಗ್‌ರವರು ಮಾಡಿಕೊಂಡ ಪರಮಾಣು ವ್ಯವಹಾರದ ಜಾಲ ಆವರಿಸಿಕೊಳ್ಳುತ್ತಿದ್ದು ಇದು ಕೂಡ ಅದರಿಂದ ಮುಕ್ತವಾಗಿಲ್ಲ ಎಂದು ಅವರು ಹೇಳಿದ್ದಾರೆ.

ಈ ಹಿಂದೆ ಪರಮಾಣು ಹೊಣೆಗಾರಿಕೆ ಮಸೂದೆಯಲ್ಲಿಯೂ ಹೀಗೇ ಆಯಿತು. ಅಮೆರಿಕನ್ ಪೂರೈಕೆದಾರರನ್ನು ತೃಪ್ತಿಪಡಿಸಲು ಅದನ್ನು ದುರ್ಬಲಗೊಳಿಸಲಾಯಿತು, ನಂತರ ಅದರಡಿಯಲ್ಲಿ ರೂಪಿಸಿದ ನಿಯಮಾವಳಿಗಳು ಆ ಕಾನೂನನ್ನೇ ನಿರರ್ಥಕಗೊಳಿಸಿವೆ ಎಂದು ಸ್ವತಃ ಮಾಜಿ ಅಟಾರ್ನಿ ಜನರಲ್ ಹೇಳಿರುವುದನ್ನು ನಾವು ನೋಡಿದ್ದೇವೆ. ದೇಶದ ಪರಮಾಣು ಸ್ಥಾವರಗಳ ಸುರಕ್ಷಿತತೆಯ ಮೇಲೆ ನಿಗಾ ಇಡಬೇಕಾದ ಪ್ರಾಧಿಕಾರದ ವಿಷಯದಲ್ಲಿಯೂ ಅದು ಪುನರಾವರ್ತನೆಗೊಳ್ಳುತ್ತಿದೆ.

ಯಾವುದೇ ನಿಯಂತ್ರಣ ಪ್ರಾಧಿಕಾರದ ಮುಖ್ಯ ಲಕ್ಷಣಗಳೆಂದರೆ ಅದು ಸರಕಾರದ ನಿಯಂತ್ರಣದಿಂದ ಸ್ವತಂತ್ರವಾಗಿರಬೇಕು, ನಿಯಂತ್ರಣದಲ್ಲಿ ಪಾರದರ್ಶಕತೆ ಇರಬೇಕು ಮತ್ತು ತನ್ನ ನಿರ್ಧಾರಗಳನ್ನು ಜಾರಿಗೆ ತರುವ ಅಧಿಕಾರಗಳು ಅದಕ್ಕಿರಬೇಕು. ಈ ಮೂರೂ ಅಂಶಗಳು ಈ ಮಸೂದೆಯಲ್ಲಿ ಇಲ್ಲ.

ಪರಮಾಣು ಸುರಕ್ಷಿತತೆ ಕುರಿತಂತೆ ನಿಯಂತ್ರಣ ಒಂದು ಬಹಳ ಗಂಭೀರವಾದ ವಿಷಯ. ಅದು ವಿದ್ಯುತ್, ದೂರಸಂಪರ್ಕ ಮುಂತಾದ ಸೇವೆಗಳ ದರಗಳನ್ನು ನಿಯಂತ್ರಿಸುವುದಕ್ಕಿಂತ ಭಿನ್ನವಾದದ್ದು. ಇಲ್ಲಿ ಜನಗಳ ಜೀವಗಳ ಸುರಕ್ಷಿತತೆಯ ಪ್ರಶ್ನೆಯಿದೆ. ಒಂದು ಪರಮಾಣು ಅಪಘಾತ ಸಾವಿರಾರ್ರು ಮಂದಿಯನ್ನು ಸಾಯಿಸಬಲ್ಲುದು, ಕೋಟ್ಯಂತರ ರೂಪಾಯಿಗಳ ನಷ್ಟ ಉಂಟು ಮಾಡಬಲ್ಲುದು. ಇದಕ್ಕೆ ಇತ್ತೀಚಿನ ಉದಾಹರಣೆಯೆಂದರೆ ಜಪಾನಿನ ಫುಕುಶಿಮಾ ಅಪಘಾತ. ಪರಮಾಣು ಶಕ್ತಿಗೆ ಸಂಬಂಧಪಟ್ಟಂತೆ ಇಂತಹ ನಿಲುವಿನಿಂದಾಗಿಯೇ ದೇಶದ ಪರಮಾಣು ಶಕ್ತಿ ಕಾರ್ಯಕ್ರಮ ಜನಗಳ ವಿಶ್ವಾಸ ಗಳಿಸುವಲ್ಲಿ ವಿಫಲವಾಗಿದೆ, ಜೈತಪುರ್ ಮತ್ತು ಕುಂಡಕುಳಂ ನಂತಹ ಪ್ರತಿಭಟನೆಗಳನ್ನು ಎದುರಿಸಬೇಕಾಗಿದೆ ಎಂದು ತಜ್ಞರು ಹೇಳುತ್ತಿದ್ದಾರೆ.

ಯುಪಿಎ ಸರಕಾರ ವಿಶ್ವಬ್ಯಾಂಕಿನ ಮುನ್ನೆಚ್ಚರಿಕೆಗಾದರೂ ಲಕ್ಷ್ಯ ಕೊಡಲಿ!

ಪುಟ 7 ರಿಂದ

ಮಹಾತೀರ್ ಮೊಹಮ್ಮದ್ ಒಂದು ಮಲೇಸ್ಯಾದ ಗಾದೆಯನ್ನು ಉದ್ಧರಿಸುತ್ತಿದ್ದರು–ಅದರ ಅರ್ಥ, ನಿನಗೆ ದಾರಿಯೇನಾದರೂ ತಪ್ಪಿದರೆ, ಆರಂಭಕ್ಕೆ ಹಿಂದಿರುಗಿ ಮತ್ತೆ ಆರಂಭಿಸು ಎಂದು (ಇಂತಹ ಜಾಣತನದ ಮಾತುಗಳು ಸುಮಾರಾಗಿ ಎಲ್ಲ ನಾಗರಿಕತೆಗಳಲ್ಲೂ ಕಾಣ ಸಿಗುತ್ತವೆ). ಆದರೇನು ಮಾಡುವುದು, ಜಾಗತಿಕ ಬಂಡವಾಳಶಾಹಿ ಇಂತಹ ಜಾಣತನದಿಂದ ಪಾಠ ಕಲಿಯದಷ್ಟು ಉದ್ಧಟತನ ಹೊಂದಿದೆ. ಅದರ ಬದಲು, ನವ–ಉದಾರವಾದಿ ಪಥ್ಯಗಳು 'ಸಂಯಮ'ವನ್ನು ಹೇರಬೇಕೆಂದು ಪ್ರತಿಪಾದಿಸುತ್ತವೆ. ಇದು ಪರಿಸ್ಥಿತಿಯನ್ನು ಇನ್ನಷ್ಟು ಉಲ್ಬಣಗೊಳಿಸುತ್ತದೆ, ಬಿಕ್ಕಟ್ಟನ್ನು ಮತ್ತಷ್ಟು ಹೆಚ್ಚಿಸುತ್ತದಷ್ಟೇ ಎಂಬುದನ್ನು ನಾವು ಈ ಹಿಂದೆ ಕಂಡಿದ್ದೇವೆ.

"ನಾವು ಹೇಗೆ ತಾನೇ ಇತಿಹಾಸವನ್ನು ತಪ್ಪಾಗಿ ಓದಲು, ಜಾನ್ ಮೆನಾರ್ಡ್ ಕೀನ್ಸ್‌ನ ಬೋಧನೆಗಳನ್ನು ತುಚ್ಛವಾಗಿ ಕಾಣಲು ಸಾಧ್ಯವಾಯಿತು?" ಎನ್ನುತ್ತದೆ ನ್ಯೂಯಾರ್ಕ್ ಪುಸ್ತಕ ವಿಮರ್ಶೆ. 1930ರ ಮಹಾಕುಸಿತದ ನಂತರದ ವರ್ಷಗಳಲ್ಲಿ ಕೀನ್ಸ್ ಸಾರ್ವಜನಿಕ ಹೂಡಿಕೆಗಳ ಮೂಲಕ ಪ್ರಭುತ್ವದ ಸಕ್ರಿಯ ಮಧ್ಯಪ್ರವೇಶದಿಂದ ಮಾತ್ರ ಬಂಡವಾಳಶಾಹಿ ಪೂರ್ಣ ಉದ್ಯೋಗವನ್ನು ಸಾಧಿಸಬಲ್ಲದು ಎಂದು ಪ್ರತಿಪಾದಿಸಿದ್ದರು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕಾಗಿದೆ. ಅವರ ಪ್ರಕಾರ, ಬಂಡವಾಳಶಾಹಿಯನ್ನು "ಉಳಿಸಲು, ಸಮಾಜವಾದ ಅದನ್ನು ಕೈವಶ ಮಾಡಿಕೊಳ್ಳದಂತೆ ರಕ್ಷಿಸಲು ಇರುವ ದಾರಿ ಇದೊಂದೇ.

ನಿಸ್ಸಹಾಯಕ ಮಾಟಗಾರ

ಮನಮೋಹನ ಸಿಂಗ್ ಸರಕಾರ ನಾವು ಮೇಲೆ ಹೇಳಿರುವ ಸೂಚನೆಗಳನ್ನು ಸ್ವೀಕರಿಸುವ ಬದಲು ನವ–ಉದಾರವಾದಿ ಅಜೆಂಡಾವನ್ನೇ ರಭಸದಿಂದ ಅನುಸರಿಸುವುದನ್ನು ಮುಂದುವರೆಸುತ್ತಿದೆ. ಇದು ನಮ್ಮ ಆರ್ಥಿಕಕ್ಕೆ ಮತ್ತು ನಮ್ಮ ಬಹುಪಾಲು ಜನತೆಗೆ ವಿನಾಶಕಾರಿಯಾಗಬಹುದಷ್ಟೇ. ಬಂಡವಾಳಶಾಹಿಯು ಗೋಡೆಯ ಮೇಲಿನ ಅತಿ ದಪ್ಪಕ್ಷರಗಳ ಬರಹಗಳನ್ನೂ ಉಪೇಕ್ಷಿಸುವ ಒಂದು ಪ್ರವೃತ್ತಿಯನ್ನು ಹೊಂದಿದೆ. ಬಂಡವಾಳಶಾಹಿ ಎಂತಹ ದೈತ್ಯಪ್ರಮಾಣದ ಉತ್ಪಾದನಾ ಮತ್ತು ವಿನಿಮಯ ಸಾಧನಗಳನ್ನು ಸೃಷ್ಟಿಸುತ್ತದೆಯೆಂದರೆ, ಅದು ತನ್ನ ಮಾಟ–ಮಂತ್ರಗಳ ಮೂಲಕ ಪಾತಾಳ ಲೋಕದಿಂದ ಆವಾಹಿಸುವ ಶಕ್ತಿಯನ್ನು ತಾನೇ ನಿಯಂತ್ರಿಸಲಾರದ ಮಾಟಗಾರನಂತಾಗುತ್ತದೆ ಎಂದು ಮಾರ್ಕ್ಸ್ ಒಂದೊಮ್ಮೆ ಹೇಳಿದ್ದರು. ಇದು ವ್ಯವಸ್ಥೆಯ ಬಿಕ್ಕಟ್ಟು, ಕೆಲವು ವ್ಯಕ್ತಿಗಳ ದುರಾಸೆ, ಹಣದಾಹದಿಂದ ಉಂಟಾದ್ದಲ್ಲ. ಈ ವ್ಯವಸ್ಥೆಯನ್ನು ಕಿತ್ತೊಗೆದಾಗ ಮಾತ್ರವೇ ಮಾನವ ಕುಲದ ನಿಜವಾದ ವಿಮೋಚನೆ ಸಾಧ್ಯ.

ಈ ನಡುವೆ ಭಾರತದಲ್ಲಿ ಯುಪಿಎ ಸರಕಾರ ತನ್ನ ನವ–ಉದಾರವಾದಿ ಧೋರಣೆಯ ದಿಕ್ಕನ್ನು ಬದಲಿಸಿ, ನಮ್ಮ ಬಹು ಆವಶ್ಯಕ ಮೂಲರಚನೆಗಳನ್ನು ಕಟ್ಟಲು ಮತ್ತು ದೊಡ್ಡ ಪ್ರಮಾಣದಲ್ಲಿ ಉದ್ಯೋಗಾವಕಾಶಗಳನ್ನು ನಿರ್ಮಿಸಲು ಸಾರ್ವಜನಿಕ ಖರ್ಚುಗಳಲ್ಲಿ ಭಾರೀ ಹೂಡಿಕೆಗಳನ್ನು ಮಾಡುವಂತೆ ಅದರ ಮೇಲೆ ಇನ್ನಷ್ಟು ಒತ್ತಡಗಳನ್ನು ಹಾಕಬೇಕಾಗಿದೆ. ನಮ್ಮ ಜನಗಳ ಜೀವನಾಧಾರವನ್ನು ಉತ್ತಮ ಪಡಿಸಲು ಇರುವ ದಾರಿ ಇದೊಂದೇ.

ಜನಶಕ್ತಿ
ಚಂದಾದಾರರಾಗಿ

ಬಿಡಿ ಪ್ರತಿ	ರೂ. 5.00
ವಾರ್ಷಿಕ ಚಂದಾ	ರೂ. 250
ದ್ವೈವಾರ್ಷಿಕ ಚಂದಾ	ರೂ. 500

ಎಲ್ಲಿದೆ ಇಲ್ಲಿ 'ಮರ್ಯಾದೆ' ಇದೊಂದು ಹೀನಾಯ 'ಹತ್ಯೆ'

ಮಂಡ್ಯ ಜಿಲ್ಲೆಯ ಅಬಲವಾಡಿ ಗ್ರಾಮದಲ್ಲಿ ನಡೆದಿರುವ ಈ ಘಟನಾವಳಿಗಳು ಇಡೀ ನಾಗರೀಕ ಸಮಾಜಕ್ಕೆ ಮತ್ತು ಮಾನವೀಯತೆಗೆ ದೇಶದ ಸಂವಿಧಾನ, ಕಾನೂನಿಗೆ ಅಪಮಾನಕಾರಿಯಾದದ್ದು.

ಕರುಳ ಒಳಗಿನ ಕತ್ತರಿ.....

ಕೆ. ನೀಲಾ

ಬೆಂಗಳೂರಿನ ಬಸ್ ಸ್ಟ್ಯಾಂಡು ಗೌಜು ಗದ್ದಲದ ನಡುವೆ ನೆಮ್ಮದಿ ಕಾಣದೆ ಅಸಹಾಯಕತೆ ಯಿಂದ ಒದ್ದಾಡುತ್ತಿತ್ತು. ನಾನು ನನ್ನ ಪುಟ್ಟ ಲಗೇಜಿನೊಂದಿಗೆ ಖಾಲಿಯಿರುವ ಬೆಂಚಿನ ಮೇಲೆ ಕುಳಿತೆ. ಲೋಕಾಂತದ ಸೀಮೆ ದಾಟಿ ಮನಸು ಹರಿಗಡಿದು ಏಕಾಂತದತ್ತ ದೂಡಿತು.

ಇಡೀ ದಿನ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಆಬಲವಾಡಿಯಲ್ಲೆಲ್ಲ ಸುತ್ತಾಡಿ ಹೃದಯ ಭಾರವಾಗಿತ್ತು. ಸುವರ್ಣಳ ಹತ್ಯೆಯು ನಮ್ಮನ್ನು ಅಲ್ಲಿಗೆ ಎಳೆದಿತ್ತು. ಅದೊಂದು ಮರ್ಯಾದಾ ಹತ್ಯೆ ಎಂದು ವರದಿಗಳು ಪ್ರಕಟಿಸಿದ್ದವು. ಇಡೀ ಹಳ್ಳಿಯಲ್ಲಿ ಒಂದೇ ಉತ್ತರ ರಳಾಯಿಸುತಿತ್ತು, 'ನಾನವತ್ತು ಊರಾಗಿದ್ದಿಲ್ರಿ.....' ನಾವು ಗ್ರಾಮ ಪಂಚಾಯ್ತಿಗೆ ಹೋದೆವು. ಅಲ್ಲಿಯೂ ಅದೇ ಉತ್ತರ ಕಾದಿತ್ತು. ಸುವರ್ಣಳನ್ನು ಪ್ರೀತಿಸಿದ ಹುಡುಗನ ಅಣ್ಣ ತಿಮ್ಮಪ್ಪಯ್ಯ ಗ್ರಾಮ ಪಂಚಾಯ್ತಿ ಸದಸ್ಯ. ಎರಡು ಮೀಟಿಂಗಿಗೆ ಬಂದಿಲ್ಲ ಎಂದು ಪಂಚಾಯತ್ ಅಭಿವೃದ್ಧಿ ಅಧಿಕಾರಿ ಹೇಳಿದರು. 'ಮೂರನೇ ಮೀಟಿಂಗಿಗೂ ಬಂದಿಲ್ಲಂದ್ರೆ ಆಕ್ಟ್ ಏನು ಹೇಳುತ್ತೊ ಹಂಗೆ ಮಾಡ್ತಿವಿ..' ಅಂದರೆ ದಲಿತ ಮೀಸಲಾತಿಯಲ್ಲಿ ಆಯ್ಕೆಯಾದ ತಿಮ್ಮಪ್ಪನ ಸದಸ್ಯತ್ವ ಮುಂದೊಮ್ಮೆ ರದ್ದಾಗುವ ಸೂಚನೆಗಳವು. ಇಂತಹ ಘಟನೆಗಳ ಚರ್ಚೆ ಮತ್ತು ಕ್ರಮಕ್ಕಾಗಿ ಸಾಮಾಜಿಕ ನ್ಯಾಯ ಸಮಿತಿ ಇರುತ್ತದೆ. ಗ್ರಾಮ ಪಂಚಾಯತ್ ಉಪಾಧ್ಯಕ್ಷರು ಈ ಕಮಿಟಿಗೆ ಅಧ್ಯಕ್ಷರಾಗಿರುತ್ತಾರೆ. 'ಸಮಿತಿ ಸೇರಿ ಈ ಪ್ರಕರಣದ ಬಗ್ಗೆ ಚರ್ಚೆ ಮಾಡಿರುವಿರೇನು?' ಅಂದರೆ ಇಲ್ಲ ಎಂಬ ಉತ್ತರ ಬಂದಿತು. ಈ ರೀತಿಯ ಉಪಸಮಿತಿಗಳ ಕಾರ್ಯನಿರ್ವಹಣೆಯ ಬಗ್ಗೆಯೇ ಅವರು ತಲೆ ಕೆಡಿಸಿಕೊಂಡಿಲ್ಲ ಅನಿಸಿತು. ಸುವರ್ಣ ಎಂಬ ಒಕ್ಕಲಿಗರ ಹುಡುಗಿ, ಗೋವಿಂದರಾಜು ಎಂಬ ದಲಿತ ಹುಡುಗನನ್ನು ಪ್ರೀತಿಸಿದ ಕಾರಣಕ್ಕೆ ಅವಳು ಹುಟ್ಟಿದ್ದಕ್ಕೂ ಬದುಕಿದ್ದಕ್ಕೂ ಸತ್ತಿದ್ದಕ್ಕೂ ಸಾಕ್ಷಿಯಿಡದೆ ಹೀಗೆ ಎಲ್ಲವನ್ನೂ ಏಕಾಏಕಿ ಇಲ್ಲವಾಗಿಸಿ ಆಬಲವಾಡಿ ಕ್ರೂರ ಮೌನ ಧರಿಸಿ ನಿಂತಿತ್ತು. ದಲಿತರ ಮತ್ತು ಮಹಿಳೆಯರ ಮೇಲೆ ದೌರ್ಜನ್ಯ ನಡೆದಾಗೆಲ್ಲ ಇಡೀ ಊರಲ್ಲಿ ಇಂಥದೇ ಮೌನ ಹೇಡಿಯಂತೆ ಬೀಡು ಬಿಡುವುದು ಹೊಸದೇನಲ್ಲ. ಅರಕೇರಾದ ದಲಿತ ದಂಪತಿಯನ್ನು ನಡುಬೀದಿಯಲ್ಲಿ ಕಂಬಕ್ಕೆ ಕಟ್ಟಿ ಹೊಡೆದಾಗ, ಬಳ್ಳಾರಿಯ ಯರ್ರಮ್ಮಳನ್ನು ಬತ್ತಲೆಗೊಳಿಸಿ ಬಾವುಟದ ಕಂಬಕ್ಕೆ ಬಿಗಿದು ಥಳಿಸಿದಾಗ ಮತ್ತೆ ಎಷ್ಟೆಲ್ಲ ಪ್ರಕರಣಗಳು ನಡೆದಾಗ ನಿಜವ ನುಡಿಯಬೇಕಾದ ಕಂಠಗಳು ಮೌನಕ್ಕೆ ಶರಣಾಗಿದ್ದವು. ಅದೊಂದು ಹೃದಯ ಹಿಂಡುವ ವಿಚಿತ್ರ ಮೌನ.......

ಘಟನೆ ನಡೆದಾಗ ಪೋಲಿಸರೇನು ಮಾಡಿದರು? ಸುದ್ದಿ ತಿಳಿದು ಬಂದರು. ಸುವರ್ಣಾಳನ್ನು ಆಪೋಷನಗೈದ ಉರಿವ ಬೂದಿಯನ್ನು ನೋಡಿಕೊಂಡು ಹೋದರು. 176 ಕಲಮ್ಮಿನ ಪ್ರಕಾರ ಕೇಸು ದಾಖಲಿಸಿಕೊಂಡು ತನಿಖೆ ನಡೆಸಬಹುದಿತ್ತು. ಹಾಗೆ ಮಾಡಲೇ ಇಲ್ಲ. ಗಂಭೀರ ಲೋಪವಾಗಿದ್ದು ಪೋಲೀಸರಿಂದ. ಪತ್ರಿಕೆಯಲ್ಲಿ ಉಸ್ತುವಾರಿ ಸಚಿವರ ಹೇಳಿಕೆ ಇತ್ತು. 'ಇದು ಮರ್ಯಾದೆ ಹತ್ಯೆಯಲ್ಲ, ಆತ್ಮ ಹತ್ಯೆ' ಎಂದು. ಹೇಗೆ ಹೇಳಿದರು? ಗೃಹ ಮಂತ್ರಿಗಳೂ ಆದ ಅವರು ತನಿಖೆ ನಡೆಸುವುದಾಗಿಯಾದರೂ ಜವಾಬ್ದಾರಿಯಿಂದ ಹೇಳಬಹುದಿತ್ತು. ಓಟ್ ಬ್ಯಾಂಕಿನ ಆಕರ್ಷಣೆ ಹೃದಯಹೀನತೆಗೆ ಜನ್ಮ ಕೊಡುತ್ತದೆಯಲ್ಲವೇ.......

ಆಬಲವಾಡಿಯೊಂದು ಪುಟ್ಟ ಹಳ್ಳಿ. 780 ಕುಟುಂಬಗಳಿವೆ. ಮತ್ತು 3000ದಷ್ಟು ಜನಸಂಖ್ಯೆ ಇದೆ. ಅದರಲ್ಲಿ 80 ಮಾತ್ರ ದಲಿತ ಕುಟುಂಬಗಳು. ಇವರೆಲ್ಲರ ನಡುವೆ ಸುಂದರ ಸಂಸಾರ ಕಟ್ಟಿಕೊಂಡು ಬಾಳುವೆ ನಡೆಸಲು ಸುವರ್ಣಾಗೆ ಬಿಡಲೇ ಇಲ್ಲ. ಜಾತಿಯ ಭೂತವನ್ನೇ ಆರಾಧಿಸುವ ಹೆತ್ತವರು ಕರುಳ ಕುಡಿಯನ್ನೇ ಹಿಸುಕಿ ಮನೆತನದ ಮರ್ಯಾದೆ ಉಳಿಸಿಕೊಂಡೆವೆಂದು ಮೂರ್ಖತನದ ಧಿಮಾಕಿನಿಂದ ಮೆರೆವ ಉದಾಹರಣೆಗಳಿಗೆ ಈ ನೆಲದಲ್ಲಿ ಲೆಕ್ಕವಿಟ್ಟವರಾರು?



ಗೋವಿಂದರಾಜ್

ಗಂಗಾವತಿಯಲ್ಲಿ ಅಂತರ್ ಜಾತಿ ವಿವಾಹವೊಂದು ನಡೆದಿತ್ತು. ಹಿರಿಯರು ಯಥಾರೀತಿ ವಿರೋಧಿಸಿದರು. ಸಂಘಟನೆಗಳ ನೆರವಿನಿಂದ ಆ ಪ್ರೇಮಿಗಳು ಬದುಕು ಹೂಡಿದರು. ಹುಡುಗಿ ತುಸು ಮೇಲ್ಜಾತಿಗೆ ಸೇರಿದವಳು. ಹೆತ್ತ ತಂದೆಯೇ ಐದು ತಿಂಗಳ ಬಸುರಿ ಮಗಳು ಮನೆಯಲ್ಲಿ ಒಂಟಿಯಾಗಿದ್ದಾಗ ಪೆಟ್ರೋಲ್ ಸುರುವಿ ಕೊಂದು ಹಾಕಿದ್ದ. ಅದೇ ದಿನಮಾನಗಳಲ್ಲಿ ದಲಿತ ಹುಡುಗನೊಬ್ಬ ಮೇಲ್ಜಾತಿಯ ತಮ್ಮ ಮಗಳನ್ನು ವರಿಸಿದ್ದಕ್ಕೆ ಕಣ್ಣು ಕಿತ್ತಿದ ಹೃದಯ ವಿದ್ರಾವಕ ಪ್ರಕರಣ ನಡೆಯಿತು......

ನಾನು ಚಿಕ್ಕವಳಿದ್ದಾಗ ನಡೆದ ಪ್ರಕರಣ. ದಲಿತ ಯುವತಿಯೊಂದಿಗೆ ಮೇಲ್ಜಾತಿಯ ಯುವಕನೊಬ್ಬ ಜಾತಿಯನ್ನು ಧಿಕ್ಕರಿಸಿ ಮದುವೆಯಾಗಿಬಿಟ್ಟ. ಹುಡುಗನ ಹೆತ್ತವರು ಮಗನನ್ನು ಹೇಗಾದರೂ ಅವಳಿಂದ ಬಿಡಿಸಲು ತಂತ್ರ ಹೂಡಿದರು. ಬೆಂಬಲಿಸಿದಂತೆ ನಾಟಕವಾಡಿ ಅವರ ನಡುವಿಗಿರುವ ಸಾಂಸ್ಕೃತಿಕ ಆಚರಣೆ ನಂಬಿಕೆಗಳನ್ನೇ ಪ್ರಧಾನ ಮಾಡಿ ಬಿರುಕು ಮೂಡಿಸಿದರು ಮತ್ತು ಬಹಳ ಬೇಗ ಸಂಸಾರವನ್ನು ವಿಘಟಿಸಿ ಅವನಿಗೆ ತಮ್ಮದೇ ನೆಂಟರ ಹುಡುಗಿಯೊಂದಿಗೆ ಮದುವೆ ಮಾಡಿದರು. ಅವಳ ಬದುಕು ಮುಂದೆ ಮೂರಾಬಟ್ಟೆಯಾಗಿ ಹೋಯ್ತು...... ಸ್ವಂತ ಆಯ್ಕೆ ಹಕ್ಕೆನ್ನುವುದು ಅತ್ಯಂತ ಪ್ರಬುದ್ಧ ಮತ್ತು ಉತ್ಕಟ ಪ್ರೇಮಪರ ನಿಲುವಿನಿಂದ ಕೂಡಿರದೇ ಹೋದರೆ ಬದುಕನ್ನು ಚಿಂದಿ-ಚಿಂದಿಯಾಗಿಸಲು ಕಾದು ಕೂತವರಲ್ಲಿ ಹೆತ್ತವರು ಮೊದಲಿಗರಾಗುತ್ತಾರೆ!



ಹತ್ಯೆಯಾದ ಸುವರ್ಣ ಮತ್ತು ಅವಳ ಮನೆ

ಈ ಸಮಾಜ ಆಯ್ಕೆಯ ಹಕ್ಕಿನ ಮೇಲೆ ಯಾವತ್ತೂ ನಿರ್ದಯತೆಯಿಂದ ಧಾಳಿ ಮಾಡಿದೆ. ಅದು ತನ್ನ ಶ್ರೇಣೀಕೃತ ಮೌಲ್ಯಗಳನ್ನು ಕಾಪಾಡಿಕೊಳ್ಳಲು ನಾನಾ ನಮೂನೆಯ ಮುಖವಾಡ ಧರಿಸಿದೆ ಅಷ್ಟೇ. ದೈಹಿಕ ಧಾಳಿಗಳು ಸುದ್ದಿಯಾದರೆ ಅಸಂಖ್ಯ ಮಾನಸಿಕ ಧಾಳಿಗಳು ದುರಂತದ ಕಡಲಲ್ಲಿ ಮುಳುಗಿವೆ. ಹಾಗೆಯೇ ಸಾಮಾಜಿಕ, ಆರ್ಥಿಕ ಧಾಳಿಗಳಿಗೆ ಲೆಕ್ಕವಿಲ್ಲ

12ನೇ ಶತಮಾನದಲ್ಲಿ ಚಾತುರ್ವರ್ಣ ವ್ಯವಸ್ಥೆಯನ್ನು ಬುಡಮೇಲು ಮಾಡ ಹೊರಟಿದ್ದು ಕಾಯಕ ಜೀವಿಗಳ ಚಳುವಳಿ. ಬ್ರಾಹ್ಮಣ ಮಧುವರಸರ ಮಗಳು ಕಲಾವತಿ, ಸಮಗಾರ ಹರಳಯ್ಯನ ಮಗ ಶೀಲವಂತ ಇಬ್ಬರ ಮದುವೆಗೂ ಶರಣ ಸಮಾಜ ಮತ್ತು ಎರಡೂ ಕುಟುಂಬಗಳು ಒಪ್ಪಿದರೂ, ರಾಜಶಾಹಿ ಮಾತ್ರ ಈ ಅಂತರ್‌ಜಾತಿ ವಿವಾಹ ನಡೆಯುದಂತೆ ಶಿಕ್ಷಿಸಿತು. ಜಾತಿಪ[...] ಮುರಿಯಲು ಹೊರಟ ಮಧುವರಸ [...] ಹರಳಯ್ಯ ದಂಪತಿಗಳ ಕಣ್ಣು ಕೀಳಿಸಿ [...] ಕಾಲಿಗೆ ಕಟ್ಟಿ ಕಲ್ಯಾಣ ಪಟ್ಟಣದ ಬೀದಿಯ[...] ಎಳೆಸಲಾಯಿತು. ಈ ಕ್ರೂರ ದಮನದ ಹಿಂ[...] ರಾಜಕೀಯ ಉದ್ದೇಶವೆಂದರೆ ಜಾ[...] ತಾರತಮ್ಯದ ಪದ್ಧತಿ ಹಾಗೇ ಉಳಿಯಬೇ[...] ಎಂಬುದು. ಆದರೆ ಸಹಜ ಪ್ರೇಮಕ್ಕೆ ಹೃದ[...] ಬೆಸುಗೆಗೆ ಸೀಮೆ ಇರಲು ಹೆ[...] ಸಾಧ್ಯ......?

ನಾವಿನ್ನೂ ಮದ್ದೂರ[...] ಅಲೆದಾಡುತ್ತಿದ್ದೆವು. ಪಕ್ಕದ ಹಳ್ಳಿ[...] ಯುವಕನೊಬ್ಬ ಆಬಲವಾ[...] ಪ್ರಕರಣದ ಬಗ್ಗೆ ತುಂಬ ಭಯದಿಂ[...] ಮಾತನಾಡುತ, "ಸುವರ್ಣಾ[...] ಹೊಡೆದು ನೇಣು ಹಾಕಿ ಸಾಯಿಸಿದ್ದಕ್ಕೆ ಅವ[...] ಜಾತಿ ಜನ ಹೆತ್ತವರಿಗೆ ಶಹಬ್ಬಾಷ್‌ಗಿ[...] ಕೊಡುತ್ತಿರುವರು" ಎಂದು ಹೇಳಿದನ[...] ಇದಕ್ಕಿಂತಲೂ ವಿಕೃತ ಮನೋಭಾವ ಬೇ[...] ಇರಬಹುದೇ.....? ಒಂದು ವೇಳೆ ತಪ್ಪಿತಸ್ಥರನ[...] ಶಿಕ್ಷಿಸುವಲ್ಲಿ ಪ್ರಭುತ್ವ ಮತ್ತು ಪ್ರಜಾಪ್ರಭುತ್ವ ವ್ಯವ[...] ಹಿಂದೇಟು ಹಾಕಿದರೆ [...] ಸಮಾಜ ಎಲ್ಲಿಗೆ ಹೋಗಬಹುದು[...] ದಲಿತರನ್ನು, ಮಹಿಳೆಯರನ್ನು[...] ಬಡವರನ್ನು ಎಲ್ಲಾ ಹಕ್ಕುಗಳಿಂದ ವಂಚಿಸಿ ದಬ್ಬಾಳಿಕೆಯ ತಾಂಡವ ನೃತ್ಯ ನಡೆಯುವುದಿಲ್ಲವೇ? ವಿಜ್ಞಾನ-ತಂತ್ರಜ್ಞಾನದಲ್ಲಿ ಮುಂದುವರೆಯುತ್ತಿದ್ದರೂ ಮಾನಸಿಕ ಅವೈಜ್ಞಾನಿಕತೆ-ಮೌಢ್ಯಗಳು ಹಾಗೇ ಉಳಿಯುತ್ತವೆಯಲ್ಲವೇ? ಇದು ನಾಡಿನ ನಿಜವಾದ ಅಭಿವೃದ್ಧಿಗೆ ಮಾರಕ. ಆಯ್ಕೆಯ ಹಕ್ಕೆನ್ನುವುದು ನಾಡಿನ ಅಭಿವೃದ್ಧಿಗೆ ತಳಕು ಹಾಕಿಕೊಂಡಿರುತ್ತದೆ.

ಹಾಗೆ ನೋಡಿದರೆ ರಕ್ತ ಸಂಬಂಧಗಳಲ್ಲಿ ಮದುವೆಯಾದರೆ ಅಂಗವೈಕಲ್ಯದ ಮಕ್ಕಳು ಹುಟ್ಟುತ್ತವೆ. ಗಂಡು ಮಗು ಬೇಕೆನ್ನುವುದು, ಸಂಬಂಧ' ಮತ್ತು ಜಾತಿಯೊಳಗೇ ಮದುವೆಯಾಗಬೇಕೆನ್ನುವುದರ ಹಿಂದೆ 'ಆಸ್ತಿ'ಯ ಪ್ರಶ್ನೆ ತಳಕು ಹಾಕಿಕೊಂಡಿರುತ್ತದೆ. ಸಾಮಾಜಿಕ ನೀತಿ-ನಿಯಮಗಳು ರಚನೆಯಾಗಿದ್ದು ಉಳ್ಳವರ ಸಂಪತ್ತು-ಆಸ್ತಿ ಅಧಿಕಾರ ಕಾಪಾಡುವುದಕ್ಕಾಗಿ. ಆದ್ದರಿಂದಲೇ ಸಾಮಾಜಿಕ ಸನಾತನ ನಿಯಮಗಳು ಮುರಿದಾಗ ಆ ಮೌಲ್ಯಗಳು ಅಮಾನುಷವಾಗಿ ಎರಗುತ್ತವೆ. ಆಗ ಬಲಿಯಾಗುವುದು ಮಹಿಳೆ, ಕೆಳ ಜಾತಿಯವರು ಮತ್ತು ಬಡವರು. ಆಬಲವಾಡಿಯಲ್ಲಿ ನಡೆದದ್ದೂ ಇದೇನೇ. . ತುಸು ನೆಮ್ಮದಿಯ ಸಂಗತಿ ಎಂದರೆ ಸಮಾಜದ ಪ್ರಜ್ಞಾವಂತರು ಇಂಥ ಪ್ರಕರಣಗಳಿಗೆ ಸ್ಪಂದಿಸುತ್ತಿರುವುದು. ಆದರೆ ಮಹಿಳಾ ಆಯೋಗ ಮೌನವಾಗಿರುವುದೇಕೆ.....?

(ನಿಯೋಗದ ಭೇಟಿಯ ವಿವರ ಪುಟ 6 ರಲ್ಲಿ)

JANASHAKTHI KANNADA VARA PATRIKE: Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12, 18th Cross, S.R.Nagar, BANGALORE - 560027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor: S.Y.GURUSHANTH